
Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ 18 | ಸಂಚಿಕೆ–1 | ಜನವರಿ 1–7, 2024 | ಪುಟ 16 | ರೂ. 10/–
Volume-18 | Issue-1 | January 1-7, 2024 | Pages:16 | Price: 10/-



2024

ದೇಶ ಕಾಣಲಿದೆ ಪ್ರಜಾಪ್ರಭುತ್ವದ ಮಹಾಸಮರ


ದುಬೈ ಪರಿಸರ ಸಮ್ಮೇಳನ: ಹವಾಮಾನ ಬದಲಾವಣೆಯ ಖಾಯಂ ಅಪಾಯ

COP28 UAE



ಸತ್ಯ ಹೊರಗಿಡುತ್ತಿರುವ ಬಿಜೆಪಿ ನಾಯಕರು

ಉಡುಪಿ ಎಂಬುದು ಉಡುಪಿಯಾಗಿ ಉಳಿದಿದೆಯೇ?



‘ಮಹಿಳಾ–ನೇತೃತ್ವದ ಅಭಿವೃದ್ಧಿ’ಯೋ ಅಥವ ಕಾರ್ಪೊರೇಟ್–ನೇತೃತ್ವದ ಅಭಿವೃದ್ಧಿಯೋ?

‘ಸುಧಾರಣೆ’ ಎಂಬ ಪದವು ಬಂಡವಾಳಶಾಹಿಯ ಲಾಭವನ್ನು ಗರಿಷ್ಟಗೊಳಿಸುವ ಮಾದರಿಗಳಿಗೆ ಮುಖವಾಡವಾಗಿದ್ದಂತೆಯೇ, ‘ಮಹಿಳಾ–ನೇತೃತ್ವದ ಅಭಿವೃದ್ಧಿ’ ಎಂಬುದು ಮಹಿಳೆಯರ ಅಭಿವೃದ್ಧಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳಲ್ಲಿ ಸರ್ಕಾರದ ಹೂಡಿಕೆ ಕಡಿಮೆಯಾಗುತ್ತಿರುವ ಪ್ರವೃತ್ತಿಯ ವಾಸ್ತವತೆಯನ್ನು ಮರೆಮಾಡುತ್ತದೆ. ಕೇಂದ್ರ ಸರ್ಕಾರವು ತನ್ನ ಆರ್ಥಿಕ ನೀತಿಗಳನ್ನು ಜಾರಿಗೊಳಿಸುವ ಕೆಲಸವನ್ನು ದೇಶದ ಶೇಕಡ 1 ಶ್ರೀಮಂತರಿಗೆ ವಹಿಸಿದೆ. ದೇಶದ ಶೇ. 40ರಷ್ಟು ಸಂಪತ್ತನ್ನು ಅವರು ನಿಯಂತ್ರಿಸುತ್ತಿರುವಾಗ ಇಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಪೊರೇಟ್ ನೇತೃತ್ವದ ಅಭಿವೃದ್ಧಿಯೇ ಹೊರತು ಖಂಡಿತವಾಗಿಯೂ ಮಹಿಳಾ- ನೇತೃತ್ವದ ಅಭಿವೃದ್ಧಿಯಲ್ಲ.

ಬೃಂದಾ ಕಾರಟ್

ಇತ್ತೀಚೆಗೆ ದೆಹಲಿಯಲ್ಲಿ ನಡೆದ ಜಿ–20 ಶೃಂಗಸಭೆಯು "ಲಿಂಗ ಸಮಾನತೆ ಮತ್ತು ಎಲ್ಲಾ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸಬಲೀಕರಣ"ಎಂಬ ವಿಭಾಗವನ್ನು ಒಳಗೊಂಡಿರುವ ಘೋಷಣೆಯನ್ನು ಅಂಗೀಕರಿಸಿತು. ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರ "ನಾಯಕತ್ವ ಮತ್ತು ಸಮಾನ ಭಾಗವಹಿಸುವಿಕೆಯ" ಪ್ರಾಮುಖ್ಯತೆಯನ್ನು ಪುನರುಚ್ಚರಿಸುವ 17 ಷರತ್ತುಗಳ ಮೂಲಕ, ಘೋಷಣೆಯು "ಮಹಿಳಾ ಸಬಲೀಕರಣದ ಮೇಲೆ ಕಾರ್ಯನಿರತ ಗುಂಪನ್ನು" ಸ್ಥಾಪಿಸಲು ನಿರ್ಧರಿಸಿತು.

ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲಿನ ನಿರಂತರವಾದ ತಾರತಮ್ಯದ ಜಾಗತಿಕ ವಾಸ್ತವವನ್ನು ಗಮನಿಸಿದರೆ ಇದು ಸ್ವಾಗತಾರ್ಹ. ಆದಾಗ್ಯೂ, ಇದರಲ್ಲಿ ಹೊಸತೇನಿದೆ ಎಂಬ ಭಾವನೆ ಬರುವುದು ಸಹಜ. ಏಕೆಂದರೆ ಹಿಂದೆ ರೂಪುಗೊಂಡ ಎಲ್ಲಾ "ಕಾರ್ಯನಿರತ ಗುಂಪುಗಳ" ಶಿಫಾರಸುಗಳು ಕಾರ್ಯರೂಪಕ್ಕೆ ಬಂದಿಲ್ಲ. ಉದಾಹರಣೆಗೆ, "ಸುಸ್ಥಿರ ಅಭಿವೃದ್ಧಿ ಗುರಿಗಳು" ಎಂಬ ಗುಂಪನ್ನು ಲಿಂಗ ತಾರತಮ್ಯವನ್ನು ಮುಚ್ಚುವ ನಿರ್ದಿಷ್ಟ ಗುರಿಯೊಂದಿಗೆ ಸ್ಥಾಪಿಸಲಾಗಿದೆ. ಆದಾಗ್ಯೂ, ಮೇಲೆ ತಿಳಿಸಲಾದ ಘೋಷಣೆಯು "2030 ರತ್ತ ಮಧ್ಯದ ವೇಳೆಗೆ, ಸುಸ್ಥಿರ ಅಭಿವೃದ್ಧಿ ಗುರಿಗಳ ಪ್ರಗತಿಯು ಗುರಿಯ 12 ಪ್ರತಿಶತವನ್ನು ಮೀರುವುದಿಲ್ಲ" ಎಂದು ಒಪ್ಪಿಕೊಳ್ಳುತ್ತದೆ.

ಲಿಂಗ ಸಮಾನತೆಯ ವಿಭಾಗವು ಹೇಳುತ್ತದೆ: “ನಾವು ಮಹಿಳಾ–ನೇತೃತ್ವದ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತೇವೆ. ಜಾಗತಿಕ ಸವಾಲುಗಳನ್ನು ಒಳಗೊಂಡಂತೆ ಮತ್ತು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಸಕ್ರಿಯ ಪಾಲ್ಗೊಳ್ಳುವವರಾಗಿ ಕೊಡುಗೆ ನೀಡುವಲ್ಲಿ ನಿರ್ಧಾರ ತೆಗೆದುಕೊಳ್ಳುವವರಾಗಿ ಮಹಿಳೆಯರ ಪೂರ್ಣ, ಸಮಾನ, ಪರಿಣಾಮಕಾರಿ ಮತ್ತು ಅರ್ಥಪೂರ್ಣ ಭಾಗವಹಿಸುವಿಕೆಯನ್ನು ಉತ್ತೇಜಿಸಲು ನಾವು ಬದ್ಧರಾಗಿದ್ದೇವೆ.”

‘ಮಹಿಳಾ–ನೇತೃತ್ವದ ಅಭಿವೃದ್ಧಿ’ ಎಂದರೇನು?

"ಮಹಿಳಾ–ನೇತೃತ್ವದ ಅಭಿವೃದ್ಧಿ" ಎಂಬ



ನುಡಿಗಟ್ಟು ನಿಜಕ್ಕೂ ಗಮನಾರ್ಹವಾಗಿದೆ. ಈ ನುಡಿಗಟ್ಟು ಭಾರತ ಸರ್ಕಾರದ ಆವಿಷ್ಕಾರವಾಗಿದೆ. ಅದೀಗ ಇದನ್ನು ಬಹಳವಾಗಿ ಬಳಸುತ್ತಿದೆ. ಆದರೆ ಇದರ ನಿಜವಾದ ಅರ್ಥವೇನು ಎಂಬುದಕ್ಕೆ ಅದರ 17 ಕಲಮುಗಳಲ್ಲಿ ಯಾವುದೇ ವಿವರಣೆ ಸಿಗುವುದಿಲ್ಲ. ಇದು ಕೇವಲ ಶಬ್ದಾರ್ಥದ ಪ್ರಶ್ನೆಯಲ್ಲ. “ಮಹಿಳಾ–ನೇತೃತ್ವದ ಅಭಿವೃದ್ಧಿ” ಎಂಬ ಪದವನ್ನು ಬಳಸುವಾಗ, ಈ ಅಭಿವೃದ್ಧಿ ಮಾದರಿ ಬೇರೆ ಮಹಿಳಾ–ಅಭಿವೃದ್ಧಿ ಮಾದರಿಗಳಿಗಿಂತ ಹೇಗೆ ಭಿನ್ನವಾಗಿದೆ ಎಂದು ವಿವರಿಸಲು ನಾಯಕರು ಜವಾಬ್ದಾರರಾಗಿರುತ್ತಾರೆ. ವಾಸ್ತವವಾಗಿ, ಅನೇಕ ಸ್ವಯಂ ಘೋಷಿತ ‘ಪ್ರಜಾಪ್ರಭುತ್ವ’ಗಳಲ್ಲಿ (ವಿಶೇಷವಾಗಿ ಪಶ್ಚಿಮದಲ್ಲಿ) ಪ್ರಚಲಿತದಲ್ಲಿರುವ ’ಅಭಿವೃದ್ಧಿ ಮಾದರಿಗಳು’ ದೇಶಗಳ ನಡುವೆ, ದೇಶಗಳಲ್ಲಿ ಶ್ರೀಮಂತ ಮತ್ತು ಬಡವರ ನಡುವೆ ಮತ್ತು ಪುರುಷರು ಮತ್ತು ಮಹಿಳೆಯರ ನಡುವೆ ಹೊಲಸು ಅಸಮಾನತೆಗಳಿಗೆ ಕಾರಣವಾಗಿವೆ.

ಈ ಮಾದರಿಯ ಮುಖ್ಯಾಂಶ ಅದೇ ಹಳಸಲು ‘ಕೆಳಗೆ ತೊಟ್ಟಿಕ್ಕುವ’ ಸಿದ್ಧಾಂತ, ಅಂದರೆ ಬಹುತೇಕ ಎಲ್ಲಾ ದೊಡ್ಡ ಬಂಡವಳಿಗರು ಆ ದೇಶಗಳು ನೀಡುವ ತೆರಿಗೆ ರಿಯಾಯಿತಿಗಳು, ಬ್ಯಾಂಕ್‌ಗಳಿಂದ ಪಡೆದ ಸಾಲ ಮನ್ನಾ, ಸಬ್ಸಿಡಿ ಬೆಲೆಯಲ್ಲಿ ಭೂಮಿ ಖರೀದಿ ಮತ್ತು ಹೆಚ್ಚಿನ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಇತ್ಯಾದಿಗಳಿಗೆ ಕಾರಣವಾಗುತ್ತದೆ ಎಂಬ ಹೆಸರಿನಲ್ಲಿ ದೇಶಗಳ ನಡುವೆ ಹಣಕಾಸು ಬಂಡವಾಳವನ್ನು ಮುಕ್ತವಾಗಿ ಸಾಗಿಸುವ ಎಲ್ಲಾ ಪ್ರಯೋಜನಗಳನ್ನು ಅನುಭವಿಸುತ್ತಿವೆ. ಸರ್ಕಾರದ ನಿಯತ್ರಣಗಳಿಲ್ಲದಿದ್ದರೆ ಅದೇ ಉತ್ತಮ ಆಡಳಿತ’ ಎಂಬ ಮಾದರಿಯು ಎಲ್ಲ ಸರ್ಕಾರೀ ನಿಯಂತ್ರಣಗಳನ್ನು ಕಳಚಿ ಹಾಕಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಿದೆ, ಆಯಕಟ್ಟಿನ ಉದ್ದಿಮೆಗಳನ್ನು ಖಾಸಗೀಕರಿಸಿದೆ. ಇವೆಲ್ಲವೂ ‘ಸುಧಾರಣೆ’ಯ ಹೆಸರಿನಲ್ಲಿ ನಡೆದಿದೆ ಎಂಬುದು ನಮಗೆ ಗೊತ್ತಿದೆ. ಜಿ–20 ಶೃಂಗಸಭೆಯ ಘೋಷಣೆಯು ಇದಕ್ಕೇ ಬದ್ದತೆಯನ್ನು ದೃಢಪಡಿಸಿದೆ. "ಅಭಿವೃದ್ಧಿ ಯೋಜನೆಗಳನ್ನು ಚಾಲನೆ ಮಾಡುವಲ್ಲಿ ಮತ್ತು ಸುಸ್ಥಿರ ಆರ್ಥಿಕ ಪರಿವರ್ತನೆಯಲ್ಲಿ ಖಾಸಗಿ ವಲಯದ ಪ್ರಮುಖ ಕೊಡುಗೆಯನ್ನು ನಾವು ಗುರುತಿಸುತ್ತೇವೆ" ಎಂದು ಅದು ಹೇಳಿದೆ. ಅಭಿವೃದ್ಧಿಯ ಸ್ಥೂಲ ಮಾದರಿಯು ಇದೇ ಆಗಿದ್ದರೆ, ಮಹಿಳಾ–ನೇತೃತ್ವದ ಅಭಿವೃದ್ಧಿ ಎಂಬುದು ಇದಕ್ಕೆ ಎಲ್ಲಿ ಹೊಂದಿಕೊಳ್ಳುತ್ತದೆ?

ಕೇಂದ್ರ ಸರ್ಕಾರದ ಪ್ರೆಸ್ ಇನ್ಫಾರ್ಮೇಶನ್ ಬ್ಯೂರೋ (ಪಿಐಬಿ) ಮಾರ್ಚ್ 7 ರಂದು "ಮಹಿಳಾ ಅಭಿವೃದ್ಧಿಯಿಂದ ಮಹಿಳಾ- ನೇತೃತ್ವದ ಅಭಿವೃದ್ಧಿಗೆ" ಶೀರ್ಷಿಕೆಯ ಪಟ್ಟಿಯನ್ನು ಬಿಡುಗಡೆ ಮಾಡಿತು, ಮಹಿಳೆಯರಿಗೆ ಪ್ರಯೋಜನಕಾರಿಯಾದ ಸರ್ಕಾರದ ಯೋಜನೆಗಳನ್ನು ಉಲ್ಲೇಖಿಸಿ. ‘ಸುಧಾರಣೆ’ ಎಂಬ ಪದವು ಬಂಡವಾಳಶಾಹಿಯ ಲಾಭವನ್ನು ಗರಿಷ್ಟಗೊಳಿಸುವ ಮಾದರಿಗಳಿಗೆ ಮುಖವಾಡ ವಾಗಿರುವಂತೆಯೇ, ‘ಮಹಿಳಾ–ನೇತೃತ್ವದ ಅಭಿವೃದ್ಧಿ’ ಎಂಬುದು ಮಹಿಳೆಯರ ಅಭಿವೃದ್ಧಿಗೆ ಉದ್ದೇಶಿಸಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳಲ್ಲಿ ಸರ್ಕಾರದ ಹೂಡಿಕೆ ಕಡಿಮೆಯಾಗುತ್ತಿರುವ ಪ್ರವೃತ್ತಿಯ ವಾಸ್ತವತೆಯನ್ನು ಮರೆಮಾಡುತ್ತದೆ.

ಬಜೆಟ್ ನಲ್ಲಿ ಇಳಿಕೆ

ಮಹಿಳೆಯರ ಹೋರಾಟಗಳ ಫಲವಾಗಿ 2005–06ರಲ್ಲಿ ಲಿಂಗ ಬಜೆಟ್ ಎಂಬುದು ಆರಂಭವಾಯಿತು. ಲಿಂಗ ತಾರತಮ್ಯದ ಬಹು ಸ್ತರಗಳನ್ನು ಪರಿಹರಿಸಲು ಬಜೆಟಿನಲ್ಲಿ ರಾಷ್ಟ್ರೀಯ ಸಂಪನ್ಮೂಲಗಳಲ್ಲಿ ಒಂದು ಪಾಲನ್ನು ಮೀಸಲಿಡುವುದು ಇದರ ಉದ್ದೇಶ. ಇದು ಎರಡು ಭಾಗಗಳನ್ನು ಹೊಂದಿದೆ. ಮೊದಲ ಭಾಗ, 100 ಪ್ರತಿಶತ ಮಹಿಳಾ ಯೋಜನೆಗಳನ್ನು ಒಳಗೊಂಡಿರುತ್ತದೆ. ಎರಡನೆಯ ಭಾಗವೆಂದರೆ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ವೆಚ್ಚವು ಮಹಿಳೆಯರಿಗಾಗಿದೆ. ಮಹಿಳಾ–ನೇತೃತ್ವದ ಅಭಿವೃದ್ಧಿಗೆ ಬಂದಾಗ, ಲಿಂಗ ಬಜೆಟ್‌ನ ಒಟ್ಟು ಮೊತ್ತವನ್ನು ಮಹಿಳೆಯರಿಗೆ ಗಣನೀಯವಾಗಿ ಹೆಚ್ಚು ಮೀಸಲಿಡಬೇಕು. ಆದರೆ ವಾಸ್ತವದಲ್ಲಿ ಈ ಎರಡೂ ಕ್ಷೇತ್ರಗಳಲ್ಲಿ ವ್ಯತಿರಿಕ್ತ ಪ್ರವೃತ್ತಿ ಚಾಲ್ತಿಯಲ್ಲಿದೆ. 2023–24ರ ಒಟ್ಟು ಲಿಂಗ ಬಜೆಟ್ ಅನ್ನು ಕಳೆದ ವರ್ಷ ಶೇಕಡಾ 5.2 ರಿಂದ ಶೇಕಡಾ 5 ಕ್ಕೆ ಇಳಿಸಲಾಗಿದೆ. ಸರಾಸರಿ, ಲಿಂಗ ಬಜೆಟ್ ಅನ್ನು ಪರಿಚಯಿಸಿದಾಗಿನಿಂದ ಯಾವುದೇ ಗಮನಾರ್ಹ ಹೆಚ್ಚಳವನ್ನು ನೀಡಲಾಗಿಲ್ಲ. ಇದು ಯಾವಾಗಲೂ ಶೇ. 4 ಮತ್ತು ಶೇ. 6 ರ ನಡುವೆ ಇರುತ್ತದೆ.

ಕಳವಳಕಾರಿ ಸಂಗತಿಯೆಂದರೆ, 2023–24ರಲ್ಲಿ "ಮಹಿಳಾ–ನೇತೃತ್ವದ ಅಭಿವೃದ್ಧಿ" ಎಂಬ ಪದಗುಚ್ಛವನ್ನು ಪರಿಚಯಿಸಿದಾಗ, ಲಿಂಗ ಬಜೆಟ್‌ನ ಮೊದಲ ಭಾಗದಲ್ಲಿ ವೆಚ್ಚವು ಅತ್ಯಂತ ಕಡಿಮೆಯಾಗಿದ್ದು, ಒಟ್ಟು ಮೊತ್ತದ ಸುಮಾರು ಶೇ. 39 ಮತ್ತು ಎರಡನೇ ಭಾಗದಲ್ಲಿ ಒಟ್ಟು ಶೇ. 61 ರಷ್ಟಿತ್ತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಈಗಾಗಲೇ ಕಡಿಮೆ ಬಜೆಟ್ ಹಂಚಿಕೆಯಲ್ಲಿ ಕೇವಲ ಶೇ. 40 ಅನ್ನು ಎಲ್ಲಾ ಮಹಿಳಾ ಯೋಜನೆಗಳಿಗೆ ಮೀಸಲಿಡಲಾಗಿದೆ.



ಆರ್ಥಿಕ ಸ್ವಾತಂತ್ರ್ಯ

ಮಹಿಳೆಯರ ಪ್ರಗತಿಗೆ ಪೂರ್ವಾಪೇಕ್ಷಿತವೆಂದು ಗುರುತಿಸಲ್ಪಟ್ಟ ನಿರ್ಣಾಯಕ ವಿಷಯ ಎಂದರೆಅವರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವುದು. ಆದರೆ, ಭಾರತದಲ್ಲಿ ಕಾಯಂ ವೇತನ ಪಡೆಯುವವರ ಸಂಖ್ಯೆ ಇಳಿಮುಖವಾಗಿದೆ. ಎನ್‌ಎಸ್‌ಒ ದ ‘ಆವರ್ತಕ ಕಾರ್ಮಿಕ ಬಲ ಸಮೀಕ್ಷೆ’(ಪಿಎಲ್‌ಎಫ್‌ಎಸ್) ವಿಶ್ಲೇಷಣೆಯ ಪ್ರಕಾರ, ನಿಯಮಿತ ಕೂಲಿ ಕೆಲಸದಲ್ಲಿ ಮಹಿಳೆಯರ ಪಾಲು 2018–2019ರಲ್ಲಿ 21.9 ಪ್ರತಿಶತದಿಂದ 2022–2023ರಲ್ಲಿ ಸಾಂಕ್ರಾಮಿಕ ನಂತರದ ಅವಧಿಯಲ್ಲಿ ಕೇವಲ 15.9 ಪ್ರತಿಶತಕ್ಕೆ ಕುಸಿದಿದೆ ಎಂದು ಅಸಮಾನ ಪರಿಣಾಮವನ್ನು ಎತ್ತಿ ತೋರಿಸುತ್ತದೆ. ಅನೌಪಚಾರಿಕ ವಲಯದಲ್ಲಿ ತೊಡಗಿಸಿಕೊಂಡಿರುವ ಸುಮಾರು 95 ಪ್ರತಿಶತ ಮಹಿಳೆಯರಿಗೆ ಉದ್ಯೋಗ ಅಥವಾ ಸುರಕ್ಷಿತ ಆದಾಯವಿಲ್ಲ. ಹೆಚ್ಚಿನ ಮಹಿಳೆಯರು ಕೇಂದ್ರ ಸರ್ಕಾರದಲ್ಲಿ ಸ್ಕೀಮ್ ವರ್ಕರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಸುಮಾರು ಒಂದು ಕೋಟಿ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಮಧ್ಯಾಹ್ನದ ಬಿಸಿಯೂಟದ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದಾರೆ.

ಆದಾಗ್ಯೂ ಈ ಸೇವಾ ಆಧಾರಿತ ಯೋಜನೆಗಳಿಗೆ ಕಷ್ಟಕರವಾದ ಕೆಲಸ ಕಾರ್ಯಗಳ ಹೊರತಾಗಿಯೂ, ಈ ಮಹಿಳೆಯರು ಅತ್ಯಂತ ಶೋಷಣೆಗೆ ಒಳಗಾಗಿದ್ದಾರೆ. ‘ಭತ್ಯೆ’ಎಂಬ ಹೆಸರಿನಲ್ಲಿ ಕನಿಷ್ಠ ಕೂಲಿಗಿಂತ ತೀರಾ ಕಡಿಮೆ ಕೂಲಿ ಪಡೆಯುತ್ತಿದ್ದಾರೆ. ಅವರನ್ನು ಸರ್ಕಾರಿ ನೌಕರರೆಂದು ಗುರುತಿಸಿಲ್ಲ. ಮೇಲಿನ ಅವಧಿಗೆ ಪಿಎಲ್‌ಎಫ್‌ಎಸ್ ಸಮೀಕ್ಷೆಯ ಪ್ರಕಾರ, 2018–19 ರಲ್ಲಿ ಕೃಷಿ ಉದ್ಯಮದಲ್ಲಿ ಮಹಿಳೆಯರ ಪಾಲು ಶೇ. 55.3 ರಷ್ಟಿತ್ತು ಮತ್ತು 2022–23 ರಲ್ಲಿ ಶೇ. 64.3 ಕ್ಕೆ ಏರಿಕೆಯಾಗಿದೆ. ಇದು ಮುಖ್ಯವಾಗಿ ಕುಟುಂಬದ ಜಮೀನುಗಳಲ್ಲಿ ಕೂಲಿ ಕೊಡದ ಕೆಲಸವನ್ನು ಒಳಗೊಂಡಿದೆ.

ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಮಂಜೂರು ಮಾಡಬೇಕಾದ ಮೊತ್ತವನ್ನು ತೀವ್ರವಾಗಿ ಕಡಿತಗೊಳಿಸಿದೆ. ಹಲವು ರಾಜ್ಯಗಳಲ್ಲಿ ಈ ಯೋಜನೆಯಡಿ ಶೇ.50ರಿಂದ ಶೇ.80ರಷ್ಟು ಕೆಲಸ ಮಾಡುತ್ತಿರುವ ಮಹಿಳೆಯರ ಮೇಲೆ ಇದು ನಕಾರಾತ್ಮಕ ಪರಿಣಾಮ ಬೀರಿದೆ.

ವಾಸ್ತವದಲ್ಲಿ ಮಹಿಳೆಯರು ಅದರಲ್ಲೂ ದಲಿತ ಮತ್ತು ಬುಡಕಟ್ಟು ಮಹಿಳೆಯರು ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳ ಪರಿಣಾಮಗಳನ್ನು ನೇರವಾಗಿ ಎದುರಿಸುತ್ತಿದ್ದಾರೆ. ಏಕೆಂದರೆ ಕೇಂದ್ರ ಸರ್ಕಾರವು ತನ್ನ ಆರ್ಥಿಕ ನೀತಿಗಳನ್ನು ಜಾರಿಗೊಳಿಸುವ ಕೆಲಸವನ್ನು ದೇಶದ ಶೇಕಡ 1 ಶ್ರೀಮಂತರಿಗೆ ವಹಿಸಿದೆ. ದೇಶದ ಶೇ. 40ರಷ್ಟು ಸಂಪತ್ತನ್ನು ಅವರು ನಿಯಂತ್ರಿಸುತ್ತಾರೆ.

ಹಾಗಾಗಿ, ಇಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಪೊರೇಟ್ ನೇತೃತ್ವದ ಅಭಿವೃದ್ಧಿಯೇ ಹೊರತು ಖಂಡಿತವಾಗಿಯೂ ಮಹಿಳಾ–ನೇತೃತ್ವದ ಅಭಿವೃದ್ಧಿಯಲ್ಲ. ●

ಸಂಪಾದಕೀಯ

ಧಾರ್ಮಿಕತೆಯ ಸೋಗಿನ ರಾಜಕಾರಣ

2024 ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮಮಂದಿರದ ಉದ್ಘಾಟನೆ ಮತ್ತು ರಾಮನ ಶಿಲಾ ಮೂರ್ತಿ ಪ್ರತಿಷ್ಠಾಪನೆಯು ಒಂದು ಖಾಸಗಿ ಧಾರ್ಮಿಕ ಕಾರ್ಯಕ್ರಮವಾಗುವ ಬದಲು ರಾಜಕೀಯ ಲಾಭದ ಸಂವಿಧಾನದ ಧರ್ಮನಿರಪೇಕ್ಷತೆಯ ವಿರೋಧಿ ಕಾರ್ಯಕ್ತಮವಾಗಿ ರೂಪಾಂತರಗೊಳ್ಳುತ್ತಿದೆ. ಇಲ್ಲಿ ಮಂದಿರದ ಉಸ್ತುವಾರಿ ಮಾಡುವ ಪ್ರತಿಷ್ಠಾನವನ್ನು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ತನ್ನ ಸಂಕುಚಿತ ರಾಜಕೀಯ ಉದ್ದೇಶಗಳಿಗೆ ಅನುಗುಣವಾಗಿ ಬಳಸುತ್ತಿದೆ, ಬಳಕೆಗೆ ತೆರೆದುಕೊಂಡಿದೆ. ಬಾಬ್ರಿ ಮಸೀದಿ ಇದ್ದ ಜಾಗದಲ್ಲಿಯೇ ರಾಮ ಹುಟ್ಟಿದ್ದ ಎನ್ನುವ ವಿವಾದದ ಇತ್ಯರ್ಥಕ್ಕೆ ಐತಿಹಾಸಿಕ ದಾಖಲೆಗಳ ಸಾಕ್ಷ್ಯಗಳ ಅಗತ್ಯಕ್ಕಿಂತ 'ಬಹು ಸಂಖ್ಯಾತರ' ಪೌರಾಣಿಕ ನಂಬಿಕೆಯೇ ಆಧಾರವಾಗಿ ಹಲವು ವೈರುದ್ಯ ಅಂಶಗಳ ನ್ಯಾಯಾಲಯದ ತೀರ್ಪಿನ್ನು ಅನುಸರಿಸಿ 'ಭವ್ಯ ಮಂದಿರ' ನಿರ್ಮಾಣ ಪೂರ್ವ 'ಯೋಜನೆ'ಯಂತೆ ಆಗಿದೆ. ಈ ಕಾರ್ಯಕ್ರಮದಲ್ಲಿ ಭಾರತದ ಪ್ರಧಾನಿ, ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಕೇವಲ ಭಾಗವಹಿಸುವುದಲ್ಲ, ಬದಲಾಗಿ ಎರಡೂ ಸರಕಾರಗಳ ಪ್ರಾಯೋಜಿತ ಕಾರ್ಯಕ್ರಮ ಎನ್ನುವಂತೆ ಮಾಡುತ್ತಿವೆ. ವಿವಿಧ ರಾಜಕೀಯ ಪಕ್ಷಗಳ ಮುಖಂಡರನ್ನು ಆಹ್ವಾನಿಸುವ ಮೂಲಕ ಬಿಜೆಪಿಯ ರಾಜಕಾರಣಕ್ಕೆ ಅಧಿಕೃತ ಅಂಗೀಕಾರವನ್ನೂ ಪಡೆಯಲು ಇಚ್ಚಿಸಿದೆ. ರಾಮಜನ್ಮ ಭೂಮಿ–ಬಾಬ್ರಿ ಮಸೀದಿಯ ವಿವಾದವನ್ನು ಬಳಸಿಕೊಂಡ ಬಗೆ, ನ್ಯಾಯಾಲಯದ ತೀರ್ಪಿನ ಕುರಿತು ತೀವ್ರ ಭಿನ್ನಾಭಿಪ್ರಾಯಗಳು ಇರಬಹುದಾದರೂ ಮಂದಿರ, ವಿಗ್ರಹ ಸ್ಥಾಪನೆಯಂತಹ ಕಾರ್ಯಗಳು ಧಾರ್ಮಿಕ ಸ್ವರೂಪದ್ದಾಗಿವೆ. ಯಾವುದೇ ಧಾರ್ಮಿಕ ನಂಬಿಕೆ, ವಿಧಿ ವಿಧಾನಗಳನ್ನು ಗೌರವಿಸುವಾಗ ಅದು ಸರ್ಕಾರವೊಂದರ ಕಾರ್ಯಕ್ರಮದ ಭಾಗವಾಗಕೂಡದು. ಯಾವುದೇ ಮತಧರ್ಮದ ಆಚರಣೆಯ ಹಕ್ಕನ್ನು ಸರಕಾರವೊಂದು ಗೌರವಿಸುವಾಗಲೇ ಮತಧರ್ಮ ಅದರ ಲಕ್ಷಣ ಅಲ್ಲ, ಆಗಕೂಡದು. ಆದರೆ ಇಲ್ಲಿ ಬಿಜೆಪಿ ಈ ಮೂಲಭೂತ ಅಂಶವನ್ನೇ ಉಲ್ಲಂಘಿಸಿದೆ.

ಅಷ್ಟು ಮಾತ್ರವೇ ಅಲ್ಲ, ಈ ಸಮಾರಂಭವನ್ನು ಸಂಘಪರಿವಾರ ದೇಶದಾದ್ಯಂತ ತನ್ನ ಕಾರ್ಯಸೂಚಿಗೆ ಬಳಸಿಕೊಳ್ಳಲು ಅತ್ಯಂತ ವ್ಯಾಪಕವಾಗಿ ತೊಡಗಿದೆ. ಜನತೆಯ ಧಾರ್ಮಿಕ ಭಾವನೆಗಳನ್ನು ತನ್ನ ಮತೀಯವಾದಕ್ಕೆ ಬಳಸಲು ಮುಂದಾಗಿದೆ. ಜನರ ನಡುವೆ ಪ್ರಚಾರ, ಅವರನ್ನು ಸೆಳೆಯುವ ಹಲವು ಕಾರ್ಯಕ್ರಮಗಳನ್ನು ಕೈಗೊಂಡಿರುವಾಗಲೇ ವ್ಯವಸ್ಥಿತವಾಗಿ ಕೋಮುದ್ವೇಷ ಪಸರಿಸುವ, ಅಶಾಂತಿ ಹಬ್ಬಿಸುವ ಉದ್ರೇಕಕಾರಿ ಕೃತ್ಯಗಳಲ್ಲಿ ತೊಡಗಿದೆ. ಅದಕ್ಕಾಗಿ 'ಬಾಬಾ ಬುಡನ್ ಸ್ವಾಮಿ'ಯಿಂದ ಪ್ರತ್ಯೇಕಿಸಿ 'ದತ್ತ ಜಯಂತಿ'ಯನ್ನು ಮಲೆನಾಡಿನಲ್ಲಿ, ಇತ್ತೀಚೆಗೆ ಆರಂಭಿಸಿರುವ ಅಂಜನಾದ್ರಿಯಲ್ಲಿ ಮಾಲೆ ವಿಸರ್ಜನೆಯನ್ನು, ವಿಶೇಷವಾಗಿ ಶ್ರಿರಂಗಪಟ್ಟಣದಲ್ಲಿ ಜುಮ್ಮಾ ಮಸೀದಿಯು ಆಂಜನೇಯನ ಗುಡಿ ಎನ್ನುವ ಹೊಸ ವಿವಾದ ಹುಟ್ಟುಹಾಕಿ ಆಂಜನೇಯ ಜಯಂತಿಯನ್ನು ಮತೀಯ ದ್ವೇಷ ಕಿಚ್ಚು ಹಚ್ಚಲು ಯತ್ನಿಸಿತು. ಕರಾವಳಿಯ ಕುಖ್ಯಾತಿ ಕಲ್ಲಡ್ಕ ಪ್ರಭಾಕರಭಟ್ಟರಂಥವರು ಅಲ್ಲಿಯ ಕಾರ್ಯಕ್ರಮದಲ್ಲಿ ಭಾಗಿಯಾಗಿ ನೇರವಾಗಿ ಕೋಮು ಗಲಭೆ ಸೃಷ್ಟಿಸುವಂಥಹ ಉದ್ರೇಕಕಾರಿ ಮಾತನಾಡಿದ್ದಲ್ಲದೇ ಮುಸ್ಲಿಂ ಮಹಿಳೆಯರ ಬಗ್ಗೆ ಅಶ್ಲೀಲ, ಅವಹೇಳನಕಾರಿ ಮಾತನಾಡಿರುವುದು ಒಂದು ಮತೀಯ ದ್ವೇಷದ ವಾತಾವರಣ ಸೃಷ್ಟಿಸಲೆಂದೇ. ಆದರೆ ಕಲ್ಲಡ್ಕ ಪ್ರಭಾಕರ ಭಟ್ಟರ ಬಂಧಿಸುವುದಿಲ್ಲ ಎಂದು ರಾಜ್ಯ ಸರ್ಕಾರ ಯಾವ ಕಾರಣಗಳನ್ನೂ ನೀಡದೇ ಕೋರ್ಟಿಗೆ ಹೇಳಿರುವುದು ಕಾನೂನು ತನ್ನ ಕೆಲಸ ಮಾಡುವುದನ್ನು ಕಟ್ಟಿ ಹಾಕಿದಂತೆ. ಮಾತ್ರವಲ್ಲ, ಅಂತಹ ಕೃತ್ಯಗಳಿಗೆ ಕುಮ್ಮಕ್ಕು ನೀಡಿದಂತೆ ಆಗುವುದಿಲ್ಲವೇ? ದಕ್ಷಿಣ ಕರ್ನಾಟಕದಲ್ಲಿ ನೆಲೆ ರೂಪಿಸಿಕೊಳ್ಳಲು ಅದೆಷ್ಟೇ ಪ್ರಯತ್ನಿಸಿದ್ದರೂ ಜನತೆ ಅದಕ್ಕೆ ಇಂಬು ಕೊಟ್ಟಿಲ್ಲ. ಆದರೆ ಜಾತ್ಯಾತೀತ ಜನತಾದಳ ತನ್ನ ಸಂದರ್ಭಸಾಧಕ ರಾಜಕೀಯಕ್ಕೆ ಬಿಜೆಪಿಗೆ ಶರಣಾದ ಬದಲಾದ ರಾಜಕೀಯ ಸನ್ನಿವೇಶವನ್ನು ಬಳಸಿ ಸಮಾಜದ ಕೆಳ ಸ್ಥರದಲ್ಲಿ ಆರ್.ಎಸ್.ಎಸ್. ತನ್ನ ನೆಲೆಯನ್ನು ವಿಸ್ತರಿಸುವ ಮೂಲಕ ಬಿಜೆಪಿಗೂ ನೆಲೆಯನ್ನು ಕಲ್ಪಿಸುವ, ಜೆ.ಡಿ.ಎಸ್. ನ ನೆಲೆಯನ್ನೇ ಮತೀಯವಾದಕ್ಕೆ ಪರಿವರ್ತಿಸುವ ಗುರಿಯನ್ನು ಹೊಂದಿರುವುದನ್ನು ಕಾಣಬಹುದು. ದಕ್ಷಿಣ ಕರ್ನಾಟಕ ಆರ್.ಎಸ್.ಎಸ್. ಮತ್ತು ಬಿಜೆಪಿಯ ನೆಲೆಯಾಗಿ ಪರಿವರ್ತನೆಯಾಗುವುದು ಇಡೀ ಕರ್ನಾಟಕಕ್ಕೆ ಒಂದು ಬಹುದೊಡ್ಡದಾದ ಅಪಾಯವನ್ನು ಸಹ ತರಲಿದೆ ೦ಬುದನ್ನು ನೆನಪಿಡಬೇಕು. ಇಂತಹ ವಾತಾವರಣ ಕರ್ನಾಟಕದಲ್ಲಿ ಬೆಳೆಯುವುದು ಮತ್ತು ಅದನ್ನು ರಾಮ ಮಂದಿರದ ಉದ್ಘಾಟನೆಯ ಭೂಮಿಕೆಯಾಗಿ ರೂಪಿಸುವುದು ಮುಂದಿನ ದಿನಗಳಲ್ಲಿ ಈ ಸನ್ನಿವೇಶವನ್ನು ರಾಜಕೀಯ ಲಾಭಕ್ಕೂ ಮತ್ತು ಮೂಲಭೂತವಾಗಿ ಮತೀಯವಾದದ ಬೇರುಗಳನ್ನು ಆಳಗೊಳಿಸಿಕೊಳ್ಳುವ ಸಾಧ್ಯತೆಗಳು ಇವೆ ಎನ್ನುವುದನ್ನು ಗಮನಿಸಬೇಕು. ಇದು ಅತ್ಯಂತ ದೀರ್ಘಕಾಲಿಕ ಪರಿಣಾಮ ಬೀರುವ ವಿಷಯವಾಗಿದೆ.

ಧಾರ್ಮಿಕತೆ, ದೇವರು, ದೈವಗಳನ್ನು ಬಳಸಿಕೊಳ್ಳುವ, ಮೌಢ್ಯತೆಯನ್ನು ಬಿತ್ತಿ ಬೆಳೆದು ಫಲ ಪಡೆಯುವುದು ಕೋಮುವಾದಿಗಳ ತಂತ್ರ ಮುಂದುವರಿದಿದೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಸಂಘಪರಿವಾರದ ಆಕ್ರಮಣಕಾರಿ ಕೋಮುವಾದಿ ಧಾಳಿಗಳು, ದ್ವೇಷದ ಕಿಚ್ಚು ಹಚ್ಚುವ ಕೃತ್ಯಗಳಿಗೆ ಕಲಿಸಿದ ಸೋಲಿನ ಪಾಠದಿಂದ ಅದು ಕಲಿಯಲು ನಿರಾಕರಿಸುತ್ತಿದೆ. ತನ್ನ ದುರಾಡಳಿತ, ದಿವಾಳಿತನದ ನೀತಿಗಳನ್ನು ಮುಚ್ಚಿಕೊಳ್ಳಲು ಮೋದಿ ಸರಕಾರ ಧಾರ್ಮಿಕತೆಯನ್ನು ಬಳಸುತ್ತಿದೆ. ಇದು ಹೊಸತಲ್ಲವಾದರೂ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಅತ್ಯಂತ ನಿರ್ಣಾಯಕವಾಗಿ ಎದುರಿಸಲೇಬೇಕಿದೆ.

ವಾಸ್ತವ ತೆರೆದಿಡುತ್ತಿರುವ ಬಿಜೆಪಿ ನಾಯಕರ ಟೀಕೆಗಳು

ಈ ವಾರ

ಎಸ್.ವೈ.ಗುರುಶಾಂತ್

ಕರ್ನಾಟಕದ ಬಿಜೆಪಿಯ ನಾಯಕತ್ವವನ್ನು ಬಿ.ಎಸ್.ಯಡ್ಯೂರಪ್ಪನವರ ಬಣದ ಕೈಗೆ ಕೊಟ್ಟ ನಂತರ ಏನಾಗಿದೆ? ವರ್ಷದ ವಿಳಂಬದ ಬಳಿಕ ಅಧ್ಯಕ್ಷನನ್ನು ನೇಮಿಸಲಾಯಿತು ಎನ್ನುವುದು ನಿಜ. ಕಳೆದ ವಿಧಾನಸಭಾ ಚುನಾವಣಾ ಫಲಿತಾಂಶವು ಆ ಪಕ್ಷದ ದುರಾಡಳಿತದ ಭಾರದಿಂದಲೂ ಪಕ್ಷದ ಹೈಕಮಾಂಡ್ ಎಣಿಸಿದಂತೆ ಬರಲಿಲ್ಲ, ಮೇಲಾಗಿ ಯಡ್ಯೂರಪ್ಪನವರನ್ನು ಮೂಲೆಗೆ ತಳ್ಳಿ ಹೊಸಬರಿಂದಲೇ ಬಿಜೆಪಿಯನ್ನು ಪೂರ್ಣ ನಿಯಂತ್ರಣಕ್ಕೆ ತೆಗೆದುಕೊಳ್ಳ ಬೇಕು ಎನ್ನುವ ಅವರ ಲೆಕ್ಕಾಚಾರವೂ ಉಲ್ಟಾ ಹೊಡೆಯಿತು. ಕೊನೆಗೆ ಬಿ.ಎಸ್.ವೈ. ಬಿಟ್ರೆ ಅದು ಲೋಕಸಭಾ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರಲಿದ್ದು ಅಂತಹ ಒಂದು ಪ್ರಯೋಗಕ್ಕೆ ಮತ್ತೆ ಹೋಗಬಾರದು ಎನ್ನುವುದು ನಿರ್ಧಾರ ಬಿ.ವೈ.ವಿಜಯೇಂದ್ರ ರವರ ನೇಮಕ! ಇದೂ ಸಹ ಬಿಜೆಪಿ ಪಕ್ಷದೊಳಗೆ ಸಮಾಧಾನ ತಂದಿತೆಂದು ಭಾವಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ಬಿ.ಜೆ.ಪಿ. ಯೊಳಗಿನ ಬಣಗಳ ಬಡಿದಾಟ ಹೊರ ಬರಲು ಹೆಚ್ಚು ಕಾಲ ಹಿಡಿಯಲಿಲ್ಲ! ಹೈಕಮಾಂಡ್ ನ ನಿರ್ಧಾರ ಪ್ರಕಟವಾದ ಕೆಲವು ಗಂಟೆಗಳಲ್ಲೇ ಅದಕ್ಕೆ ಭಿನ್ನ ಧ್ವನಿ ವ್ಯಕ್ತಪಡಿಸಿದ್ದು ಹಿರಿಯ ನಾಯಕ, ಶಾಸಕ ಬಸವರಾಜ ಪಾಟೀಲ್ ಯತ್ನಾಳ. ಅದು ಇನ್ನಷ್ಟೂ ಜೋರಾಗಿ ಸಿಡಿದದ್ದು ವಿರೋಧ ಪಕ್ಷದ ಸ್ಥಾನವೂ ಕೂಡ ಯತ್ನಾಳ ಕೈ ತಪ್ಪಿಸಿ ಆರ್.ಅಶೋಕ್ ಅವರನ್ನೇ ನೇಮಿಸಿದಾಗ. ಬಿಎಸ್ ವೈ ಅವರ ಬಣದೊಂದಿಗೆ ಹೊಂದಿಕೊಳ್ಳುವವರನ್ನೇ ವಿರೋಧ ಪಕ್ಷದ ನಾಯಕನನ್ನಾಗಿಸಬೇಕು ಎನ್ನುವ ಹೈಕಮಾಂಡ್ ನ ಲೆಕ್ಕಾಚಾರದಂತೆ ಇದು ನಡೆದಿದೆ ಎನ್ನಲಾಗುತ್ತಿದೆ. ಒಟ್ಟಾರೆ ಅಧ್ಯಕ್ಷತೆ ಇಲ್ಲವೇ ವಿರೋಧ ಪಕ್ಷದ ನಾಯಕ ಸ್ಥಾನದ ಆಕಾಂಕ್ಷಿಯಾಗಿದ್ದ ಬಸವರಾಜ್ ಪಾಟೀಲ್ ಯತ್ನಾಳ್ ಅವರಿಗೆ ತೀವ್ರವಾದ ನಿರಾಶೆ ಮತ್ತು ಆಕ್ರೋಶ ಉಂಟಾಗಿದ್ದು ಸಹಜವಾಗಿತ್ತು.

ಈಚೆಗೆ ಬಿಜೆಪಿ ಪ್ರದೇಶ ಸಮಿತಿಗೆ ಇತರೆ ಪದಾಧಿಕಾರಿಗಳ ನೇಮಕವೂ ಆಗಿದೆ. ಆಗಲೂ ಬಹುತೇಕವಾಗಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಬಣದವರನ್ನೇ ಹೆಚ್ಚಾಗಿ ತುಂಬಲಾಗಿದೆ ಎನ್ನುವ ಆಕ್ರೋಶವನ್ನು ಯತ್ನಾಳ್ ವ್ಯಕ್ತಪಡಿಸಿದ್ದರೆ ಮತ್ತು ಸದಾನಂದ ಗೌಡರವರು ಪದಾಧಿಕಾರಿ ಆಯ್ಕೆಯಲ್ಲಿ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸಮಜಾಯಿಷಿಗಳನ್ನು ಬಿಜೆಪಿ ನಾಯಕತ್ವ ಏನೋ ಹೇಳುತ್ತದೆ. ಆದರೆ ಅದಷ್ಟೇ ಆ ಪಕ್ಷದೊಳಗಿನ ಭಿನ್ನಾಭಿಪ್ರಾಯ, ವ್ಯತ್ಯಾಸಗಳನ್ನು ಪರಿಹರಿಸುತ್ತದೆ ಎನ್ನಲಾಗದು.

* * *

ಕೆಲವು ದಿನಗಳ ಹಿಂದಿನಿಂದ ನಿರಂತರವಾಗಿ ಕಾಂಗ್ರೆಸ್ ಸರ್ಕಾರದ ಮೇಲೆ ದಾಳಿ ಮಾಡುತ್ತಾ ಬಂದಿರುವ ಬಸವರಾಜ ಪಾಟೀಲ್ ಯತ್ನಾಳರ ದಾಳಿ ಈಗ ಸ್ವತಃ ಬಿಜೆಪಿಯ ನಾಯಕರ ಮೇಲೆ! ಅದರಲ್ಲೂ ವಿಶೇಷವಾಗಿ ಯಡಿಯೂರಪ್ಪನವರ ಆಡಳಿತದ ಮೇಲೆ ಕೇಂದ್ರೀಕರಣಗೊಂಡಿದೆ. ಯಡಿಯೂರಪ್ಪನವರಿಂದ ಹಿಡಿದು ಬಸವರಾಜ್ ಬೊಮ್ಮಾಯಿ ಅವರವರೆಗೂ ನಡೆಸಿದ ಆಡಳಿತದ ಅವಧಿಯಲ್ಲಿ ಬಿಜೆಪಿ ಕನಿಷ್ಠ ಎಂದರೂ ಶೇಕಡ 40ರಷ್ಟು ಹಣ ಹೊಡೆದು ಭ್ರಷ್ಟಾಚಾರ ನಡೆಸಿದ ಸರ್ಕಾರ ಎಂದು ಖ್ಯಾತಿಯಾಗಿದ್ದು ಗೊತ್ತಿದೆ. ಇದನ್ನು ಬಹಳ ದೊಡ್ಡ ದನಿಯಲ್ಲಿ ಬಿಜೆಪಿ ನಾಯಕರು ನಿರಾಕರಿಸುತ್ತಲೇ ಬಂದಿದ್ದರು, ಬರುತ್ತಿದ್ದಾರೆ ಕೂಡ. ಅದನ್ನು ಮುಚ್ಚಿ ಕೊಳ್ಳಲೇ ಎನ್ನುವಂತೆ ಈಗ ಕಾಂಗ್ರೆಸ್ ಸರ್ಕಾರದ ಮೇಲೆ ಅಂತಹುದೇ ಮರು ದಾಳಿಯನ್ನು ಮಾಡುತ್ತಿದ್ದಾರೆ ಕೂಡ. ಬಿಜೆಪಿಯ ಕೋಮು ಉದ್ರೇಕದ ಮಾತುಗಳು ಮತ್ತು ಕಾಂಗ್ರೆಸ್ ಸರ್ಕಾರದ ಮೇಲೆ ಭಾರಿ ಪ್ರಮಾಣದ ಟೀಕೆಗಳಿಂದ ಅವರ ಅವಧಿಯಲ್ಲಿ ನಡೆಸಿದ ಅಕ್ರಮ, ಭ್ರಷ್ಟತೆಗಳನ್ನು ಮುಚ್ಚಿ ಹಾಕಿಕೊಳ್ಳಬಹುದು ಎಂದು ಭಾವಿಸಿದಂತೆ ಕಾಣುತ್ತದೆ. ಆದರೆ ವಾಸ್ತವದಲ್ಲಿ ಆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆಸಲಾದ ಬಹುದೊಡ್ಡ ಭ್ರಷ್ಟಾಚಾರದ ಒಂದೊಂದು ಹಗರಣಗಳನ್ನು ಬಿಜೆಪಿ ನಾಯಕರೂ ಆಗಿರುವ ಬಸವರಾಜ್ ಪಾಟೀಲ್ ಯತ್ನಾಳ್ ರವರು ಹೊರ ಹಾಕುತ್ತಿದ್ದಾರೆ. ಅವರು ನಿಖರವಾಗಿ ಹೇಳಿದಂತೆ ಕೋವಿಡ್ ಸಂಕಷ್ಟದ ಕಾಲದಲ್ಲಿ ಏನೆಲ್ಲವೆಂದರೂ ಸುಮಾರು 40 ಸಾವಿರ ಕೋಟಿಗಳಷ್ಟು ಹಣವನ್ನು ಲೂಟಿ ಮಾಡಲಾಗಿದೆ ಎನ್ನುವುದನ್ನು ವಿವರಗಳ ಸಮೇತ ಬಹಿರಂಗಗಕ್ಕೆ ಇಟ್ಟಿದ್ದಾರೆ. ಈ ಭ್ರಷ್ಟಾಚಾರದ ವಿಷಯಗಳು ಬೊಮ್ಮಾಯಿಯವರು ಮುಖ್ಯಮಂತ್ರಿ ಆಗಿರುವಾಗ ಹೊರ ಬಂದಿದ್ದವು. ಆದರೆ ಇದರ ಕುರಿತಾದಂತೆ ಕನಿಷ್ಠ ತನಿಖೆಗೆ ವಹಿಸುವ ನೈತಿಕತೆಯನ್ನು ಪ್ರದರ್ಶಿಸದೆ ನಿರಾಕರಿಸಿಕೊಂಡು ಬರಲಾಗಿತ್ತು. ಸ್ಯಾನಿಟೈಸರ್, ಮಾಸ್ಕ್, ಬೆಡ್ ಮತ್ತು ಔಷಧಿಗಳ ಖರೀದಿ ವ್ಯವಹಾರದಲ್ಲಿ ಎಗ್ಗಿಲ್ಲದೆ ನಡೆದ ಹಗರಣಗಳು ಪ್ರಸ್ತಾವಿತವಾದಾಗ ಟೀಕೆ ಮಾಡಿದವರ ಮೇರೆಗೆ ಮರುಟೀಕೆ ನಡೆಸಿ ಬಾಯಿಮುಚ್ಚಿಸಲು ಪ್ರಯತ್ನಿಸಲಾಗಿತ್ತು. ಈಗ ಅದೇ ಪಕ್ಷದ ನಾಯಕ ಯತ್ನಾಳರವರು ಈ ಪ್ರಶ್ನೆಗಳನ್ನು ಹೊರಗೆಟ್ಟಿದ್ದಾರೆ. ಹಾಗೆ ಹೇಳುವಾಗ ಅವರು ತಮ್ಮ ವಿರೋಧಿಯಾದ ಯಡಿಯೂರಪ್ಪನವರನ್ನು, ಅವರ ಆ ಬಣವನ್ನು ಗುರಿಯಾಗಿಸಿಕೊಂಡಿದ್ದಾರೆ ಎನ್ನುವಂತೆ ಹೊರಗೆ ಕಂಡರೂ ಆಗಿರುವ ಭ್ರಷ್ಟಾಚಾರವನ್ನು ಸುಳ್ಳು ಎಂದು ಹೇಳಲು ಆಗುವುದಿಲ್ಲ ಮತ್ತು ಮುಚ್ಚಿಡಲೂ ಸಾಧ್ಯವಿಲ್ಲ.

ಆದ್ದರಿಂದ ಸಿದ್ದರಾಮಯ್ಯನವರ ಸರ್ಕಾರ ಈ ವಿಷಯದಲ್ಲಿ ಉನ್ನತ ಮಟ್ಟದ ತನಿಖೆಯನ್ನು ನಡೆಸುವಂತಾಗಬೇಕು ಮತ್ತು ಭ್ರಷ್ಟಾಚಾರಿಗಳನ್ನು ಶಿಕ್ಷಿಸುವಂತೆಯೂ ಆಗಬೇಕು. ಈಗಾಗಲೇ ಲೋಕೋಪಯೋಗಿ ಕಾಮಗಾರಿಗಳಲ್ಲಿ ಆಗಿರುವ ಶೇಕಡ 40ರಷ್ಟು ಕಮಿಷನ್ ಅವ್ಯವಹಾರಗಳ ಕುರಿತಾದಂತೆ ಆಯೋಗ ರಚಿಸಿ ಒಂದು ತನಿಖೆ ನಡೆಯುತ್ತಿದೆ. ಅಂದರೆ ಬಿಜೆಪಿಯ ಆಡಳಿತದ ಅವಧಿಯಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಆಧಾರಗಳು ಬಹುದೊಡ್ಡ ರೀತಿಯಲ್ಲಿ ಇವೆ ಎನ್ನುವುದು ಕೂಡ ಸತ್ಯ ಸಂಗತಿ ಎಂದು ಕಾಣುತ್ತದೆ. ಆದರೆ ಇಂಥವುಗಳ ನಡುವಿನಲ್ಲೇ ಬಿಜೆಪಿ ನಾಯಕರು ಸತ್ಯ ಹರಿಶ್ಚಂದ್ರರಂತೆ ಬೊಬ್ಬೆ ಹೊಡೆಯುವುದು ಅತ್ಯಂತ ನಾಚಿಕೆಗೇಡು ಮಾತ್ರವಲ್ಲ, ಯಾವುದಕ್ಕೂ ಹೇಸದ ಭಂಡತನದ ವರ್ತನೆಯಾಗಿ ಕಾಣುತ್ತದೆ.





ಜನವರಿ 10–20: 12 ಕೋಟಿ ಜನಗಳನ್ನು ತಲುಪುವ 'ಜನ ಜಾಗರಣ ಯಾತ್ರೆ'ಗಳು
ಗಣತಂತ್ರ ದಿನದಂದು ಕನಿಷ್ಟ 500 ಜಿಲ್ಲೆಗಳಲ್ಲಿ ಟ್ರಾಕ್ಟರ್ ಪರೇಡ್: ಎಸ್‌ಕೆಎಂ ಕರೆ

ಎಲ್ಲಾ ಬೆಳೆಗಳಿಗೆ ಸಿ2+50% ಸೂತ್ರದಂತೆ ಕನಿಷ್ಟ ಬೆಂಬಲ ಬೆಲೆಗೆ ಕಾನೂನಾತ್ಮಕ ಖಾತರಿ, ಸಾಲ ಮನ್ನಾ ಮೂಲಕ ರೈತರನ್ನು ಸಾಲದ ಬಲೆಯಿಂದ ಮುಕ್ತಗೊಳಿಸುವುದು, ವಿದ್ಯುತ್ ಖಾಸಗೀಕರಣವನ್ನು ನಿಲ್ಲಿಸುವುದು, ಲಖಿಂಪುರ ಖೇರಿ ರೈತರ ಹತ್ಯಾಕಾಂಡದ ಹಿಂದಿನ ಪ್ರಮುಖ ಸಂಚುಕೋರ ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ಅಜಯ್ ಮಿಶ್ರಾ ಟೆನಿ ಅವರ ವಜಾ ಮತ್ತು ಕಾನೂನು ಕ್ರಮ ಮುಂತಾದ ರೈತರ ಇನ್ನೂ ಈಡೇರದ ಪ್ರಮುಖ ಬೇಡಿಕೆಗಳ ಮೇಲೆ ಜನವರಿ 10ರಿಂದ 20ರ ವರೆಗೆ 20 ರಾಜ್ಯಗಳಲ್ಲಿ ಬೃಹತ್ 'ಜನ ಜಾಗರಣಾ ಯಾತ್ರೆ'ಗಳನ್ನು ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ನಿರ್ಧರಿಸಿದೆ.

ಇದಲ್ಲದೆ ಗಣತಂತ್ರ ದಿನ ಜನವರಿ 26 ರಂದು ಕನಿಷ್ಟ 500 ಜಿಲ್ಲೆಗಳಲ್ಲಿ ಎಂದಿನ ಗಣತಂತ್ರ ಪರೇಡಿನ ನಂತರ 'ಟ್ರಾಕ್ಟರ್ ಪರೇಡ್'ಗಳನ್ನು ನಡೆಸಲಾಗುವುದು ಎಂದೂ ಎಸ್‌ಕೆಎಂ ಹೇಳಿದೆ.

ಈ ಸಾಮೂಹಿಕ ಪ್ರಚಾರಾಂದೋಲನದ ಉದ್ದೇಶ ಮೇಲೆ ಹೇಳಿದ ಬೇಡಿಕೆಗಳ ಬಗ್ಗೆ ಜನಗಳಿಗೆ ವಿವರಿಸುತ್ತ ರೈತರು, ಕಾರ್ಮಿಕರು ಮತ್ತು ಜನಸಾಮಾನ್ಯರ ಹಿತಾಸಕ್ತಿಗಳಿಗೆ ಮಾರಕವಾದ, ವ್ಯಾಪಕ ನಿರುದ್ಯೋಗ, ತಡೆಯಿಲ್ಲದ ಬೆಲೆಯೇರಿಕೆ, ಬಡತನ, ಸಾಲಭಾರ ಮತ್ತು ಗ್ರಮೀಣ ಪ್ರದೇಶಗಳಿಂದ ನಗರಗಳಿಗೆ ಲಂಗುಲಗಾಮಿಲ್ಲದ ವಲಸೆಯನ್ನು ಉಂಟು ಮಾಡುತ್ತಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ಕಾರ್ಪೊರೇಟ್–ಪರ ಆರ್ಥಿಕ ನೀತಿಗಳನ್ನು ಬಯಲಿಗೆಳೆಯುವುದು ಎಂದು ಹೇಳಲಾಗಿದೆ.

ಈ ಪ್ರಚಾರಾಂದೋಲನ ಮೋದಿ ಸರಕಾರದ ಕಾರ್ಪೊರೇಟ್–ರಾಜ್ಯಭಾರ ಆಧಾರಿತ ಅಭಿವೃದ್ಧಿಯ ವಿರುದ್ಧವಾಗಿದೆ. ಇದು ಜಿಡಿಪಿ ದರದ ಮೇಲೆ, ಭಾರತ 3 ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆಯಾಗುವ ಕಥನದ ಮೇಲೆಯೇ ಅವಲಂಬಿಸಿದೆ, ತಲಾ ಆದಾಯದಲ್ಲಿ ಇಳಿಕೆ, ಹೆಚ್ಚುತ್ತಿರುವ ಆದಾಯ ಅಸಮಾನತೆ ಮತ್ತು ರೈತರಿಗೆ ಕನಿಷ್ಟ ಬೆಂಬಲ ಬೆಲೆಯ ನಿರಾಕರಣೆ ಮತ್ತು ರೈತರಿಗೆ ಕನಿಷ್ಟ ಕೂಲಿಯ ನಿರಾಕರಣೆಯನ್ನು ಮರೆಮಾಚುತ್ತದೆ ಎಂದು ಎಸ್‌ಕೆಎಂ ಹೇಳಿಕೆ ತಿಳಿಸಿದೆ.

ರೈತ ಮತ್ತು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಮನೆಮನೆಗೆ ಹೋಗಿ ಕರಪತ್ರಗಳನ್ನು ಹಂಚಿ ಮುಂಬರುವ ಹೋರಾಟಗಳಲ್ಲಿ ಜನರು ಭಾರೀ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಚಾರ ನಡೆಸುತ್ತಾರೆ. 30.4 ಕೋಟಿ ಕುಟುಂಬಗಳಲ್ಲಿ ಕನಿಷ್ಟ 40% ಕುಟುಂಬಗಳನ್ನು ತಲುಪುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಎಸ್‌ಕೆಎಂ ಹೇಳಿಕೆ ತಿಳಿಸಿದೆ.

ಟ್ರಾಕ್ಟರ್ ಪರೇಡಿನಲ್ಲಿ ಭಾಗವಹಿಸುವವರು ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಪ್ರಜಾಪ್ರಭುತ್ವ, ಒಕ್ಕೂಟತತ್ವ, ಜಾತ್ಯತೀತತೆ ಮತ್ತು ಸಮಾಜವಾದದ ತತ್ವಗಳ ರಕ್ಷಣೆಯ ಪ್ರತಿಜ್ಞೆ ಕೈಗೊಳ್ಳುತ್ತಾರೆ.

ಸಾಂವಿಧಾನಿಕ ಭಾವನೆಗಳ ಕೊಲೆ

ಮೋದಿ ಆಡಳಿತದ ದುರಹಂಕಾರ ಹೆಚ್ಚುತ್ತಿದೆ, ಪ್ರಜಾಪ್ರಭುತ್ವವನ್ನು ನಾಶಮಾಡುವ ಉದ್ದೇಶದಿಂದ ಸಂಸತ್ತಿನಲ್ಲಿ ವಿರೋಧ ಪಕ್ಷದ ಸದಸ್ಯರನ್ನು ಅಭೂತಪೂರ್ವವಾಗಿ ಅಮಾನತುಗೊಳಿಸಿದೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದ ಸಭೆ, "ಇದು ಪ್ರಜಾಸತ್ತಾತ್ಮಕ ಆಡಳಿತದ ಜನರ ಸಾಂವಿಧಾನಿಕ ಹಕ್ಕಿಗೆ ಸವಾಲು ಎಂದು ಪರಿಗಣಿಸಿ ಇಂತಹ ನಿರಂಕುಶ ಪ್ರಭುತ್ವವನ್ನು ಬಲವಾಗಿ ಖಂಡಿಸಬೇಕು" ಎಂದು ಸಭೆಯು ಸಮಸ್ತ ರೈತಾಪಿಗಳಿಗೆ ಕರೆ ನೀಡಿದೆ.

ಭಾರತದ ಮುಖ್ಯ ಚುನಾವಣಾ ಆಯುಕ್ತರನ್ನು ನಿರ್ಧರಿಸುವ ಸಮಿತಿಯಿಂದ ಭಾರತದ ಮುಖ್ಯ ನ್ಯಾಯಾಧೀಶರನ್ನು ತೆಗೆದುಹಾಕುವ ಬಿಜೆಪಿಯ ನಿರ್ಧಾರವನ್ನು ಗಂಭೀರವಾಗಿ ಪರಿಗಣಿಸಿದ ಸಭೆ "ಇದು ನಿಷ್ಪಕ್ಷಪಾತ ಪ್ರಜಾಸತ್ತಾತ್ಮಕ ಆಡಳಿತಕ್ಕಾಗಿ ಸಾಂವಿಧಾನಿಕ ಭಾವನೆಯ ಕಗ್ಗೊಲೆ" ಎಂದು ಖೇದ ವ್ಯಕ್ತ ಪಡಿಸಿದೆ.

2023 ರ ನವೆಂಬರ್ 26 ರಿಂದ 28 ರವರೆಗೆ ಭಾರತದಾದ್ಯಂತ ರಾಜಭವನದ ಎದುರು ಮೂರು ದಿನಗಳ ಮಹಾಪಡಾವ್ ಹೋರಾಟವನ್ನು ಯಶಸ್ವಿಗೊಳಿಸಿದ ಲಕ್ಷಾಂತರ ರೈತರು ಮತ್ತು ಕಾರ್ಮಿಕರನ್ನು ಸಭೆ ಅಭಿನಂದಿಸಿತು. ಹೋರಾಟವು ರೈತರು ಮತ್ತು ಕಾರ್ಮಿಕರ ಮುಖ್ಯ ಬೇಡಿಕೆಗಳನ್ನು ಸಾರ್ವಜನಿಕರ ಗಮನಕ್ಕೆ ತಂದಿದೆ ಮತ್ತು ಸ್ವಾತಂತ್ರ್ಯದ ನಂತರ ಎಸ್‌ಕೆಎಂ ಮತ್ತು ಕೇಂದ್ರೀಯ ಕಾರ್ಮಿಕ ಸಂಘಗಳು / ಫೆಡರೇಶನ್‌ಗಳ ಜಂಟಿ ವೇದಿಕೆಯ ಮೊದಲ ದೊಡ್ಡ ಜಂಟಿ ಕಾರ್ಯಾಚರಣೆಯಾಗಿದೆ ಎಂದು ಹೇಳಿದೆ.

ಸಾಕ್ಷಿ ಮಲಿಕ್ ಕ್ರಮ: ಪ್ರಧಾನಿಗೆ ಕಪಾಳಮೋಕ್ಷ

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಆಪ್ತರ ಆಯ್ಕೆಯನ್ನು ವಿರೋಧಿಸಿ ಕುಸ್ತಿಯನ್ನು ತ್ಯಜಿಸಿರುವ ಒಲಿಂಪಿಕ್ ಪದಕ ವಿಜೇತೆ ಸಾಕ್ಷಿ ಮಲಿಕ್ ಅವರಿಗೆ ಸಭೆ ಸೌಹರ್ದವನ್ನು ವ್ಯಕ್ತಪಡಿಸಿತು. ಸಾಕ್ಷಿ ಮಲಿಕ್ ಅವರ ಈ ಕೆಚ್ಚೆದೆಯ ನಿರ್ಧಾರವು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಅಪರಾಧಿಗಳನ್ನು ರಕ್ಷಿಸುತ್ತಿರುವ ಪ್ರಧಾನಿಯ ಮುಖಕ್ಕೆ ಕಪಾಳಮೋಕ್ಷವಾಗಿದೆ ಎಂದು ಸಭೆ ವರ್ಣಿಸಿದೆ.

ಎಸ್‌ಕೆಎಂ ಯಾವಾಗಲೂ ಯುಎಪಿಎಯ ಕರಾಳ ಕಾನೂನನ್ನು ರದ್ದು ಮಾಡಬೇಕೆಂದು ಆಗ್ರಹಿಸುತ್ತಲೇ ಬಂದಿದೆ ಎನ್ನುತ್ತ ಸಭೆ "2024ರ ಡಿಸೆಂಬರ್ 13ರಂದು ಜ್ವಲಂತ ಜೀವನೋಪಾಯದ ಸಮಸ್ಯೆಗಳಾದ ನಿರುದ್ಯೋಗ, ಬೆಲೆ ಏರಿಕೆ ಮತ್ತು ಮೋದಿ ಆಡಳಿತದ ದುರಹಂಕಾರವನ್ನು ಮುಂದಿಟ್ಟುಕೊಂಡು ಸಂಸತ್ತಿನ ಒಳಗೆ ಪ್ರತಿಭಟನೆ ನಡೆಸಿದ ಯುವಕರ ಮೇಲಿನ ಕಠೋರ ಯುಎಪಿಎಯನ್ನು ಕೂಡಲೇ ಹಿಂಪಡೆಯಬೇಕು" ಎಂದು ಸಭೆ ಬಲವಾಗಿ ಒತ್ತಾಯಿಸಿದೆ.

ಜನವರಿ ತಿಂಗಳಲ್ಲಿ ಅಖಿಲ ಭಾರತ ರೈತರ ಸಮಾವೇಶದಲ್ಲಿ ಕ್ರಿಯಾಯೋಜನೆ

ಇದಕ್ಕೆ ಮೊದಲು ಡಿಸೆಂಬರ್ 21–22ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಮನ್ವಯ ಸಮಿತಿ ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಮಹಾಸಭೆಯ ಎರಡು ದಿನಗಳ ಸಭೆ ಎಸ್‌ಕೆಎಂನ ಪ್ರಮುಖ ಬೇಡಿಕೆಗಳನ್ನು ಸಾಧಿಸಲು ಕ್ರಿಯಾ ಯೋಜನೆಯನ್ನು ಘೋಷಿಸಲು ಜನವರಿ 2024 ರಲ್ಲಿ ಅಖಿಲ ಭಾರತ ರೈತರ ಸಮಾವೇಶವನ್ನು ಕರೆಯಲು ನಿರ್ಧರಿಸಿತ್ತು. ಈ ರಾಷ್ಟ್ರೀಯ ಸಮಾವೇಶ ಈ ಕುರಿತು ಒಂದು ಕ್ರಿಯಾಯೋಜನೆಯನ್ನು ರೂಪಿಸಿ ಪ್ರಕಟಿಸಲಿದೆ ಎಂದು ಸಭೆಯ ನಂತರ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಲಾಗಿತ್ತು.

ಕಾರ್ಪೊರೇಟ್ ರಾಜ್ಯಭಾರದಲ್ಲಿ ತೀವ್ರ ಕೃಷಿ ಬಿಕ್ಕಟ್ಟನ್ನು ನಿವಾರಿಸಲು ಪರ್ಯಾಯ ಅಭಿವೃದ್ಧಿ ಧೋರಣೆಗಳ ಬಗ್ಗೆ, ರೈತರ ಹೋರಾಟವನ್ನು ತೀವ್ರಗೊಳಿಸುವ ಬಗ್ಗೆ ಮತ್ತು ಕಾರ್ಪೊರೇಟ್–ಕೋಮುವಾದಿ ನಂಟಿನ ವಿರುದ್ಧ ದೇಶಾದ್ಯಂತ ರೈತರು ಮತ್ತು ಕಾರ್ಮಿಕರ ಐಕ್ಯತೆಯನ್ನು ಬಲಪಡಿಸುವ ಬಗ್ಗೆ ರಾಷ್ಟ್ರೀಯ ಸಮಾವೇಶವು ಚರ್ಚಿಸಲಿದೆ ಎಂದು ಅದು ಹೇಳಿದೆ.

ಕ್ರೀಡೆಯಲ್ಲಿ ಮಹಿಳೆಯರಿಗೆ ಸುರಕ್ಷಿತ ಮತ್ತು ಒಳಗೊಳ್ಳುವ ವಾತಾವರಣವನ್ನು ಪ್ರೋತ್ಸಾಹಿಸುವುದಕ್ಕೆ ಆದ್ಯತೆ ಇದೆಯೇ?

ಒಕ್ಕೂಟ ಸರಕಾರ ಮತ್ತು ಕ್ರೀಡಾ ಸಚಿವಾಲಯಕ್ಕೆ ಮಹಿಳಾ ಸಂಘಟನೆಗಳು, ಮಾನವ ಹಕ್ಕುಗಳು, ಇತರ ಸಾಮಾಜಿಕ ಗುಂಪುಗಳ ಪ್ರಶ್ನೆ

ಡಿಸೆಂಬರ್ 27 ರಂದು ಬಿಡುಗಡೆ ಮಾಡಿದ ಜಂಟಿ ಹೇಳಿಕೆಯಲ್ಲಿ, 16 ಮಹಿಳಾ ಸಂಘಟನೆಗಳು, ಮಾನವ ಹಕ್ಕುಗಳ ಗುಂಪುಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಭಾರತದ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್‌ಐ) ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿವೆ ಮತ್ತು ಭಾರತೀಯ ಕ್ರೀಡಾ ಕ್ಷೇತ್ರದಲ್ಲಿ ವ್ಯಾಪಕವಾಗಿರುವ ಲೈಂಗಿಕ ದೌರ್ಜನ್ಯದ ಸಮಸ್ಯೆಯನ್ನು ಪರಿಹರಿಸಲು ತಕ್ಷಣದ ಕ್ರಮಕ್ಕೆ ಕರೆ ನೀಡಿದ್ದಾರೆ.

ಸಂಜಯ್ ಸಿಂಗ್ ನೇತೃತ್ವದ ಹೊಸದಾಗಿ ಚುನಾಯಿತವಾದ ಡಬ್ಲ್ಯುಎಫ್‌ಐ ಸಮಿತಿಯನ್ನು ಇತ್ತೀಚೆಗೆ ಅಮಾನತುಗೊಳಿಸಿರುವುದನ್ನು ಎತ್ತಿ ತೋರಿಸುತ್ತ ಕ್ರೀಡಾ ಸಚಿವಾಲಯದ ನಿರ್ಧಾರವು ಸಮಿತಿಯನ್ನು ಕೊನೆಗೊಳಿಸುವ ಬದಲು ಅಮಾನತುಗೊಳಿಸಿದೆಯಷ್ಟೇ ಎಂದು ಕಳವಳ ವ್ಯಕ್ತಪಡಿಸಿರುವ ಹೇಳಿಕೆ, ಭಾರತೀಯ ಕ್ರೀಡಾ ಸಮುದಾಯದೊಳಗೆ ಲೈಂಗಿಕ ದೌರ್ಜನ್ಯಕ್ಕೆ ಶೂನ್ಯ ಸಹಿಷ್ಣುತೆಯ ಸ್ಪಷ್ಟ ಸಂದೇಶವನ್ನು ಕಳುಹಿಸಲಿಕ್ಕಾಗಿ ಅಮಾನತುಗೊಂಡ ಸಮಿತಿಯು ಹಿಂತಿರುಗುವುದನ್ನು ತಡೆಯಬೇಕು, ಅದಕ್ಕಾಗಿ ಅದನ್ನು ವಜಾಗೊಳಿಸುವುದು ಅಗತ್ಯ ಎಂದು ಒತ್ತಿ ಹೇಳಿದೆ.

ಪೋಷ್ ಕಾನೂನು ಎಂದು ಕರೆಯಲ್ಪಡುವ 'ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ'ಯನ್ನು ಜಾರಿಗೆ ತರಲು ವಿಫಲವಾದ ಕಾರಣಕ್ಕಾಗಿ ಯಾವುದೇ ಫೆಡರೇಶನ್ ಅನ್ನು ಅಮಾನತುಗೊಳಿಸಲಾಗಿಲ್ಲ ಎಂದು ಈ ಸಂಘಟನೆಗಳು ಕ್ರೀಡಾ ಸಚಿವಾಲಯವನ್ನು ಟೀಕಿಸಿವೆ. ಈ ಕಾನೂನು ಹತ್ತು ವರ್ಷಗಳಿಂದ ಜಾರಿಯಲ್ಲಿದ್ದರೂ, ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳಲ್ಲಿ 50% ಕ್ಕಿಂತ ಹೆಚ್ಚು ಆಂತರಿಕ ದೂರು ಸಮಿತಿಗಳನ್ನು ಹೊಂದಿಲ್ಲ ಎಂಬ ಸಂಗತಿಯತ್ತ ಅವು ಗಮನ ಸೆಳೆದಿವೆ.

ನಾವೀಗ 'ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ, 2013 ರ ಅನುಷ್ಠಾನದ ಹತ್ತು ವರ್ಷಗಳನ್ನು ಆಚರಿಸುತ್ತಿದ್ದೇವೆ. ದೇಶದೆಲ್ಲೆಡೆ ಸಂಭ್ರಮಾಚರಣೆ ನಡೆಯುತ್ತಿರುವಾಗ, ದೇಶಕ್ಕೆ ಕೀರ್ತಿ ತಂದ ನಮ್ಮ ಚಾಂಪಿಯನ್‌ಗಳಾದ ಸಾಕ್ಷಿ, ವಿನೇಶ್, ಸಂಗೀತಾ ಮತ್ತು ಇತರ ಮಹಿಳಾ ಕುಸ್ತಿಪಟುಗಳಿಗೆ ಅವರ 'ಕೆಲಸದ ಸ್ಥಳದಲ್ಲಿ' ಈ ಕನಿಷ್ಟ ರಕ್ಷಣೆಯ ಭರವಸೆ ಸಿಕ್ಕಿಲ್ಲ. ಲೈಂಗಿಕ ಕೊಳ್ಳೆಕೋರರಿಗೆ ಕ್ರೀಡಾ ಸಂಸ್ಥೆಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಅವಕಾಶವಿಲ್ಲ ಮತ್ತು ಅಂತಹ ಕ್ರೀಡಾವ್ಯಕ್ತಿಗಳು ಮತ್ತು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂಬ ಯಾವುದೇ ಬಲವಾದ ಸಂದೇಶವಿಲ್ಲ' ಎಂದು ಜಂಟಿ ಹೇಳಿಕೆ ಖೇದ ವ್ಯಕ್ತಪಡಿಸಿದೆ.

2010 ರಿಂದ 2020 ರ ದಶಕದಲ್ಲಿ ಕೇವಲ 45 ಕ್ರೀಡಾ ಮಹಿಳಾ ಕ್ರೀಡಾಪಟುಗಳು ಲೈಂಗಿಕ ಕಿರುಕುಳದ ದೂರುಗಳನ್ನು ದಾಖಲಿಸಿದ್ದಾರೆ ಎಂದು ಎತ್ತಿ ತೋರಿಸುತ್ತಾ, ಪೋಷ್ ಕಾನೂನನ್ನು ಅನುಷ್ಠಾನಗೊಳಿಸುವಲ್ಲಿ ಕ್ರೀಡಾ ಸಚಿವಾಲಯ ನಿಜವಾಗಿಯೂ ಬದ್ಧತೆ ಹೊಂದಿದೆಯೇ ಎಂದು ಈ ಜಂಟಿ ಹೇಳಿಕೆ ಪ್ರಶ್ನಿಸಿದೆ. ಕ್ರೀಡಾ ಫೆಡರೇಶನ್‌ಗಳಲ್ಲಿ ಒಂದು ಸಮಗ್ರ ಬದಲಾವಣೆ ತರಬೇಕಾಗಿದೆ, ಮತದಾರರ ಕೊಲಿಜಿಯಂನಲ್ಲಿ ಮಹಿಳೆಯರಿಗೆ 33% ಮೀಸಲಾತಿಯಿರಬೇಕು ಮತ್ತು ಅತ್ಯುತ್ತಮ ಕ್ರೀಡಾ ವ್ಯಕ್ತಿಗಳನ್ನು ಒಳಗೊಳ್ಳಬೇಕು ಎಂದು ಜಂಟಿ ಹೇಳಿಕೆ ಆಗ್ರಹಿಸಿದೆ.

ಕೊನೆಯಲ್ಲಿ, ಪ್ರಸಕ್ತ ಒಕ್ಕೂಟ ಸರಕಾರ ಮತ್ತು ಕ್ರೀಡಾ ಸಚಿವಾಲಯ ಕ್ರೀಡೆಯಲ್ಲಿ ಮಹಿಳೆಯರಿಗೆ ಸುರಕ್ಷಿತ ಮತ್ತು ಒಳಗೊಳ್ಳುವ ವಾತಾವರಣವನ್ನು ಪ್ರೋತ್ಸಾಹಿಸುವುದಕ್ಕೆ ಆದ್ಯತೆ ನೀಡುತ್ತದೆಯೇ ಎಂದು ಪ್ರಶ್ನಿಸುತ್ತ, ಬ್ರಿಜ್ ಭೂಷಣ್ ಶರಣ್ ಸಿಂಗ್‌ರಂತಹ ಕ್ರೀಡಾಕ್ಷೇತ್ರದೊಳಗೆ ದೈಹಿಕ ಮತ್ತು ಲೈಂಗಿಕ ಹಿಂಸಾಚಾರದ ಸಂಸ್ಕೃತಿಯನ್ನು ಬಹಿರಂಗವಾಗಿಯೇ ಪ್ರೋತ್ಸಾಹಿಸುವ ಎಂಪಿಗಳನ್ನು ಕ್ರೀಡಾ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂದಿಸಬೇಕು ಮಾತ್ರವಲ್ಲ, ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಆತ ಒಬ್ಬ ಅಭ್ಯರ್ಥಿಯಾಗಿರದಂತೆ ಬಿಜೆಪಿ ಖಚಿತಪಡಿಸಬೇಕು, ಡಬ್ಲ್ಯುಎಫ್‌ಐ ಸಂಸ್ಥೆಯ ಅಮಾನತನ್ನು ವಜಾ ಆಗಿ ಪರಿವರ್ತಿಸಬೇಕು, ಲೈಂಗಿಕ ಕಿರುಕುಳವನ್ನು ಎದುರಿಸಲು ಬದ್ಧತೆ ಮತ್ತು ಹೋರಾಟ ನಡೆಸುತ್ತಿರುವ ಸಾಕ್ಷಿ ಮಲ್ಲಿಕ್, ವಿನೇಶ್ ಫೋಗಟ್ ಮತ್ತು ಭಝರಂಗ್ ಪುನಿಯ ಸೇರಿದಂತೆ ಇತರ ಚಾಂಪಿಯನ್‌ಗಳಿಗೆ ಘನತೆಯನ್ನು ಮರುಸ್ಥಾಪಿಸಬೇಕು ಮತ್ತು ಅವರು ಕ್ರೀಡಾಕ್ಷೇತ್ರಕ್ಕೆ ಮತ್ತೆ ಬರುವಂತೆ ಮಾಡಬೇಕು ಎಂದು ಈ ಸಂಘಟನೆಗಳು ಮತ್ತು ವ್ಯಕ್ತಿಗಳು ಆಗ್ರಹಿಸಿವೆ.

ಎಐಡಿಡಬ್ಲ್ಯುಎ, ಎಐ ಪಿಡಬ್ಲ್ಯುಎ, ಎಐಎಂಎಸ್‌ಎಸ್, ಎನ್‌ಎಫ್‌ಐಡಬ್ಲ್ಯು, ಐಸಿಡಬ್ಲ್ಯುಎಂ ಮತ್ತಿತರ ಮಹಿಳಾ ಸಂಘಟನೆಗಳು, ಮಾನವಹಕ್ಕು ಸಂಘಟನೆಗಳು ಮತ್ತು ವ್ಯಕ್ತಿಗಳು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

ಉಡುಪಿ ಉಡುಪಿಯಾಗಿ ಉಳಿದಿಲ್ಲ ಎಂಬುದೇ ಇಂದಿನ ಜಿಜ್ಞಾಸೆ

ರಮೇಶ್ ಗುಲ್ವಾಡಿ

ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಟ್ಟು ಸ್ವತಂತ್ರ ಜಿಲ್ಲೆಯಾಗಿ ಗುರುತಿಸಿಕೊಂಡ ನಂತರದ ಉಡುಪಿ ಜಿಲ್ಲೆಯ ತಥಾಕಥಿತ ಅಭಿವೃದ್ಧಿಯ ಪಥ ಏರುಗತಿಯಲ್ಲಿದೆ ಎಂಬ ಭ್ರಮೆಯನ್ನು ಕಳಚಿಟ್ಟರೆ ದೊರೆಯುವ ವಾಸ್ತವ ರೇಖೆಗಳು ಎಷ್ಟೊಂದು ಅಷ್ಟಾವಕ್ರವಾಗಿದೆಯೆಂದರೆ ದೂರದ ಬೆಟ್ಟ ನುಣ್ಣಗೆ ಎಂಬಂತೆ.....!

ಉಡುಪಿ ಎಂದರೆ ಸಮೃದ್ಧತೆಗೆ ಪರ್ಯಾಯ ಹೆಸರಾಗಿತ್ತು. ಸುಂದರವಾದ ಕರಾವಳಿಯ ಸೆರಗು, ಬೆನ್ನ ಹಿಂದೆ ಕೊಡಚಾದ್ರಿಯ ಕಿರೀಟ, ಮೈ ತುಂಬಾ ಹಸಿರು ಸೀರೆ ಉಟ್ಟ ಅನ್ನಪೂರ್ಣೆ!

ವಿದ್ಯಾವಂತರೇ ಬಹಳವಾಗಿರುವ ಬುದ್ಧಿವಂತರ ನಾಡೆಂಬ ಹೆಗ್ಗಳಿಕೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಇತ್ಯಾದಿ ಶೈಕ್ಷಣಿಕ ಹಾದಿಯ ಮುಂಚೂಣಿಯ ಪಯಣಿಗರಾಗಿ ಗುರುತಿಸಿಕೊಂಡಿದ್ದ ಉಡುಪಿಯ ಶಿಕ್ಷಣ ಕ್ಷೇತ್ರದ "ಹೊಸ ಉತ್ಪನ್ನಗಳು " ಕುಂಟುತ್ತಾ ಸಾಗುತ್ತಿರುವುದು ಇತ್ತೀಚಿನ ಹೊಸ ಬೆಳವಣಿಗೆ!

ರ್‍ಯಾಂಕುಗಳ ಪಟ್ಟಿಯಲ್ಲಿ ಉಡುಪಿಯ ಹೆಸರುಗಳು ವಿರಳವಾಗತೊಡಗಿವೆ

ಶೈಕ್ಷಣಿಕವಾಗಿ ವಿಶಾಲವಾದ ಕ್ಯಾನ್ವಾಸ್ ಹೊಂದಿರುವ ಜಿಲ್ಲೆಯಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಸಾಧನೆಯ ಬಣ್ಣಗಳು ಮಸುಕಾಗತೊಡಗಿವೆ. ಯಾರ್ಂಕುಗಳ ಪಟ್ಟಿಯಲ್ಲಿ ಉಡುಪಿಯ ಹೆಸರುಗಳು ವಿರಳವಾಗತೊಡಗಿವೆ. ಅಂದ ಹಾಗೆ ಇಡೀ ರಾಜ್ಯವನ್ನು ತಲ್ಲಣಗೊಳಿಸಿದ್ದ "ಹಿಜಾಬ್" ಪ್ರಕರಣದ ಹುಟ್ಟೂರು ಉಡುಪಿಯಲ್ಲವೇ!

ಉಡುಪಿಯಲ್ಲಿ ಜನಶಕ್ತಿ ಕನ್ನಡ ವಾರಪತ್ರಿಕೆಯ ಜಿಲ್ಲಾ ಉತ್ಸವ

ಮೊನ್ನೆ ಮೊನ್ನೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮತ್ತೆ ಹಿಜಾಬ್ ಗೆ ಅವಕಾಶ ಕೊಡುವ ಮಾತೆತ್ತಿದ ಮರುದಿನ ಅನೇಕ ಕಾಲೇಜು ಹುಡುಗರ ಬ್ಯಾಗುಗಳಲ್ಲಿ ಕೇಸರಿ ಶಾಲುಗಳು ಅವಿತಿದ್ದವು ಅನ್ನುವುದೇ ಹೊಸ ಬೆಳವಣಿಗೆ. ಅನೇಕ ಕಾಲೇಜು ಲೆಕ್ಚರರುಗಳು ಎ.ಬಿ.ವಿ.ಪಿ. ಯ ವಕ್ತಾರರಂತೆ–ಪ್ರಚಾರಕರಂತೆ ವಿದ್ಯಾರ್ಥಿಗಳ ನಡುವೆ ಇದ್ದಾರೆ ಎನ್ನುವುದೂ ಸುಳ್ಳಲ್ಲ!

ಹೂಡಿಕೆದಾರರ ಆಡೊಂಬೋಲ

ಉಡುಪಿ ಜಿಲ್ಲೆ ಈಗ ಹೂಡಿಕೆದಾರರ ಆಡೊಂಬೋಲವಾಗಿದೆ. ಬಂಡವಾಳಶಾಹಿ ಜಗತ್ತಿನ ಹಣದ ಹೊಳೆ ಹರಿದಾಡಿ ಅಭಿವೃದ್ಧಿಯ ಮಹಾ ದಿಗಿಣಕ್ಕೆ ಇಲ್ಲಿನ ಕೃಷಿ ಬದುಕು ಅಸ್ತವ್ಯಸ್ತವಾಗಿದೆ. ಗದ್ದೆ ಹೊಲಗಳನ್ನು ನುಂಗುತ್ತಾ ಮುನ್ನಡೆಯುತ್ತಿರುವ ಕೈಗಾರಿಕೆಗಳ ಹೋಮ, ಧೂಮಗಳ ನಡುವೆ ಪಾರಂಪರಿಕ ಭತ್ತದ ಕೃಷಿ ಅನಾಥವಾಗುತ್ತಿದೆ.

ಮಾರುಕಟ್ಟೆಯ ಮಾಯಕದಾಟಕ್ಕೆ ಮರುಳಾದ ರೈತರು ಗದ್ದೆಗಳನ್ನು ಅಡಿಕೆ ತೋಟವಾಗಿ ಬದಲಾಯಿಸಿದ್ದಾರೆ. ನಡು ನಡುವೆ ಲಾಭದಾಯಕವೆಂದು ನಂಬಿಸಲಾದ ಕೋಕೋ, ವೆನಿಲ್ಲಾ ಬಳ್ಳಿಗಳು ಕರಟಿ ಹೆಚ್ಚಿನ ಇಳುವರಿಗೆ ಹಾಕಿದ ರಸಗೊಬ್ಬರಕ್ಕೆ ಮಣ್ಣಿನ ಫಲವಂತಿಕೆಯನ್ನು ಅಡವಿಟ್ಟಿದ್ದಾರೆ. ಉಡುಪಿ ಜಿಲ್ಲೆಯು "ಕಾರ್ಪೊರೇಟ್ ಕೃಷಿ"ಗೆ ಕೆಂಪು ಹಾಸು ಸಿದ್ಧವಾಗಿದೆ.

ಜಿಲ್ಲೆಯ ಜನಸಂಖ್ಯೆಯ ಅರ್ಧ ಪಾಲು ಹೊಂದಿರುವ ಮಹಿಳೆಯರು ವೈವಿಧ್ಯಮಯ ರಂಗಗಳಲ್ಲಿ ತಮ್ಮ ಇರುವನ್ನು ಸಾಬೀತುಪಡಿಸುತ್ತಿರುವಾಗಲೇ ಮೈಕ್ರೋ ಫೈನಾನ್ಸ್ ಸ್ವ ಸಹಾಯ ಸಂಘಗಳ ಜಾಲದಲ್ಲಿ ಸಿಲುಕಿಕೊಂಡಿರುವಂತೆಯೇ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಳಲ್ಲಿ, ಕಟ್ಟಡ ಕಾರ್ಮಿಕ ರಂಗದಲ್ಲಿ ಬದುಕಿನ ಅವಶ್ಯಕತೆಗಳಿಗಾಗಿ ಸೆಣಸಾಡುತ್ತಾ "ಜನವಾದಿ " ಗಳಾಗುತಿದ್ದಾರೆ.

ಕೊಳಕು ರಾಜಕೀಯದ ಧ್ವನಿವರ್ಧಕವಾಗಿ ಯಕ್ಷಗಾನ

ಯಕ್ಷಗಾನ ಈ ನೆಲದ ಮೂಲ ಸಂಸ್ಕೃತಿಯ ಭಾಗವೇ ಆಗಿ ಹೋಗಿದ್ದರ ಹೊರತಾಗಿಯೂ ವಿರೂಪಗೊಳ್ಳುತ್ತಾ, ಪ್ರದರ್ಶನ ಕಲೆಯೊಂದು ವ್ಯಾಪಾರೀಕರಣದ ಅಂಗಳದಲ್ಲಿ ನಿಂತು, ಸಿನಿಮೀಯ ಶೈಲಿಯನ್ನು ಆವಾಹಿಸಿಕೊಳ್ಳುತ್ತಾ, ಕೊಳಕು ರಾಜಕೀಯದ ಧ್ವನಿವರ್ಧಕವಾಗಿ ಬದಲಾಗಿದ್ದು ಮತ್ತೊಂದು ಗಮನಾರ್ಹ ಬದಲಾವಣೆ.

ಅಪಾರ ವಿದ್ವತ್ತಿನ, ಸೃಜನಶೀಲ ವಾಗ್ವಿಲಾಸದ, ಮೈ ನವಿರೇಳಿಸುವ ಹೆಜ್ಜೆಗಾರಿಕೆಯ ಶ್ರೀಮಂತ ಕಲೆಯೊಂದು ವಿದ್ವೇಷ ಹರಡುವ ರಂಗ ಮಂಚವಾಗಿ, ಕುರೂಪಿ ರಾಜಕೀಯದ ಪ್ರಚಾರ ಮಾಧ್ಯಮವಾಗಿ ಬದಲಾಗಿ ಹೋಗುತ್ತಿರುವುದನ್ನು ತಡೆಯಲಾಗಲೇ ಇಲ್ಲ!

ಶಾಂತಿ ಸಾಮರಸ್ಯದ ನೆಲೆಬೀಡಾಗಿತ್ತು ಉಡುಪಿ

ಕೋಮು ವೈರಾಣುಗಳು ನಿಧಾನವಾಗಿ ಎಲ್ಲವನ್ನೂ ಆಕ್ರಮಿಸಿ ಸಾಮಾಜಿಕ ಅಸ್ವಸ್ಥತೆ ಕಾಡತೊಡಗಿದ ಮತ್ತೊಂದು ಮಗ್ಗುಲಲ್ಲಿ ಇನ್ನೂ ಉಸಿರಾಡುತ್ತಿರುವ ಮಾನವೀಯತೆಯ ಬೆಳ್ಳಿ ಬೆಳಕು ನಾಗರೀಕತೆಯ ಕಣ್ಣು ಕೋರೈಸುವ



ವೈಭವದ ನಡುವೆ ಅಸಂಗತವಾಗಿ ಗ್ರಾಮೀಣ ಪರಿಸರದಲ್ಲಿಯೂ ಪರಸ್ಪರ ಅಪನಂಬಿಕೆಯ ಬೀಜಗಳು ಮೊಳಕೆಯೊಡೆದು ಎದ್ದು ನಿಂತಿವೆ. ಧರ್ಮದ ಲೇಪ ಹಚ್ಚಿದ ಅಸಹಿಷ್ಣುತೆಯ ಗುಳಿಗೆಗಳು ಯುವ ಸಮುದಾಯಕ್ಕೆ ಮತ್ತೇರಿಸಿ "ಕೂಡಿ ಬಾಳುವ" ಕವಿ ವಾಣಿಯನ್ನು ಅಪಥ್ಯವಾಗಿಸಿದೆ.

ಜಿಲ್ಲೆಗೊಂದು ಸರಕಾರಿ ವೈದ್ಯಕೀಯ ಕಾಲೇಜು ಬೇಕೆಂಬ ಬೇಡಿಕೆ ಇನ್ನೂ ಕನಸಾಗಿರುವಾಗಲೇ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಅಳಿವಿನಂಚಿನಲ್ಲಿರುವ ಕೊರಗ ಸಮುದಾಯದ ನಡುವೆ ಡಾಕ್ಟರೇಟ್ ಪದವಿಗಳು ರಾರಾಜಿಸುತ್ತವೆ!

ಫಾಸ್ಟ್ ಫುಡ್ ಸಂಸ್ಕೃತಿ ಆವರಿಸಿಕೊಳ್ಳುತ್ತಿರುವಾಗಲೇ ಅರವತ್ತಕ್ಕೂ ಹೆಚ್ಚು ಭತ್ತದ ತಳಿಗಳನ್ನು ಬೆಳೆಸಿ ರಕ್ಷಿಸುವ ಮುಸ್ಲಿಂ ಕುಟುಂಬದ ಕಳಕಳಿ ಗೌಣವಾಗುತ್ತಿದೆ.

ದೈನಂದಿನ ನೈಜ ಸುದ್ದಿಗಳನ್ನು ಬಿತ್ತರಿಸಬೇಕಾದ ಮಾಧ್ಯಮಗಳು ಯಾವುದೋ ರಾಜಕೀಯ ಪಕ್ಷಗಳ ತುತ್ತೂರಿಯಾಗಿರುವಾಗಲೇ "ವಾರ್ತಾ ಭಾರತಿ" ಸಂಚಿಕೆಗಳು ಒಂದಿಷ್ಟು ಜನರ ಕೈ ಸೇರುತ್ತಿವೆ.

ಇವೆಲ್ಲವುಗಳನ್ನೂ ಮೀರಿ ಈ ನೆಲದ ಮನೆ ಮನೆಯ ಪುಟ್ಟ ಮಕ್ಕಳು ಮುಂಜಾನೆ ಎದ್ದೊಡನೆ ಕವಾಯತುಗಳಿಗೆ ಹೊರಡುತ್ತಾರೆ, ಸಂಜೆ ಭಜನಾ ಕಲಿಕೆಯ ಕೂಟಗಳಲ್ಲಿ ಕುಣಿಯತೊಡಗಿದ್ದಾರೆ. ಉಡುಪಿ ಈಗ ಉಡುಪಿಯಾಗಿ ಉಳಿದಿಲ್ಲ.

"ಜನಶಕ್ತಿ" ವಿರಳವಾಗಿಯಾದರೂ ಪ್ರಸಾರವಾಗುತ್ತಿದೆ

ಇದೆಲ್ಲದರ ನಡುವೆಯೂ "ಜನಶಕ್ತಿ ಕನ್ನಡ ವಾರಪತ್ರಿಕೆ"ಯು ರೈತ–ಕಾರ್ಮಿಕ ಸಖ್ಯದ ಚಳವಳಿಗಳು ಜನರ ನಡುವಿನ ಆಶಾದಾಯಕ ಕೊಂಡಿಯಾಗುತ್ತಿದೆ. ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ ಪತ್ರಿಕೆ'ಯು 'ನಿರಂಜನ' ಎಂದು ಕಾವ್ಯನಾಮ ಹೊಂದಿದ್ದ ಕುಳಕುಂದ ಶಿವರಾಯರ ಸಂಪಾದಕತ್ವದಲ್ಲಿ 1946 ರಲ್ಲಿ ಆರಂಭಗೊಂಡಿತು. ಹಲವಾರು ಪತ್ರಿಕೆಗಳು ಏಳು ಬೀಳುಗಳನ್ನು ಕಂಡಿವೆ. ಅಂತೆಯೇ ಜನಶಕ್ತಿ ವಾರಪತ್ರಿಕೆಯೂ ಕೂಡಾ. ನಡುವೆ ಈ ಪತ್ರಿಕೆ ಕೆಲವು ವರ್ಷಗಳ ಕಾಲ 'ಐಕ್ಯರಂಗ' ಅನ್ನುವ ಹೆಸರಿನಲ್ಲೂ ಮುದ್ರಿತವಾಗುತ್ತಿತ್ತು. ದುಡಿಯುವ ಜನರು ಅಂದರೆ ರೈತರು, ಕಾರ್ಮಿಕರು, ನೌಕರರು, ಸಣ್ಣ ವ್ಯಾಪಾರಿಗಳು, ಮಧ್ಯಮವರ್ಗ ಇವರ ಸಮಸ್ಯೆಗಳ ಬಗ್ಗೆ ಕೇಂದ್ರೀಕರಿಸಿರುವ ಈ ಪತ್ರಿಕೆ ವ್ಯಾಪಕವಾಗಿ ಪ್ರಭಾವ ಬೀರಲು ಸಾಧ್ಯವಾಗದಿದ್ದರೂ, ತಿಳಿದುಕೊಳ್ಳಬೇಕೆಂಬ ಹಂಬಲ ಉಳ್ಳವರಿಗೆ ಆಹಾರ ಒದಗಿಸಲು ಶಕ್ತವಾಗಿದೆ ಎಂದು ಗಟ್ಟಿಯಾಗಿ ಹೇಳಬಹುದು.

ಜನಶಕ್ತಿ ಪತ್ರಿಕೆಯು ಸತ್ಯವನ್ನು ಅರಸುವ, ಅನ್ಯಾಯವನ್ನು ವಿರೋಧಿಸುವ ವಾರಪತ್ರಿಕೆಯಾಗಿದೆ. ಜನಶಕ್ತಿ ಮಾಡಿಯೂ, ಯು–ಟ್ಯೂಬ್, ಚಾನಲ್ ಇತ್ಯಾದಿ ಮಾಧ್ಯಮ ಬಳಗವನ್ನು ಹೊಂದಿ, ಜನರ ನಡುವೆ ಪ್ರಸಾರ ನಡೆಸುತ್ತಿದೆ. ಜಿಲ್ಲೆ, ರಾಜ್ಯ, ದೇಶದ ಆಗುಹೋಗುಗಳನ್ನು ಓದುಗರ ಗಮನಕ್ಕೆ ತರುವುದು ಮಾತ್ರವಲ್ಲದೆ, ಜಾಗತಿಕ ಆಗುಹೋಗುಗಳು ದೇಶದ ಜನರ ಮೇಲೆ, ಪ್ರಭುತ್ವದ ಮೇಲೆ ಹೇಗೆಲ್ಲಾ ಪರಿಣಾಮ ಬೀರುತ್ತದೆ ಎಂದೂ ವಿವರಿಸುತ್ತದೆ.

ಸ್ಥಾಪಕ ಸಂಪಾದಕರಾದ ನಿರಂಜನರವರು ಜೂನ್ 15, 1924 ರಂದು ಜನಿಸಿದರು. ಈಗ ಅವರ 100ನೇ ವರ್ಷಾಚರಣೆ ನಡೆಯುತ್ತಿದೆ. ಇವರು 20ನೇ ಶತಮಾನದ ಪ್ರಮುಖ ಲೇಖಕರಾಗಿದ್ದರು. ಗಾಂಧೀಜಿ, ಕಾರ್ಲ್ ಮಾರ್ಕ್ಸ್, ಲೆನಿನ್ ಇವರ ವಿಚಾರಧಾರೆಗಳಿಂದ ನಿರಂಜನರವರು ಪ್ರಭಾವಿತರಾದವರು. ಕರ್ನಾಟಕ, ಕೇರಳದ ಗಡಿನಾಡಿನಲ್ಲಿ ಜನಿಸಿದ ಇವರು, ಕಾಸರಗೋಡು ಜಿಲ್ಲೆಯ ಕಯ್ಯೂರಿನ ರೈತ ಹೋರಾಟದಿಂದ ಪ್ರಭಾವಿತರಾಗಿ 'ಚಿರಸ್ಮರಣೆ' ಎಂಬ ಕಾದಂಬರಿಯನ್ನು ಬರೆದರು. ಅದು ಚಲನಚಿತ್ರವಾಗಿ ಪ್ರದರ್ಶನ ಕಂಡಿದ್ದು ಮಾತ್ರವಲ್ಲದೆ, ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ ಅನೇಕ ನಾಟಕ ಪ್ರದರ್ಶನಗಳನ್ನು ಕಂಡಿದೆ.

ಉಡುಪಿಯಲ್ಲಿ "ಜನಶಕ್ತಿ ಉತ್ಸವ"

ಈ ಸಂದರ್ಭದಲ್ಲಿ ಜನಶಕ್ತಿ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಿ, ಪ್ರಗತಿಪರ, ಸೌಹಾರ್ದತೆಯ ಚಿಂತನೆಗಳನ್ನು ಜನರ ನಡುವೆ ಕೊಂಡೊಯ್ಯಬೇಕೆಂಬ ಹಂಬಲದಿಂದ ಜಿಲ್ಲಾಮಟ್ಟದ ಉತ್ಸವಗಳನ್ನು ನಡೆಸಬೇಕೆಂದು ನಿರ್ಧರಿಸಲಾಗಿದೆ. ಅದರ ಭಾಗವಾಗಿ 2023ರ ಡಿಸೆಂಬರ್ 31 ರಂದು ಈ ಉತ್ಸವ ನಡೆಯುತ್ತಿದೆ.

ಈ ಸಂದರ್ಭದಲ್ಲಿ ಎರಡು ಪ್ರಮುಖ ವಿಷಯಗಳ ಮೇಲೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ. ಜಿಲ್ಲೆಯ ಅಭಿವೃದ್ಧಿ ಹೇಗಿರಬೇಕು. ಸಮಸ್ತ ಜನರನ್ನು, ಅದರಲ್ಲೂ ವಿಶೇಷವಾಗಿ ಅಂಚಿನಲ್ಲಿರುವ ಬಡ ಜನರು, ದಲಿತರು, ಮಹಿಳೆಯರು, ಗ್ರಾಮೀಣ ಪ್ರದೇಶದ ಜನರನ್ನು ಮೇಲೆತ್ತುವ ಬಗೆ ಹೇಗೆ?–ಈ ಕುರಿತು ವಿಚಾರಮಂಡನೆ ಮಾಡಲಾಗುತ್ತದೆ.

ಅವಿಭಜಿತ ದ.ಕ. ಜಿಲ್ಲೆ ಕೋಮುವಾದಿ ಪ್ರಚಾರ, ಹಲ್ಲೆ, ದಾಳಿಗಳಿಂದ ನಲುಗಿ ಹೋಗಿದೆ. ಇದು ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಉದ್ದೇಶಕ್ಕಾಗಿ ನಡೆಯುತ್ತಿದೆ. ಇಲ್ಲಿನ ಸೌಹಾರ್ದ ಪರಂಪರೆ ಹೇಗಿತ್ತು ಮತ್ತು ಈಗಲೂ ಇರುವ ಅಂಶಗಳ ಬಗ್ಗೆ ಮಂಗಳೂರಿನ ಮಹಾತ್ಮಾಗಾಂಧಿ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಡಾ। ಇಸ್ಮಾಯಿಲ್ ಎನ್. ಇವರು ವಿವರಿಸಲಿದ್ದಾರೆ. ಸಮಯದ ಅವಕಾಶವಿದ್ದಲ್ಲಿ ಸಂವಾದಕ್ಕೂ ಅವಕಾಶವಿದೆ.

ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಹೆಚ್ಚಿಸುವ ಉದ್ದೇಶದಿಂದ ಸ್ವತಃ ಅಧ್ಯಾಪಕರಾಗಿರುವ ಸಂತೋಷ ನಾಯಕ್ ಪಟ್ಲ ಇವರು 'ಜ್ಞಾನ–ವಿಜ್ಞಾನ ಜಿಂದಾಬಾದ್' ಎನ್ನುವ ನಾಟಕ ತಯಾರಿಸಿದ್ದು, ಇಲ್ಲಿ 9ನೇ ಪ್ರದರ್ಶನ ನಡೆಯಲಿದೆ.

ನಮ್ಮ ಎಲ್ಲಾ ಪ್ರಯತ್ನಗಳಿಗೆ ಪೂರಕ ಎಂಬಂತೆ ಸೌಹಾರ್ದತೆಯ ಹಾಡುಗಳನ್ನು ಹೇಳುತ್ತಾ ಒಬ್ಬಂಟಿಯಾಗಿ ಊರೂರು ಸುತ್ತುತ್ತಾ ಜನರಲ್ಲಿ ಸೌಹಾರ್ದತಾ ಭಾವನೆಗಳನ್ನು ಪ್ರಚೋದಿಸುವ ಉಡುಪಿಯವರೇ ಆಗಿರುವ ಭಾಸ್ಕರ ಯಾನೆ ನಾದಮಣಿ ನಾಲ್ಕೂರು ಅವರು ಈ ಉತ್ಸವದಲ್ಲಿ ಭಾಗಿಯಾಗುತ್ತಾರೆ. ಜನಶಕ್ತಿ ಮಾಧ್ಯಮದ ಪ್ರಸಾರ ಕುರಿತು ಸಂಪಾದಕರಾದ ಡಾ.ಕೆ.ಪ್ರಕಾಶ ಅವರೊಂದಿಗೆ ಚರ್ಚೆ ನಡೆಯಲಿದೆ. •

ರಾಜಕೀಯ ಲಾಭದ ಸಾಧನವಾಗಿ ಸರಕಾರೀ–ಪ್ರಾಯೋಜಿತ ರಾಮಮಂದಿರ ಉದ್ಘಾಟನೆ: ಸಮಾರಂಭಕ್ಕೆ ಹಾಜರಾಗುವುದಿಲ್ಲ: ಪೊಲಿಟ್ ಬ್ಯುರೊ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರಿಗೆ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೆ ಬರುವಂತೆ ಆಹ್ವಾನ ಬಂದಿದೆ. ಮತೀಯ ನಂಬಿಕೆಗಳನ್ನು ಗೌರವಿಸುವುದು ಮತ್ತು ತಮ್ಮ ನಂಬಿಕೆಯನ್ನು ಅನುಸರಿಸುವ ಪ್ರತಿಯೊಬ್ಬ ವ್ಯಕ್ತಿಯ ಹಕ್ಕನ್ನು ಕಾಪಾಡುವುದು ಸಿಪಿಐ(ಎಂ) ನೀತಿಯಾಗಿದ್ದು, ಮತಧರ್ಮವು ವೈಯಕ್ತಿಕ ಆಯ್ಕೆಯಾಗಿದೆ, ಅದನ್ನು ರಾಜಕೀಯ ಲಾಭದ ಸಾಧನವಾಗಿ ಪರಿವರ್ತಿಸಬಾರದು ಎಂದು ನಂಬುವುದರಿಂದಾಗಿ ನಾವು ಸಮಾರಂಭಕ್ಕೆ ಹಾಜರಾಗುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪ್ರಧಾನ ಮಂತ್ರಿ, ಉತ್ತರಪ್ರದೇಶದ ಮುಖ್ಯಮಂತ್ರಿ ಮತ್ತು ಇತರ ಸರ್ಕಾರಿ ವ್ಯಕ್ತಿಗಳನ್ನು ಈ ಕಾರ್ಯಕ್ರಮದಲ್ಲಿ ನೇರವಾಗಿ ಒಳಗೊಳಿಸಿ ಬಿಜೆಪಿ ಮತ್ತು ಆರೆಸ್ಸೆಸ್ ಇದನ್ನು ಒಂದು ಪ್ರಭುತ್ವ– ಪ್ರಾಯೋಜಿತ ಕಾರ್ಯಕ್ರಮವನ್ನಾಗಿ ಪರಿವರ್ತಿಸಿರುವುದು ಅತ್ಯಂತ ದುರದೃಷ್ಟಕರ ಎಂದಿರುವ ಪೊಲಿಟ್‌ಬ್ಯುರೊ, ಸಂವಿಧಾನದ ಅಡಿಯಲ್ಲಿ ಭಾರತದಲ್ಲಿನ ಪ್ರಭುತ್ವವು ಯಾವುದೇ ಮತೀಯ ಸಂಬದ್ಧತೆಯನ್ನು ಹೊಂದಿರಬಾರದು ಎಂಬುದು ದೇಶ ಸರ್ವೋಚ್ಚ ನ್ಯಾಯಾಲಯ ಪುನರುಚ್ಚರಿಸಿರುವ ಭಾರತದಲ್ಲಿನ ಆಳ್ವಿಕೆಯ ಒಂದು ಮೂಲಭೂತ ತತ್ವವಾಗಿದೆ ಎಂದು ನೆನಪಿಸುತ್ತ ಈ ಸಮಾರಂಭದ ಆಯೋಜನೆಯಲ್ಲಿ ಆಳುವ ಸರಕಾರ ಇದನ್ನು ಉಲ್ಲಂಘಿಸುತ್ತಿದೆ ಎಂದು ಹೇಳಿದೆ.







ಭಾರತೀಯ ಕುಸ್ತಿ ಒಕ್ಕೂಟದ ನೂತನ ಸಮಿತಿಯ ವಿಸರ್ಜನೆಯಷ್ಟೇ ಸಾಲದು.. .. ..

ಕುಸ್ತಿಪಟುಗಳ ಪ್ರತಿಭಟನೆಗೆ ಮಣಿದ ಸರ್ಕಾರ, ಮಹಿಳಾ ಕುಸ್ತಿಪಟುಗಳ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊತ್ತಿರುವ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ಅವರ ಬಂಟ ಸಂಜಯ್ ಸಿಂಗ್ ನೇತೃತ್ವದ ಭಾರತೀಯ ಕುಸ್ತಿ ಒಕ್ಕೂಟದ ನೂತನ ಸಮಿತಿಯನ್ನು ವಿಸರ್ಜನೆ ಮಾಡಿ, ಹೊಸದಾಗಿ ತಾತ್ಕಾಲಿಕ ಸಮಿತಿ ರಚನೆ ಮಾಡಿದೆ. ಇದಿಷ್ಟೇ ಸಾಲದು, ಆರೋಪಿಗಳ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಬೇಕಿದೆ. ಮತ್ತು ಕ್ರೀಡಾ ಸಂಸ್ಥೆಗಳನ್ನು ನಿಜವಾಗಿಯೂ ಮಹಿಳೆಯರನ್ನು ಒಳಗೊಳ್ಳುವ, ಹೆಚ್ಚು ಪ್ರಜಾಸತ್ತಾತ್ಮಕವಾದ, ಪಾರದರ್ಶಕವಾದ ಮತ್ತು ಜವಾಬುದಾರ ಸಂಸ್ಥೆಗಳಾಗಿ ಮಾಡಬೇಕಾಗಿದೆ.

ಕುಸ್ತಿಪಟುಗಳ ಪ್ರತಿಭಟನೆಗೆ ವಿವಿಧ ವಲಯಗಳಿಂದ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಕ್ರೀಡಾ ಸಚಿವಾಲಯವು, ಡಿಸೆಂಬರ್ 21 ರಂದು ಆಯ್ಕೆಯಾಗಿದ್ದ ಭಾರತೀಯ ಕುಸ್ತಿ ಒಕ್ಕೂಟದ (ಡಬ್ಲ್ಯುಎಫ್‌ಐ) ನೂತನ ಕಾರ್ಯಕಾರಿ ಸಮಿತಿಯನ್ನು ಡಿಸೆಂಬರ್ 24ರಂದು ವಿಸರ್ಜಿಸಿದೆ. 3 ದಿನಗಳ ನಂತರ ಭೂಪಿಂದರ್ ಸಿಂಗ್ ಬಜ್ವಾ ನೇತೃತ್ವದ ಭಾರತೀಯ ಒಲಿಂಪಿಕ್ ಅಸೋಸಿಯೇಷನ್ (ಐಒಸಿ) ಡಿಸೆಂಬರ್ 27ರಂದು ತಾತ್ಕಾಲಿಕ ರೆಸ್ಲಿಂಗ್ ಸಮಿತಿ ನೇಮಕ ಮಾಡಿದೆ.

ಹೊಸದಾಗಿ ನೇಮಕಗೊಂಡ ತಾತ್ಕಾಲಿಕ ಸಮಿತಿಯಲ್ಲಿ ಎಂ.ಎಂ. ಸೌಮ್ಯ ಮತ್ತು ಮಂಜುಷಾ ಕನ್ವರ್ ಅವರು ತಾತ್ಕಾಲಿಕ ಸಮಿತಿಯ ಸದಸ್ಯರಾಗಿ ಮುಂದುವರಿಯಲಿದ್ದಾರೆ ಎಂದು ಪ್ರಕಟಿಸಲಾಗಿದೆ.

ಡಬ್ಲ್ಯುಎಫ್‌ಐ ನಲ್ಲಿ ನ್ಯಾಯಸಮ್ಮತತೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಈ ತಾತ್ಕಾಲಿಕ ಸಮಿತಿಯನ್ನು ನೇಮಿಸಲಾಗಿದೆ ಎಂದು ಐಒಸಿ ಹೇಳಿದೆ. ಡಬ್ಲ್ಯುಎಫ್‌ಐ ಗೆ ಇತ್ತೀಚೆಗೆ ಆಯ್ಕೆಯಾದ ಅಧ್ಯಕ್ಷರು ಮತ್ತು ಅಧಿಕಾರಿಗಳು ಕುಸ್ತಿಯ ಸಾಂವಿಧಾನಿಕ ನಿಬಂಧನೆಗಳನ್ನು ಉಲ್ಲಂಘಿಸಿದ್ದಾರೆ ಮತ್ತು ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ ಎಂದು ಐಒಸಿ ಮುಖ್ಯಸ್ಥೆ ಪಿಟಿ ಉಷಾ ಪತ್ರವೊಂದರಲ್ಲಿ ಪ್ರಸ್ತಾಪಿಸಿದ್ದರು. ಐಒಸಿ ಪ್ರಸ್ತಾಪಿಸಿದ ಉತ್ತಮ ಆಡಳಿತದ ತತ್ವಗಳಿಗೆ ವಿರುದ್ಧವಾಗಿ ಅದು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸದೆ ಸರ್ವಾಧಿಕಾರದ ರೀತಿಯಲ್ಲಿ ವರ್ತಿಸಿತು ಎಂದು ಅವರು ತಮ್ಮ ನೋವನ್ನು ವ್ಯಕ್ತಪಡಿಸಿದ್ದರು.

ನಿವೃತ್ತಿ ಘೋಷಿಸಿದ ಸಾಕ್ಷಿ ಮಲಿಕ್

ಕುಸ್ತಿಪಟುಗಳ ವಿರುದ್ಧ ಲೈಂಗಿಕ ಕಿರುಕುಳ ನೀಡಿದ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಸಿಂಗ್ ಅವರ ಆಪ್ತ ಸ್ನೇಹಿತ ಸಂಜಯ್ ಸಿಂಗ್ ಅವರು ಡಬ್ಲ್ಯುಎಫ್‌ಐ ಮುಖ್ಯಸ್ಥರಾಗಿ ಆಯ್ಕೆಯಾಗಿದ್ದರು. ಈ ಆಯ್ಕೆಗೆ ಕುಸ್ತಿಪಟುಗಳು ಬೇಸರ ವ್ಯಕ್ತಪಡಿಸಿದರು. ಈ ಬೆಳವಣಿಗೆ ಬಗ್ಗೆ ಖ್ಯಾತ ಕುಸ್ತಿಪಟು ವಿನೇಶ್ ಫೋಗಟ್ ಮಾಧ್ಯಮಗಳ ಮುಂದೆ ಕಣ್ಣೀರು ಹಾಕಿದರು. ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ಅವರ ನಿವಾಸದಿಂದಲೇ ಡಬ್ಲ್ಯುಎಫ್‌ಐ ಕಚೇರಿ ಕಾರ್ಯನಿರ್ವಹಿಸುತ್ತಿದೆ ಎಂದು ವಿನೇಶ್ ಫೋಗಟ್ ಆಕ್ರೋಶ ವ್ಯಕ್ತಪಡಿಸಿದರು. ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಗಳನ್ನು ಹಿಂದಿರುಗಿಸುವುದಾಗಿ ಘೋಷಿಸಿದರು. ಖ್ಯಾತ ಕುಸ್ತಿಪಟು ಸಾಕ್ಷಿ ಮಲಿಕ್ ಕುಸ್ತಿಯಿಂದ ನಿವೃತ್ತಿ ಘೋಷಿಸಿದರು. ಬಜರಂಗ್ ಪುನಿಯಾ ಮತ್ತು ರವೀಂದರ್ ಸಿಂಗ್ ಯಾದವ್ ಅವರಿಗೆ ಕೇಂದ್ರ ಸರ್ಕಾರ ನೀಡಿದ ಪದ್ಮಶ್ರೀ ಪ್ರಶಸ್ತಿಗಳನ್ನು ಹಿಂದಿರುಗಿಸುವುದಾಗಿ ಹೇಳಿದರು.

ಬಹುಶಃ, ಈ ಒತ್ತಡದ ಸನ್ನಿವೇಶಗಳಿಂದಾಗಿ ಕೇಂದ್ರವು ಹೊಸ ಸಮಿತಿಯನ್ನು ವಿಸರ್ಜಿಸಿ, ಹೊಸದಾಗಿ ತಾತ್ಕಾಲಿಕ ಸಮಿತಿಯನ್ನು ನೇಮಿಸಿದೆ. ಆದರೆ ಸಂಜಯ್ ಸಿಂಗ್ ಅಧ್ಯಕ್ಷರಾಗಿದ್ದ ಸಮಿತಿಯ ವಿಸರ್ಜನೆಗೆ ಕ್ರೀಡಾ ಸಚಿವಾಲಯವು ಉಲ್ಲೇಖಿಸಿರುವ ಕಾರಣಗಳು ಕೇವಲ ನೆಪಮಾತ್ರವಾಗಿದೆ.

ಕ್ರಮಕ್ಕೆ ಒತ್ತಾಯಿಸಿ ತಿಂಗಳುಗಳ ಕಾಲ ಪ್ರತಿಭಟನೆ

ಈ ಹಿಂದೆಯೂ ಕುಸ್ತಿಪಟುಗಳಿಂದ ದೊಡ್ಡ ಮಟ್ಟದ ಪ್ರತಿಭಟನೆ ನಡೆದಿದೆ. ಡಬ್ಲ್ಯುಎಫ್‌ಐ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಬ್ರಿಜ್ ಭೂಷಣ್ ಮತ್ತು ಕೋಚ್‌ಗಳು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಒಲಿಂಪಿಕ್ ಪದಕ ವಿಜೇತರಾದ ಸಾಕ್ಷಿ ಮಲಿಕ್, ಬಜರಂಗ್ ಪುನಿಯಾ ಮತ್ತು ಫೋಗಟ್ ಪ್ರತಿಭಟಿಸಿದ್ದರು.

ಜನವರಿ 18, 2023 ರಿಂದ, ಅವರು ತಿಂಗಳುಗಳ ಕಾಲ ದೆಹಲಿಯ ಜಂತರ್ ಮಂತರ್‌ನಲ್ಲಿ ಕ್ರೀಡಾಪಟುಗಳೊಂದಿಗೆ ಒಟ್ಟಾಗಿ ಪ್ರತಿಭಟಿಸಿದರು. ಇದು 2023 ರ ಅತ್ಯಂತ ಗಮನಾರ್ಹವಾದ ಪ್ರತಿಭಟನಾ ಚಳುವಳಿಗಳಲ್ಲಿ ಒಂದಾಗಿದೆ. ಇಬ್ಬರು ಮಹಿಳಾ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್ ಮತ್ತು ವಿನೇಶ್ ಫೋಗಟ್ ಅವರು ಪ್ರದರ್ಶಿಸಿದ ಅದ್ಭುತ ದೃಢತೆ ಮತ್ತು ಧೈರ್ಯವು ಭಜರಂಗ್ ಪೂನಿಯಾ ಅವರೊಂದಿಗೆ ಮಹಿಳಾ ಸಂಘಟನೆಗಳು, ರೈತ ಸಂಘಗಳು, ಕ್ರೀಡಾಪಟುಗಳು, ವಿವಿಧ ಸಾಮಾಜಿಕ ಸಂಘಟನೆಗಳು, ಖಾಪ್ ಪಂಚಾಯತ್‌ಗಳು, ವಿದ್ಯಾರ್ಥಿಗಳು, ಮತ್ತು ಯುವ ಮೋರ್ಚಾಗಳು ಸೇರಿದಂತೆ ದೊಡ್ಡ ದೊಡ್ಡ ಸಂಘಟನೆಗಳಿಂದ ಅಭೂತಪೂರ್ವ ಒಗ್ಗಟ್ಟನ್ನು ಗಳಿಸುವಲ್ಲಿ ಯಶಸ್ವಿಯಾಯಿತು.

ಆದರೆ, ಮೋದಿ ಸರ್ಕಾರ ಇವರ ನೋವಿನ ಧ್ವನಿಗೆ ಕಿವಿಗೊಡಲಿಲ್ಲ. ಮುಂದುವರಿದು, ಕ್ರೀಡಾಪಟುಗಳು ಮೇ 28ರಂದು ನೂತನ ಸಂಸತ್ ಭವನದ ಉದ್ಘಾಟನಾ ಸಮಾರಂಭಕ್ಕೆ ತೆರಳಿ ತಮ್ಮ ಪ್ರತಿಭಟನಾ ದನಿ ಎತ್ತಲು ಯತ್ನಿಸಿದರು. ಮೋದಿ ಸರ್ಕಾರ ನಿರ್ದಾಕ್ಷಿಣ್ಯವಾಗಿ ಪೊಲೀಸರೊಂದಿಗೆ ಅವರನ್ನು ತಡೆದಿತ್ತು. ಪದಕ ಗೆದ್ದು ದೇಶಕ್ಕೆ ಕೀರ್ತಿ ತಂದ ಕ್ರೀಡಾ ಪಟುಗಳ ಬಗ್ಗೆ ಮೋದಿ ಸರ್ಕಾರದ ನಡವಳಿಕೆ ಇದು.

ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದ ನಂತರವೇ ದೆಹಲಿ ಪೊಲೀಸರು ಬ್ರಿಜ್‌ಭೂಷಣ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಎಫ್‌ಐಆರ್ ದಾಖಲಾಗಿ ತಿಂಗಳುಗಳೇ ಕಳೆದರೂ ಸೂಕ್ತ ತನಿಖೆಯಾಗಿಲ್ಲ, ಕ್ರಮಕೈಗೊಂಡಿಲ್ಲ. ಸಹಜವಾಗಿ, ಕುಸ್ತಿಪಟುಗಳ ಆಂದೋಲನವು ದೊಡ್ಡದಾಗಿತ್ತು. ಅವರು ತಮ್ಮ ಪದಕಗಳನ್ನು ಗಂಗೆಯ ನೀರಿನಲ್ಲಿ ಮುಳುಗಿಸುವ ಮಟ್ಟಕ್ಕೆ ಹೋದರು. ರೈತ ಮುಖಂಡರ ಮಧ್ಯಪ್ರವೇಶ ಮತ್ತು ಬ್ರಿಜ್ ಭೂಷಣ್ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಮೋದಿ ಸರ್ಕಾರ ಭರವಸೆ ನೀಡಿದ್ದರಿಂದ ಆಂದೋಲನವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಆದರೆ ಸರಕಾರ ಈ ಆಶ್ವಾಸನೆಯಂತೆ ನಡೆದುಕೊಳ್ಳಲಿಲ್ಲ.

"ರೋಫು ಇತ್ತು.. ರೋಫು ಇರುತ್ತದೆ"


2021 ರಿಂದ ಡಬ್ಲ್ಯುಎಫ್‌ಐ ಚುನಾವಣೆಗಳು ಅನೇಕ ವಿವಾದಗಳಿಂದಾಗಿ ನಡೆದಿಲ್ಲ. ಕೊನೆಗೂ ಡಿಸೆಂಬರ್ 21ರಂದು ಚುನಾವಣೆ ನಡೆದು ಬ್ರಿಜ್ ಭೂಷಣ್ ಕಟ್ಟಾಳು ಸಂಜಯ್ ಕುಮಾರ್ ಸಿಂಗ್ ಕಾಮನ್ವೆಲ್ತ್ ಚಿನ್ನದ ಪದಕ ವಿಜೇತೆ ಅನಿತಾ ಶೆರಾನ್ ಅವರನ್ನು ಸೋಲಿಸಿ ವಿಜಯಶಾಲಿಯಾದರು. ನಂತರ 15 ಪುರುಷರೇ ಇರುವ ಸಮಿತಿ ರಚನೆಯಾಗಿದೆ, ಇವರಲ್ಲಿ 13 ಮಂದಿ ಬ್ರಿಜ್ ಭೂಷಣ್ ಅವರ ನಿಷ್ಠಾವಂತರು. ಈ ಫಲಿತಾಂಶದಲ್ಲಿ ಆಶ್ಚರ್ಯವೇನೂ ಇಲ್ಲ ಎನ್ನುತ್ತಾರೆ ಸ್ವತಃ ಹರ್‍ಯಾಣದ ಕ್ರೀಡಾಪಟುವೂ ಆಗಿರುವ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಜಗ್ಮತಿ ಸಂಗ್ವಾನ್. ಏಕೆಂದರೆ ಬೇರೆ ಬೇರೆ ರಾಜ್ಯಗಳ 50 ಮತದಾರರ ಮೇಲೆ, ಬಲವಾದ ರಾಜಕೀಯ ಕೃಪಾಪೋಷಣೆ ಇರುವ ಬ್ರಿಜ್ ಭೂಷಣ್ ಪ್ರಭಾವ ಚಲಾಯಿಸುವುದು ಕಷ್ಟವೇನಲ್ಲ. ಆದರೂ, ಇಂತಹ ಸನ್ನಿವೇಶದಲ್ಲೂ ಅಧಿಕಾರಮತ್ತ ಕೂಟದ ಸವಾಲನ್ನು ಎದುರಿಸಿ ಒಬ್ಬ ಮಹಿಳಾ ಕುಸ್ತಿಪಟು ಸ್ಪರ್ಧಿಸುವ ಧೈರ್ಯ ಮಾಡಿದ್ದು ನಿಜಕ್ಕೂ ಗಮನಾರ್ಹ ಎನ್ನುತ್ತಾರೆ ಜಗ್ಮತಿ.

ಆದರೆ ಬ್ರಿಜ್‌ಭೂಷಣ್ ಗ್ಯಾಂಗ್ ಈ 'ವಿಜಯ'ದ ನಂತರ ಮೆರೆದ ಅಹಂಕಾರ, ತೋರಿದ ಬಲಪ್ರದರ್ಶನ ಅವರಿಗೇ ಮುಳುವಾಗಿರುವಂತೆ ಕಾಣುತ್ತದೆ. ಡಿಸೆಂಬರ್ 22ರಂದು ಹಾಲಿ ಚುನಾಯಿತ ಡಬ್ಲ್ಯುಎಫ್‌ಐ ಅಧ್ಯಕ್ಷ ಮತ್ತು ಆತನಿಗಿಂತಲೂ ಹೆಚ್ಚು ಮಾಲೆಗಳನ್ನು ಧರಿಸಿದ್ದ ಮಾಜಿ ಅಧ್ಯಕ್ಷ ಒಟ್ಟಾಗಿ ವಿಜಯದ ಸಂಕೇತ ಪ್ರದರ್ಶಿಸುವ ಚಿತ್ರ ಮತ್ತು ಬ್ರಿಜ್ ಭೂಷಣ್‌ರ ಎಂಪಿ ಬಂಗಲೆಯಲ್ಲಿ ಆತನ ಮಗ ಪ್ರದರ್ಶಿಸಿದ "ದಬ್ದಬಾ ತೋ ಹೈ .. ದಬ್ದಬಾ ತೋ ರಹೇಗಾ"(ರೋಫು ಅಂತೂ ಇತ್ತು.. ರೋಫು ಅಂತೂ ಇರುತ್ತದೆ) ಎಂಬ ಫಲಕದ ಚಿತ್ರ ದೇಶದಲ್ಲಿ ಭಾರೀ ಗಮನ ಸೆಳೆದಿದೆ. ಇತ್ತ ಸಾಕ್ಷಿ ಮಲಿಕ್ ಪತ್ರಿಕಾ ಸಮ್ಮೇಳನದಲ್ಲಿ ತನ್ನ ಕುಸ್ತಿ ಬೂಟುಗಳನ್ನು ಮೇಜಿನ ಮೇಲಿಟ್ಟು ನಾನು ಕುಸ್ತಿ ಬಿಡುತ್ತಿದ್ದೇನೆ ಎಂದು ಸಾರಿದ ಚಿತ್ರ ಮತ್ತು ನಂತರ ಅವರ ಸಹ–ಹೋರಾಟಗಾರರ ಕ್ರಮಗಳು ಕೊನೆಗೂ ಕೇಂದ್ರ ಕ್ರೀಡಾ ಸಚಿವಾಲಯದ ಮೇಲೆ ಒತ್ತಡ ತಂದಿತು ಎನ್ನಲಾಗಿದೆ. ಆದರೂ ಈಗಲೂ ಅದು ಕ್ರಮ ಕೈಗೊಂಡದ್ದು, ಮೇಲೆ ಹೇಳಿದಂತೆ, ನಿಬಂಧನೆಗಳನ್ನು ಉಲ್ಲಂಘಿಸಿದ್ದಾರೆ ಮತ್ತು ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ ಎಂಬ ಕಾರಣ ಕೊಟ್ಟು ಎಂಬುದನ್ನು ಗಮನಿಸಬೇಕು.

'ಬೇಟಿ ಖಿಲಾವೋ' ಎಂಬುದು 'ಬೇಟಿ ರುಲಾವೋ' ಆಗದಿರಲಿ

ಈ ನಡುವೆ ಮೂಡಬರುತ್ತಿರುವ ಚಿತ್ರವೆಂದರೆ, ಒಂದೆಡೆಯಲ್ಲಿ ಬ್ರಿಜ್ ಭೂಷಣ್ ಸಿಂಗ್ ಪಾಳಯ ಡಬ್ಲ್ಯುಎಫ್‌ಐ ಚುನಾವಣೆ ತಾವು ನಿರಪರಾಧಿಗಳು, ತಮ್ಮ ಮೇಲಿನ ಆಪಾದನೆಗಳು ರಾಜಕೀಯ ಪ್ರೇರಿತ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದರೆ,

ಪುಟ 10 ಕ್ಕೆ



ಕೃಪೆ: ಸಂದೀಪ್ ಅಧ್ವರ್ಯು

At the podium... ಕೃಪೆ: ಸಜಿತ್ ಕುಮಾರ್ (ಡೆಕ್ಕನ್ ಹೆರಾಲ್ಡ್)



COP28 UAE

ದುಬೈ ಪರಿಸರ ಸಮ್ಮೇಳನ COP 28 ಹವಾಮಾನ ಬದಲಾವಣೆಯ ಖಾಯಂ ಅಪಾಯ ತೈಲ ಕಂಪನಿ, ಶ್ರೀಮಂತ ದೇಶಗಳು ಖುಶ್

ದೇಶಗಳು ಈಗಾಗಲೇ ಜಾರಿ ಮಾಡಲು ಯತ್ನಿಸುತ್ತಿರುವ "ಪಳೆಯುಳಿಕೆ ಇಂಧನಗಳಿಂದ ಪರಿವರ್ತನೆ"ಯ ನಿರ್ಧಾರವನ್ನು ದಾಖಲಿಸುವುದರ ಹೊರತಾಗಿ ಮತ್ತು 1.5 ಡಿಗ್ರಿ ಸಿ ಗುರಿಯನ್ನು ಸಾಧಿಸಲು ಹೆಚ್ಚಿನ ಹೊರಸೂಸುವಿಕೆ ಕಡಿತದ ವಿಶಾಲ ಜಾಗತಿಕ ಗುರಿಯನ್ನು ಸೂಚಿಸಿದ್ದು ಬಿಟ್ಟರೆ ಅಔಕ 28 ಹೆಚ್ಚಿನ ಸಾಧನೆಯನ್ನೇನೂ ಮಾಡಲಿಲ್ಲ. ಅಂತಿಮ ಕರಡು ಪಳೆಯುಳಿಕೆ ಇಂಧನಗಳ ಉತ್ಪಾದನೆ ಮತ್ತು ಬಳಕೆಯನ್ನು ಇನ್ನಷ್ಟು ಕಾಲ ಮುಂದುವರೆಸುವ ಅನೇಕ ಲೋಪದೋಷಗಳನ್ನು ಹೊಂದಿತ್ತು. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿರುವ ಕಂಪನಿಗಳು ಮತ್ತು ಶ್ರೀಮಂತ ಅಭಿವೃದ್ಧಿ ಹೊಂದಿದ ದೇಶಗಳ ಪರವಾಗಿತ್ತು.ಪಳೆಯುಳಿಕೆ ಇಂಧನ ಉದ್ಯಮವು ಸಂತೋಷದಿಂದ ಹಿಂತಿರುಗಿತು, ಅಭಿವೃದ್ಧಿ ಹೊಂದಿದ ರಾಷ್ಟಗಳು ಅಂತರ-ರಾಷ್ಟ ಸಮಾನತೆಯ ವಿರುದ್ಧ ಮತ್ತೊಂದು ಹೊಡೆತವನ್ನು ಯಶಸ್ವಿಯಾಗಿ ನಿಭಾಯಿಸಿದವು ಮತ್ತು ಗಂಭೀರವಾದ ನೆರವಿಗೆ ಬದ್ಧವಾಗುವುದರಿಂದ ತಪ್ಪಿಸಿಕೊಂಡವು. ಮೋದಿಯವರ ಭಾಷಣ ಹೊರತುಪಡಿಸಿ, COP 28 ರಲ್ಲಿ ಭಾರತವು ಬಹುತೇಕ ಅಗೋಚರವಾಗಿತ್ತು ಮತ್ತು ಅದರ ಸೊಲ್ಲು ಕೇಳಿ ಬರಲಿಲ್ಲ.

ಎಲ್ಲಾ ಜಾಗತಿಕ ಪರಿಸರ ಸಮ್ಮೇಳನಗಳು (COP)ಗಳು ಮುಖ್ಯವಾದವು ಮತ್ತು ಜಗತ್ತಿನ ಗಂಭೀರ ಸಮಸ್ಯೆಗಳನ್ನು ನಿರ್ವಹಿಸಲು ಪ್ರಯತ್ನಿಸುತ್ತವೆ. ಕೆಲವು ಅಔಕ ಗಳು ತಮ್ಮ ವಿಶೇಷ ಪ್ರಾಮುಖ್ಯತೆ, ಮೈಲಿಗಲ್ಲುಗಳು, ತೆಗೆದುಕೊಳ್ಳಬೇಕಾದ ಪ್ರಮುಖ ನಿರ್ಧಾರಗಳು ಮತ್ತು ಅವುಗಳ ಫಲಿತಾಂಶಗಳಿಗಾಗಿ ಎದ್ದು ಕಾಣುತ್ತವೆ. ಉದಾಹರಣೆಗೆ, 1997 ರಲ್ಲಿ COP3 ಕ್ಯೋಟೋಪ್ರೊಟೊಕಾಲ್ ನ್ನು (ಕೆಪಿ) ಪ್ರಾರಂಭಿಸಿತು, ಇದು ಸುಮಾರು ಎರಡು ದಶಕಗಳ ಕಾಲ ಹೊರಸೂಸುವಿಕೆ ನಿಯಂತ್ರಣ ನಿರ್ವಹಣೆಯ ವಿನ್ಯಾಸವನ್ನು ರೂಪಿಸಿತು. 2008 ರಲ್ಲಿ ಕೋಪನ್‌ಹ್ಯಾಗನ್ನಲ್ಲಿ COP15 ರಲ್ಲಿ ಕೆಪಿಗೆ ಉತ್ತರಾಧಿಕಾರಿಯನ್ನು ಪ್ರಾರಂಭಿಸುವ ನಿರೀಕ್ಷೆಯಿತ್ತು, ಆದರೆ ಯಾವುದೇ ಒಪ್ಪಂದವಿಲ್ಲದೆ ಕುಸಿಯಿತು. ಆದರೆ ಪ್ರಮುಖ ಚೌಕಟ್ಟುಗಳನ್ನು ರೂಪಿಸಿತು. ಮತ್ತು 2015 ರಲ್ಲಿ ಪ್ಯಾರಿಸ್ನಲ್ಲಿ COP 21 ಪ್ಯಾರಿಸ್ ಒಪ್ಪಂದವನ್ನು (ಪಿಎ) ಪ್ರಾರಂಭಿಸಿತು, ಇದು ಪ್ರಸ್ತುತ ಹೊರಸೂಸುವಿಕೆ ನಿಯಂತ್ರಣ ನಿರ್ವಹಣಾ ವಿಧಾನವಾಗಿದೆ.

ದುಬೈನಲ್ಲಿನ COP 28 ಒಂದು ಮೈಲಿಗಲ್ಲಾಗಿದ್ದು, ಮೊದಲ ಐದು ವರ್ಷದ ಜಾಗತಿಕ ಪರಿಶೀಲನೆ (ಗ್ಲೋಬಲ್ಸ್ಟಾಕ್ಟೇಕ್-ಜಿ.ಎಸ್.ಟಿ) ಅಥವಾ ಪ್ಯಾರೀಸ್ ಒಪ್ಪಂದದ ಅಡಿಯಲ್ಲಿ ನಿಗದಿಪಡಿಸಿದ ಗುರಿಗಳಿಗೆ ಸಂಬಂಧಿಸಿದಂತೆ ನಾವು ಎಲ್ಲಿದ್ದೇವೆ ಎಂಬುದರ ಮೌಲ್ಯ ಮಾಪನವನ್ನು ಮಾಡಬೇಕಿತ್ತು. ಹವಾಮಾನ ಬಿಕ್ಕಟ್ಟು. ಅನಿಲ ಹೊರಸೂಸುವಿಕೆ ತಗ್ಗಿಸುವಿಕೆ ಅಥವಾ ಕಡಿತ, ಹವಾಮಾನ ಪರಿಣಾಮಗಳಿಗೆ ಹೊಂದಿಕೊಳ್ಳುವುದು ಅಥವಾ ಅದರ ವಿರುದ್ಧ ಸ್ಥಿತಿ ಸ್ಥಾಪಕತ್ವವನ್ನು ನಿಭಾಯಿಸುವುದು ಮತ್ತು ನಿರ್ಮಿಸುವುದು ಜಿ.ಎಸ್.ಟಿ. ಯಲ್ಲಿ ಒಳಗೊಂಡಿದೆ. ಅಭಿವೃದ್ಧಿಶೀಲ ರಾಷ್ಟಗಳಿಗೆ ಅದಕ್ಕಾಗಿ ಹಣಕಾಸು ಮತ್ತು ಇತರ ಬೆಂಬಲವನ್ನು ದೊರಕಿಸುವುದನ್ನೂ ಅದು ಒಳಗೊಂಡಿದೆ. ದೇಶದ ಪಕ್ಷಗಳು ಮಾತ್ರವಲ್ಲದೆ ನಾಗರಿಕ ಸಮಾಜ, ಖಾಸಗಿ ಕ್ಷೇತ್ರದಂತಹ ಇತರ ಪಾಲುದಾರರನ್ನು ಒಳಗೊಂಡ ಮೂರು ಹಂತದ ತಾಂತ್ರಿಕ ಸಂವಾದಗಳ ಮೂಲಕ ಪ್ಯಾರೀಸ್ ಒಪ್ಪಂದದಲ್ಲಿ ನಿಗದಿಪಡಿಸಿದಂತೆ ಜಿ.ಎಸ್.ಟಿ. ಪ್ರಕ್ರಿಯೆಯು 2023 ರಲ್ಲಿ ಪ್ರಾರಂಭವಾಯಿತು. ಅವರೆಲ್ಲ ವ್ಯಕ್ತಪಡಿಸಿದ ವಿವಿಧ ಅಭಿಪ್ರಾಯಗಳನ್ನು ಸಂಗ್ರಹಿಸುವ ವರದಿಯನ್ನು ಕೆಲವು ತಿಂಗಳ ಹಿಂದೆ ಬಿಡುಗಡೆ ಮಾಡಲಾಯಿತು, ಮತ್ತು ಯುಎನ್ ಹವಾಮಾನ ಸಚಿವಾಲಯವು ಸಿದ್ಧಪಡಿಸಿದ ಸಂಶ್ಲೇಷಣಾ ವರದಿಯನ್ನು ಸೆಪ್ಟೆಂಬರ್ ನಲ್ಲಿ ಬಿಡುಗಡೆ ಮಾಡಲಾಯಿತು. ಇವೆರಡೂ COP 28 ಗೆ ಒಳಹರಿವಿನಂತೆ ಕಾರ್ಯ ನಿರ್ವಹಿಸುತ್ತವೆ. COP 28 ನಲ್ಲಿನ ಜಿ.ಎಸ್.ಟಿ. ಪರಿಶೀಲನೆಯ ಆಧಾರದ ಮೇಲೆ, ದೇಶಗಳು ಹೆಚ್ಚಿದ ಹೊರಸೂಸುವಿಕೆ ಕಡಿತದ ಗುರಿಗಳನ್ನು 2025 ರ ಮಧ್ಯಭಾಗದಲ್ಲಿ ಸಲ್ಲಿಸಬೇಕಾಗುತ್ತದೆ. ಆ ವರ್ಷದ ಕೊನೆಯಲ್ಲಿ ನಡೆಯುವ COP 30 ನಲ್ಲಿ ಅವನ್ನು ಅಂತಿಮಗೊಳಿಸಲಾಗುತ್ತದೆ.

ಭೂಮಿಯ ಮತ್ತು ಅದರ ಎಲ್ಲಾ ನಿವಾಸಿಗಳ ಭವಿಷ್ಯಕ್ಕಾಗಿ ಹವಾಮಾನ ಬದಲಾವಣೆ ತಡೆಯುವ ಅಗತ್ಯವಿರುವುದರಿಂದ COP 28 ಮತ್ತು ಜಿ.ಎಸ್.ಟಿ ಇನ್ನಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಜಿ.ಎಸ್.ಟಿ ವರದಿಗಳು ಎಲ್ಲಾ ಪ್ರಮುಖ-ಮುಖ್ಯವಾಗಿ ಹವಾಮಾನ ಬದಲಾವಣೆಯ ಅಂತರ-ಸರ್ಕಾರಿ ಸಮಿತಿ (ಐಪಿಸಿಸಿ)-ವೈಜ್ಞಾನಿಕ ಅಧ್ಯಯನಗಳಿಂದ ಈಗಾಗಲೇ ತಿಳಿದಿರುವದನ್ನು ತಿಳಿಸುತ್ತವೆ. ಕೈಗಾರಿಕಾ ಪೂರ್ವದ ಮಟ್ಟಕ್ಕಿಂತ ಜಾಗತಿಕ ತಾಪನವನ್ನು 1.5 ಡಿಗ್ರಿಸಿಗೆ ನಿರ್ಬಂಧಿಸುವ ಗುರಿಯನ್ನು ಮುಟ್ಟುವ ಸಾಧ್ಯತೆ ವೇಗವಾಗಿ ಇಲ್ಲವಾಗುತ್ತಿದೆ. (2 ಡಿಗ್ರಿಸಿಯ ಹಿಂದಿನ ಗುರಿಯನ್ನು ವಾಸ್ತವಿಕವಾಗಿ ಕೈಬಿಡಲಾಗಿದೆ ಎಂದು ಇಲ್ಲಿ ಗಮನಿಸಬೇಕು) ಹೊರಸೂಸುವಿಕೆಯ ಕಡಿತದ ಪ್ರಸ್ತುತ ಪ್ರಯತ್ನಗಳು ಏನೇನೂ ಸಾಲದು ಎಂದು ಸ್ಪಷ್ಟವಾಗುತ್ತಿದೆ. ಜಾಗತಿಕ ಸರಾಸರಿ ತಾಪಮಾನ ಏರಿಕೆಯು ಈಗಾಗಲೇ ಆಮಿತಿಗೆ ಅಪಾಯಕಾರಿಯಾಗಿ ಹತ್ತಿರದಲ್ಲಿದೆ ಈ ವರ್ಷ ಸುಮಾರು 80 ದಿನಗಳಲ್ಲಿ ಈ ಮಿತಿಯನ್ನು ಈಗಾಗಲೇ ಮುಟ್ಟಿದ್ದು, 2023 ಈ ಅತ್ಯಂತ ಬಿಸಿಯಾದ ದಶಕದಲ್ಲಿ ಇದುವರೆಗಿನ ಅತ್ಯಂತ ಬಿಸಿಯಾದ ವರ್ಷವಾಗಿದೆ. ಈಗಾಗಲೇ, ತೀವ್ರವಾದ ಶಾಖದ ಅಲೆಗಳು, ಅನಾವೃಷ್ಟಿಗಳು, ಕಾಡಿನ ಬೆಂಕಿ, ಪ್ರವಾಹ ಮತ್ತು ತೀವ್ರ ಮಳೆಯ ಘಟನೆಗಳು ಜಗತ್ತಿನಾದ್ಯಂತ ಹೆಚ್ಚು ಹೆಚ್ಚಾಗಿ ವರದಿಯಾಗುತ್ತಿವೆ. ಧ್ರುವ ಮತ್ತು ಹಿಮನದಿಯ ಹಿಮದ ಕರಗುವಿಕೆ ಮತ್ತು ಸಮುದ್ರ ಮಟ್ಟದ ಏರಿಕೆಗಳೂ ಮತ್ತೆ ಹಿಂದಿನ ಸ್ಥಿತಿಗೆ ಮರಳಲಾಗದಂತೆ ಜರುಗುತ್ತಿರುವಂತೆ ಕಾಣುತ್ತಿದೆ. ಹವಾಮಾನ ಬದಲಾವಣೆಗೆ ಕಾರಣವಾಗುವ ಹಸಿರು ಮನೆ ಅನಿಲಗಳ (ಜಿಎಚ್ಜಿ)-ಅದರಲ್ಲೂ ವಿಶೇಷವಾಗಿ ಇಂಗಾಲದ ಡೈಆಕ್ಸೈಡ್ - ಹೊರಸೂಸುವಿಕೆಯನ್ನು ನಿಯಂತ್ರಿಸುವ ತುರ್ತು ದುಬೈನ ಕಾರ್ಯಸೂಚಿಯಲ್ಲಿ ಸ್ಪಷ್ಟವಾಗಿತ್ತು.

ಜಗದ ಸುತ್ತ

ವಸಂತರಾಜ ಎನ್.ಕೆ.



ಪಳೆಯುಳಿಕೆ ಇಂಧನಗಳು

ಆರಂಭದಿಂದಲೂ, ಎಲ್ಲಾ ಜಿಎಚ್ಜಿ ಗಳಲ್ಲಿ ಸುಮಾರು 75 ಪ್ರತಿಶತದಷ್ಟು ಮತ್ತು ಜಾಗತಿಕ ಇಂಗಾಲದ ಡೈಆಕ್ಸೈಡ್ (ಸಿಒ 2) ಹೊರಸೂಸುವಿಕೆಯ ಶೇಕಡಾ 90 ರಷ್ಟಕ್ಕೆ ಮೂಲ ಕಾರಣವಾದ ಪಳೆಯುಳಿಕೆ ಇಂಧನಗಳು (ಅಂದರೆ ಕಲ್ಲಿದ್ದಲು, ತೈಲ ಮತ್ತು ನೈಸರ್ಗಿಕ ಅನಿಲ) COP 28 ರ ಮಾತುಕತೆಗಳ ನಡಾವಳಿಗಳ ಕೇಂದ್ರದಲ್ಲಿತ್ತು. ಪಳೆಯುಳಿಕೆ ಇಂಧನಗಳ ಪಾತ್ರವನ್ನು ಮತ್ತು ಹೊರಸೂಸುವಿಕೆಯನ್ನು ನಿಯಂತ್ರಿಸುವ ಹೆಚ್ಚಿನ ಪ್ರಯತ್ನಗಳು ಈ ಇಂಧನಗಳ ಬಳಕೆಯನ್ನು (ಉದಾ: ವಿದ್ಯುತ್ ಉತ್ಪಾದನೆ ಮತ್ತು ಸಾರಿಗೆಯಲ್ಲಿ) ಕಡಿಮೆ ಮಾಡುವ ಗುರಿಯನ್ನು ಹೊಂದಿವೆ. ಆದರೂ COP ಸಮ್ಮೇಳನದಲ್ಲಿ ಪಳೆಯುಳಿಕೆ ಇಂಧನಗಳು ಕಾರ್ಯಸೂಚಿಯಲ್ಲಿರುವುದು COP 28 ರಲ್ಲಿ ಮೊದಲ ಬಾರಿಗೆ ಎಂಬುದು ಆಶ್ಚರ್ಯಕರವಾದರೂ ನಿಜ!

COP 28 ದುಬೈನಲ್ಲಿ ನಡೆಯುತ್ತಿದ್ದುದರಿಂದ, ಸಮ್ಮೇಳನದ ಮೇಲೆ ತೈಲ ಉದ್ಯಮದ ಪ್ರಭಾವ ಮತ್ತು ಅದರ ಪೋಷಕ ಸರ್ಕಾರಗಳ ಬಗ್ಗೆ ಆತಂಕಗಳು ಈಗಾಗಲೇ ಇದ್ದವು. ವಿಶ್ವದ ಅತಿ ದೊಡ್ಡ ತೈಲ ಮತ್ತು ಅನಿಲ ಉತ್ಪಾದಕ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯ ಸಿಇಒ ಹಾಗೂ ಯುಎಇ ಮಂತ್ರಿಯಾಗಿರುವ ಡಾ. ಸುಲ್ತಾನ್ ಅಲ್-ಜಾಬರ್, COP 28 ಅಧ್ಯಕ್ಷರಾಗಿದ್ದದ್ದು ಇನ್ನಷ್ಟು ಆತಂಕಗಳಿಗೆ ಕಾರಣವಾಗಿತ್ತು. ಇದು ಸಾಲದೆಂಬಂತೆ "ಹವಾಮಾನ ಬದಲಾವಣೆಯನ್ನು ನಿಭಾಯಿಸಲು ಪಳೆಯುಳಿಕೆ ಇಂಧನಗಳನ್ನು ಕಡಿತಗೊಳಿಸಲು ಯಾವುದೇ ವಿಜ್ಞಾನ" ಕರೆ ನೀಡುವುದಿಲ್ಲ ಎಂದು ಸಂದರ್ಶನವೊಂದರಲ್ಲಿ ಅವರ ಹೇಳಿಕೆ ಎಲ್ಲರೂ ಹುಬ್ಬೇರಿಸುವಂತೆ ಮಾಡಿತ್ತು. COP ಸಮ್ಮೇಳನಗಳಲ್ಲಿ ಪಳೆಯುಳಿಕೆ ಇಂಧನ ಕಂಪನಿಗಳ ಪಾಲುಗೊಳ್ಳುವಿಕೆಯನ್ನು ಸ್ಥಿರವಾಗಿ ಹೆಚ್ಚಿಸುತ್ತಿವೆ ಎಂದು ಪತ್ರಕರ್ತರು ಮತ್ತು ಕಾರ್ಯಕರ್ತರು ಗಮನಿಸಿದ್ದರು, ಆಗಾಗ್ಗೆ ಅಧಿಕೃತ ದೇಶದ ನಿಯೋಗಗಳ ಸದಸ್ಯರಾಗಿಯೂ ಸಹ, ಮುಖ್ಯ ಸಮಾಲೋಚನಾ ಕೊಠಡಿಗಳಿಗೆ ಅವರು ಪ್ರವೇಶ ಗಿಟ್ಟಿಸಿಕೊಳ್ಳುತ್ತಿದ್ದರು. ಅವರ ಸಂಖ್ಯೆಯು ದುಬೈನಲ್ಲಿ 2000 ರವರೆಗೆ ಏರಿತ್ತು. ಇದು ಯಾವುದೇ ಒಂದು ದೇಶದ (ಅತ್ಯಂತ ದೊಡ್ಡ ನಿಯೋಗ ಬ್ರೆಜಿಲ್ ನದ್ದು 400) ನಿಯೋಗಕ್ಕಿಂತ ದೊಡ್ಡದಾಗಿತ್ತು ಎಂಬುದು ಗಮನಾರ್ಹ.

ಸಕಾರಾತ್ಮಕ ದೃಷ್ಟಿಯಿಂದ, ಸತತ ಮೂರು ಜಿ.ಎಸ್.ಟಿ. ಕರಡು ಪಠ್ಯಗಳು ವೈಜ್ಞಾನಿಕ ಸಂಶೋಧನೆಗಳನ್ನು ಪ್ರತಿಧ್ವನಿಸಿದವು. 1.5 ಡಿಗ್ರಿ ಸಿ ಗುರಿಯನ್ನು ಸಾಧಿಸಬೇಕಾದರೆ, 2019 ರ ಮಟ್ಟಕ್ಕೆ ಹೋಲಿಸಿದರೆ "2030 ರ ವೇಳೆಗೆ ಜಾಗತಿಕ ಶೇಕಡಾ 43 ಮತ್ತು 2035 ರ ವೇಳೆಗೆ 60 ಪ್ರತಿಶತದಷ್ಟು ಹೊರಸೂಸುವಿಕೆಯ, ತೀವ್ರ ಕ್ಷಿಪ್ರ ಮತ್ತು ನಿರಂತರ ಕಡಿತದ ಅಗತ್ಯವಿದೆಯೆಂದು ಈ ವರದಿ ಪುನರುಚ್ಚರಿಸಿದೆ. ಇದು ಜಾಗತಿಕ ಹೊರಸೂಸುವಿಕೆಯು 2020 ರ ಆಸುಪಾಸಿನಲ್ಲಿ ಅಥವಾ ಕನಿಷ್ಠ 2025ರ ವೇಳೆಗೆ ನಿರೀಕ್ಷಿಸಲಾಗಿರುವ ಗರಿಷ್ಠ ಮಟ್ಟ ತಲುಪಿ, 2050 ರ ವೇಳೆಗೆ ನಿವ್ವಳ-ಶೂನ್ಯ CO2 ಅನ್ನು ತಲುಪಲು ಕೂಡಾ ಅಗತ್ಯ ಎಂದಿವೆ ಸಂಶೋಧನೆಗಳು.

ಆಘಾತಕಾರಿ ಕರಡುಗಳು

ಪಳೆಯುಳಿಕೆ ಇಂಧನಗಳ ಹಂತ-ಹಂತವಾಗಿ ಕಡಿತ ಅಥವಾ ನಿಲುಗಡೆ ಮಾಡುವ ಕೆಲವು ಆಸಕ್ತಿದಾಯಕ ಉಲ್ಲೇಖಗಳನ್ನು ಒಳಗೊಂಡಿದ್ದ ಆರಂಭಿಕ ಪರಿಶೋಧನಾ ಕರಡಿಗೆ ಮಿಶ್ರ ಪ್ರತಿಕ್ರಿಯೆಗಳು ಬಂದವು. ಆದರೆ ಅದನ್ನು ಸಮಂಜಸವಾದ ಆರಂಭಿಕ ಕರಡಾಗಿ ಸ್ವೀಕರಿಸಲಾಯಿತು. ಹೆಚ್ಚಿನ ಮಾತುಕತೆಗಳ ನಂತರ ಅಧ್ಯಕ್ಷರು ಸಿದ್ಧಪಡಿಸಿದ ಎರಡನೆಯ ಕರಡನ್ನು ಅಂತಿಮ ದಿನದ ಹಿಂದಿನ ದಿನದಂದು ಮಾತ್ರ ಹಂಚಲಾಯಿತು. ಬೇಕೆಂತಲೇ ಹೀಗೆ ಮಾಡಲಾಯಿಯೆ ಇಲ್ಲವೇ ಎಂಬದು ಸ್ಪಷ್ಟವಾಗಲಿಲ್ಲ. ಆದರೆ ಈ ಕರಡು ಎಲ್ಲಾ ವಿಭಾಗಗಳಿಂದಲೂ ತೀವ್ರ ಆಕ್ರೋಶ ಭರಿತ ಪ್ರತಿಕ್ರಿಯೆಗಳನ್ನು ಉಂಟು ಮಾಡಿತು. "ಪಳೆಯುಳಿಕೆ-ಇಂಧನ ಉತ್ಪಾದನೆ ಮತ್ತು ಬಳಕೆಯ "ಕಡಿತ" ಮತ್ತು "ಹೊರಸೂಸುವಿಕೆಯ ಕಡಿತದ" ಕಡೆಗೆ ದೇಶಗಳು "ಕೈಗೊಳ್ಳಬಹುದಾದ ಕ್ರಮ"ಗಳ ಆಯ್ಕೆಗಳ ಪಟ್ಟಿಯನ್ನು ಮಾತ್ರ ಇದು ನೀಡಿತು. ಅಭಿವೃದ್ಧಿ ಹೊಂದಿದ ಶ್ರೀಮಂತ ದೇಶಗಳಿಂದ ಹಣಕಾಸಿನ ನೆರವಿನ ಬಗ್ಗೆ ಸೊಲ್ಲಿರಲಿಲ್ಲ. ಸಣ್ಣ ದ್ವೀಪ ರಾಜ್ಯಗಳು ಈ ಪಠ್ಯವನ್ನು ಮರಣ ದಂಡನೆ ಎಂದು ಕರೆದವು, ಆಫ್ರಿಕನ್ ದೇಶಗಳು ಹಣದ ನೆರವಿನ ಬಗ್ಗೆ ಭರವಸೆ ನೀಡದೆ ದುಬೈನಿಂದ ಹೊರ ಹೋಗುವುದಿಲ್ಲ ಎಂದು ಹೇಳಿದವು. ಇಂತಹ ಪಠ್ಯದೊಂದಿಗೆ 1.5 ಡಿಗ್ರಿ ಸಿ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಯುರೋ ಕೂಟ ಹೊರನಡೆಯುವ ಬೆದರಿಕೆ ಹಾಕಿತು.

ಅನಿವಾರ್ಯವಾಗಿ, COP 28 ಸಮ್ಮೇಳನವನ್ನು ಒಂದು ದಿನ ವಿಸ್ತರಿಸಲಾಯಿತು ಮತ್ತು ಮೂಲ ಮುಕ್ತಾಯದ ದಿನದ ಪೂರ್ಣೋರ್ದು ದಿನದ ನಂತರ ಅಂದರೆ ಡಿಸೆಂಬರ್ 13 ರ ಬೆಳಿಗ್ಗೆ ಹೊಸ ಪಠ್ಯವನ್ನು ಮಂಡಿಸಲಾಯಿತು. ಈ ಕರಡು ಪಳೆಯುಳಿಕೆ "ಪಳೆಯುಳಿಕೆ ಇಂಧನಗಳಿಂದ ಪರಿವರ್ತನೆ" ಗೆ ಕರೆ ಕೊಟ್ಟಿತು. ಹಲವಾರು ದೇಶಗಳು ಮತ್ತು ವೀಕ್ಷಕರು ಇದು ಪಳೆಯುಳಿಕೆ ಇಂಧನ ಯುಗದ ಅಂತ್ಯದ ಸಂಕೇತವೆಂದು ಅರ್ಥೈಸಬೇಕು ಎಂದು ಸೂಚಿಸಿದರು. ಈ ರಾಜಿ ಕುರಿತ ನಿಟ್ಟುಸಿರಿನಿಂದಾಗಿ ಈ ಕರಡಿನಲ್ಲಿನ ಹಲವು ಗಂಭೀರ ನ್ಯೂನತೆಗಳನ್ನು ದುರದೃಷ್ಟವಶಾತ್ ಕಡೆಗಣಿಸಲಾಗಿದೆ.

ಅಂತಿಮ ಕರಡು ಪಳೆಯುಳಿಕೆ ಇಂಧನಗಳ ಉತ್ಪಾದನೆ ಮತ್ತು ಬಳಕೆಯನ್ನು ಇನ್ನಷ್ಟು ಕಾಲ ಮುಂದುವರೆಸುವ ಅನೇಕ ಲೋಪದೋಷಗಳನ್ನು

ಪುಟ 10 ಕ್ಕೆ

2024ರಲ್ಲಿ ದೇಶ ಕಾಣಲಿದೆ ಮಹಾ ಸಮರ

ಪ್ರಜಾಪ್ರಭುತ್ವ, ಜಾತ್ಯತೀತತೆ, ಒಕ್ಕೂಟತತ್ವದ ರಕ್ಷಣೆಗೆ ಸಂಘರ್ಷ

2023 ಸರಿದಿದೆ. ಹೊಸ ವರುಷ ಬಂದಿದೆ. ಕಳೆದ ವರ್ಷದಲ್ಲಿನ ಪ್ರಮುಖ ರಾಜಕೀಯ ವಿದ್ಯಾಮಾನಗಳ ಬಗ್ಗೆ ವಿವರಿಸಿರುವ ಲೇಖಕರು. ಹೊಸವರ್ಷದಲ್ಲಿನ ಸಂಕಲ್ಪಗಳನ್ನು ಮುಂದಿರಿಸಿದ್ದಾರೆ.

ಪ್ರಕಾಶ್ ಕಾರತ್

ಇಸ್ರೇಲಿ ಯುದ್ಧ-ಯಂತ್ರದಿಂದ ಗಾಜಾದಲ್ಲಿ ನಡೆಯುತ್ತಿರುವ ಪ್ಯಾಲೆಸ್ತೀನಿಯರ ನರಮೇಧದ ಕರಾಳ ನೆರಳಿನೊಂದಿಗೆ 2023ನೇ ವರ್ಷ ಅಂತ್ಯಗೊಂಡಿದೆ. ಸುಮಾರು ಮೂರು ತಿಂಗಳಿಂದ ಇಸ್ರೇಲ್ ನಡೆಸುತ್ತಿರುವ ಬರ್ಬರ ಆಕ್ರಮಣದಿಂದಾಗಿ ಡಿಸೆಂಬರ್ 26ರ ವರೆಗೆ ಗಾಜಾದಲ್ಲಿ 20,915 ಜನರ ಮಾರಣಹೋಮವಾಗಿದೆ. ಅವರಲ್ಲಿ 8,000ಕ್ಕೂ ಹೆಚ್ಚು ಮಂದಿ ಮಕ್ಕಳಾಗಿದ್ದಾರೆ. 53,918 ಮಂದಿ ಗಾಯಗೊಂಡಿದ್ದು ಅಸಂಖ್ಯಾತ ಜನರು ಬಾಂಬ್ ದಾಳಿಯಿಂದ ಉಧ್ವಸ್ಥಗೊಂಡ ಕಟ್ಟಡಗಳ ಅವಶೇಷಗಳಡಿ ಇನ್ನೂ ಸಿಕ್ಕಿ ಹಾಕಿಕೊಂಡಿದ್ದಾರೆ.

ಪ್ಯಾಲೆಸ್ತೀನಿಯರ ಮೇಲಿನ ಯುದ್ಧಕ್ಕೆ ಸಂಪೂರ್ಣ ಬೆಂಬ ನೀಡಿರುವ ಅಮೆರಿಕ, ಅಕ್ಟೋಬರ್ 7ರಂದು ಸಂಘರ್ಷ


ಗಾಜಾ– ಇಸ್ರೇಲ್ ಅಮಾನುಷ ದಾಳಿ ಮಾರಣಹೋಮ

ಆರಂಭವಾದಾಗಿನಿಂದಲೂ ಹೆಚ್ಚು ಮಾರಕ ಆಯುಧಗಳು ಮತ್ತು ಸಲಕರಣೆಗಳನ್ನು ಇಸ್ರೇಲ್‌ಗೆ ಕಳಿಸಿದೆ. ತಕ್ಷಣದ ಕದನ ವಿರಾಮಕ್ಕೆ ನೀಡುವ ಎಲ್ಲ ಕರೆಗಳನ್ನು ಅಮೆರಿಕ ತಡೆ ಹಿಡಿಯುತ್ತಿದೆ. ವಿಶ್ವ ಸಂಸ್ಥೆ ಭದ್ರತಾ ಮಂಡಳಿಯಲ್ಲಿ ಮಂಡನೆಯಾಗುವ ಅಂಥ ನಿರ್ಣಯಗಳನ್ನು ತನ್ನ ವಿಟೋ ಅಧಿಕಾರ ಬಳಸಿ ವಿಫಲಗೊಳಿಸುತ್ತಿದೆ. ಇಸ್ರೇಲ್‌ಗೆ ಅಮೆರಿಕ ಆಡಳಿತದ ಅಚಲ ಬೆಂಬಲ ಅಚ್ಚರಿಯ ವಿಷಯವೇನೂ ಅಲ್ಲ. ಆದರೆ ಭಾರತಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇಸ್ರೇಲ್ ಕೃತ್ಯಗಳಿಗೆ ಸಂಪೂರ್ಣ ಬೆಂಬಲ ಘೋಷಿಸುತ್ತಿರುವ ಮೋದಿ ಸರ್ಕಾರದ ನೀತಿಯ ಪಲ್ಲಟವೇ ಇಲ್ಲಿರುವ ಹೊಸ ವಿಷಯವಾಗಿದೆ. ಅಕ್ಟೋಬರ್ ತಿಂಗಳಲ್ಲಿ ವಿಶ್ವ ಸಂಸ್ಥೆ ಮಹಾ ಸಭೆಯಲ್ಲಿ (ಜನರಲ್ ಅಸೆಂಬ್ಲಿ) ಕದನ ವಿರಾಮಕ್ಕೆ ಕರೆ ನೀಡುವ ಗೊತ್ತುವಳಿಯೊಂದಕ್ಕೆ ಬೆಂಬಲ ನೀಡಲು ನಿರಾಕರಿಸುವ ಮಟ್ಟಕ್ಕೂ ಭಾರತ ಇಳಿದಿತ್ತು. ಡಿಸೆಂಬರ್‌ನಲ್ಲಿ ಜನರಲ್ ಅಸೆಂಬ್ಲಿಯಲ್ಲಿ ಮಂಡಿತವಾದ ಕದನ ವಿರಾಮ ಕುರಿತ ಎರಡನೇ ಗೊತ್ತುವಳಿಗೆ ಭಾರತ ಒಲ್ಲದ ಮನಸ್ಸಿನಿಂದ ಬೆಂಬಲ ಮತ ನೀಡಿತ್ತು. ಹಾಗೆ ಮಾಡದಿದ್ದರೆ ಭಾರತ ಜಾಗತಿಕ ಸಮುದಾಯದಿಂದ ಪ್ರತ್ಯೇಕಗೊಳ್ಳುತ್ತಿತ್ತು. ಯಾಕೆಂದರೆ ಏಶ್ಯಾದ ಪ್ರತಿಯೊಂದು ದೇಶ ಕದನವಿರಾಮದ ಪರವಾಗಿ ಮತ ಚಲಾಯಿಸಿತ್ತು.

2023 ಮೋದಿ ಸರ್ಕಾರದ ಅಧಿಕಾರದ ಎರಡನೇ ಅವಧಿಯ ಕೊನೆಯ ವರ್ಷವಾಗಿದೆ. ಭಾರತೀಯ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವದ ಗೋಡೆಗಳು ಮುಚ್ಚುತ್ತಿರುವ ಇನ್ನೊಂದು ವರ್ಷಕ್ಕೂ 2023 ಸಾಕ್ಷಿಯಾಯಿತು. ಹೊಸ ಕಟ್ಟಡಕ್ಕೆ ಸಂಸತ್ತನ್ನು ವರ್ಗಾಯಿಸಿದ್ದು ಅದರ ಹೊಸ ಅವಹೇಳನಕಾರಿ ಸ್ಥಾನಮಾನದ ಸಂಕೇತವಾಗಿದೆ. ಪ್ರಸಕ್ತ ಸಂಸತ್ತಿನ ಕೊನೆಯ ಅಧಿವೇಶನ ಪ್ರತಿಪಕ್ಷಗಳ 146 ಸಂಸತ್ ಸದಸ್ಯರನ್ನು ಅಮಾನತು ಮಾಡಿದ್ದಕ್ಕೆ ಸಾಕ್ಷಿಯಾಯಿತು. ಸಂಸದೀಯ ಪ್ರಜಾಪ್ರಭುತ್ವದ ಸಾರವನ್ನು ಬರಿದುಗೊಳಿಸುವ ಮೋದಿ ಸರ್ಕಾರದ ಉದ್ದೇಶಕ್ಕೆ ಅದು ಪುರಾವೆಯಾಗಿದೆ.

ಭಾರತೀಯ ಪ್ರಭುತ್ವವನ್ನು ಅಜಾತ್ಯತೀತಗೊಳಿಸುವ ಪ್ರಕ್ರಿಯೆ ಬಹಳ ವೇಗ ಪಡೆದುಕೊಂಡಿದೆ. ನ್ಯಾಯಾಂಗದ ಶಾಮೀಲಿನೊಂದಿಗೆ ಕಾಶಿ ಮತ್ತು ಮಥುರಾದಲ್ಲಿ ಮೂಲ ಧಾರ್ಮಿಕ ಸ್ಥಳಗಳ ಪ್ರಶ್ನೆಯನ್ನು ಪುನ: ತೆರೆಯಲಾಗಿದೆ ಹಾಗೂ ಪರಿಶೀಲಿಸಲಾಗುತ್ತಿದೆ. ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆಯಾಗುವುದರೊಂದಿಗೆ ಹೊಸ ವರ್ಷ ಆರಂಭವಾಗಲಿದ್ದು ಅದೊಂದು ಸರಕಾರಿ ಪ್ರಾಯೋಜಿತ ಕಾರ್ಯಕ್ರಮವಾಗಿರಲಿದೆ.

ದ್ವಿತೀಯ ದರ್ಜೆ ಪ್ರಜೆಗಳು

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಅಲ್ಪಸಂಖ್ಯಾತರನ್ನು ದ್ವಿತೀಯ ದರ್ಜೆ ಪ್ರಜೆಗಳ ಮಟ್ಟಕ್ಕೆ ಇಳಿಸಲಾಗುತ್ತಿದೆ. ಮಾಂಸ ಮಾರಾಟದಂಥ ಅವರ ಜೀವನೋಪಾಯದ ಮೇಲೆ ನಿರ್ಬಂಧಗಳನ್ನು ಹೇರಿ ಹಾಗೂ ಆಗಾಗ ದಾಳಿಗಳನ್ನು ನಡೆಸುವ ಮತ್ತು ದನ ಗಳು ಅಥವಾ ಗೋಮಾಂಸ ಸಾಗಿಸುವವರನ್ನು ಕೊಲ್ಲುವ ಮೂಲಕ ಅಲ್ಪಸಂಖ್ಯಾತರನ್ನು ದಮನಿಸಲಾಗುತ್ತಿದೆ. ಬುಲ್ಡೋಜರ್, ಮುಸ್ಲಿಮರ ವಿರುದ್ಧದ ಕಣ್ಗಾವಲಿನ ಸಂಕೇತವಾಗಿದೆ.

ಮೇ ತಿಂಗಳಿಂದ ಮಣಿಪುರದಲ್ಲಿ ಘೋರ ಜನಾಂಗೀಯ ಸಂಘರ್ಷಗಳು ನಡೆದಿವೆ. ಕಲಹ ಆರಂಭವಾಗಿ ಏಳು ತಿಂಗಳ ನಂತರವೂ ಮೀತಿ ಮತ್ತು ಕುಕಿ ಸಮುದಾಯಗಳ ನಡುವಿನ ವಿಭಜನೆ ಮುಂದುವರಿದೇ ಇದೆ; ಕಣಿವೆ ಮತ್ತು ಗುಡ್ಡಗಾಡು ಪ್ರದೇಶಗಳ ನಡುವಿನ ಬಫರ್ ಝೋನ್‌ಅನ್ನು ಭದ್ರತಾ ಪಡೆಗಳು ಕಾವಲು ಕಾಯುತ್ತಿವೆ.

ಬಿಜೆಪಿ ಮುಖ್ಯಮಂತ್ರಿಯೇ ಹೊಣೆ

ಪಕ್ಷಪಾತಿ ರಾಜಕಾರಣ ಮಾಡುತ್ತಿರುವ ಮಣಿಪುರದ ಬಿಜೆಪಿ ಮುಖ್ಯಮಂತ್ರಿಯೇ ಬಿಕ್ಕಟ್ಟಿಗೆ ಸಂಪೂರ್ಣ ಹೊಣೆಯಾಗಿದ್ದಾರೆ. ಎಲ್ಲರ ಜೊತೆ ಮಾತುಕತೆ ನಡೆಸಿ ರಾಜಕೀಯ ಇತ್ಯರ್ಥ ರೂಪಿಸಲು ಕೇಂದ್ರ ಸರಕಾರ ವಿಫಲವಾಗಿದೆ. ಭಾರಿ ಬಹುಮತದ ರಾಜಕಾರಣವು ಸೂಕ್ಷ್ಮ

> **2023 ಮೋದಿ ಸರ್ಕಾರದ ಅಧಿಕಾರದ ಎರಡನೇ ಅವಧಿಯ ಕೊನೆಯ ವರ್ಷವಾಗಿದೆ. ಭಾರತೀಯ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವದ ಗೋಡೆಗಳು ಮುಚ್ಚುತ್ತಿರುವ ಇನ್ನೊಂದು ವರ್ಷಕ್ಕೂ 2023 ಸಾಕ್ಷಿಯಾಯಿತು. ಸಂಸದೀಯ ಪ್ರಜಾಪ್ರಭುತ್ವದ ಸಾರವನ್ನು ಬರಿದುಗೊಳಿಸುವ ಮೋದಿ ಸರ್ಕಾರದ ಉದ್ದೇಶಕ್ಕೆ ಅದು ಪುರಾವೆಯಾಗಿದೆ.**

ಜನಾಂಗೀಯ ಪ್ರದೇಶವೊಂದರಲ್ಲಿ ಹೇಗೆ ಹಾವಳಿ ನಡೆಸಬಹುದು ಎನ್ನುವುದಕ್ಕೆ ಮಣಿಪುರ ಒಂದು ಜೀವಂತ ಉದಾಹರಣೆಯಾಗಿದೆ.

2023ರಲ್ಲಿ ಒಕ್ಕೂಟ ತತ್ವದ ಮೇಲೆ ಭಾರಿ ದಾಳಿ ನಡೆದಿದೆ. ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರು ರಾಜ್ಯ ಸರಕಾರಗಳ ವ್ಯವಹಾರಗಳಲ್ಲಿ ಮೂಗು ತೂರಿಸಿ ಮತ್ತು ಕಾನೂನುಗಳನ್ನು ಅಂಗೀಕರಿಸುವ ರಾಜ್ಯ ಶಾಸಕಾಂಗಗಳ ಹಕ್ಕುಗಳನ್ನು ನಿರಾಕರಿಸುವ ಮೂಲಕ ಹೆಚ್ಚು ಆಕ್ರಮಣಕಾರಿ ಆಗಿದ್ದಾರೆ.

ಸಂವಿಧಾನದ 370ನೇ ವಿಧಿಯ ರದ್ದತಿ ಬಗ್ಗೆ ಸುಪ್ರೀಂ ಕೋರ್ಟ್ ತೀರ್ಪು ಹಾಗೂ


ಸಂಸದೀಯ ಪ್ರಜಾಪ್ರಭುತ್ವ, ಉಳಿದೀತೆ?


ಮಣಿಪುರ ಘೋರ ಜನಾಂಗೀಯ ಘರ್ಷಣೆ


ಬೆಳೆಯುತ್ತಲೇ ಹೋದ ನಿರುದ್ಯೋಗ, ಕಮರಿದ ಯುವಜನರ ಕನಸುಗಳು


ಭಾರತ ಎಂದರೆ ಇವರೇನಾ?!

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳನ್ನು ರಚಿಸುವುದಕ್ಕೆ ಸಂವಿಧಾನದ 3ನೇ ವಿಧಿಯನ್ನು ಬಳಸುವ ವಿಚಾರದಲ್ಲಿ ತೀರ್ಪು ನೀಡಲು ಕೋರ್ಟ್ ನಿರಾಕರಿಸಿರುವುದು ಒಕ್ಕೂಟ ತತ್ವದ ಖುಲ್ಲಂಖುಲ್ಲಾ ಉಲ್ಲಂಘನೆಗೆ ನ್ಯಾಯಾಂಗದ ಕಾನೂನುಬದ್ಧತೆಯ ಮುದ್ರೆಯಾಗಿದೆ.

ಜಿಡಿಪಿ ಬೆಳವಣಿಗೆಯ ಅಂಕಿಸಂಖ್ಯೆಗಳನ್ನು ಉಲ್ಲೇಖಿಸಿ ಭಾರತ ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ ಎಂದು ಮೋದಿ ಸರಕಾರ ಬಡಾಯಿ ಕೊಚ್ಚಿಕೊಳ್ಳುತ್ತಲೇ ಇದೆ. ಆದರೆ, ತಲಾ ಜಿಡಿಪಿ ಪ್ರಕಾರ ಹೇಳುವುದಾದರೆ ಜಿ20 ದೇಶಗಳಲ್ಲೇ ಅತ್ಯಂತ ಕೆಳಗಿನ ರ್‍ಯಾಂಕ್ ಪಡೆದಿದೆ. 2023ರಲ್ಲಿ ಭಾರತೀಯರ ತಲಾ ಜಿಡಿಪಿ 2600 ಡಾಲರ್ (ಸುಮಾರು 20,000 ರೂಪಾಯಿ) ಆಗಿತ್ತು. ಅಲ್ಲದೆ, ಏನೇ ಬೆಳವಣಿಗೆ ಆಗಿದ್ದರೂ ಅದು ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿ ಪರಿವರ್ತನೆ ಆಗಿಲ್ಲ ಎನ್ನುವುದು ವಾಸ್ತವ. ಸಿಎಂಐಇಯ ಇತ್ತೀಚಿನ ಅಂಕಿಅಂಶಗಳ ಪ್ರಕಾರ, 2023ರ ಅಕ್ಟೋಬರ್‌ನಲ್ಲಿ ನಿರುದ್ಯೋಗ ದರ ಶೇಕಡ 10.05 ಆಗಿತ್ತು. ಕಳೆದ 21 ತಿಂಗಳಲ್ಲೇ ಇದು ಯುವಜನರ ನಿರುದ್ಯೋಗ ದರ ಶೇಕಡ 23.22 ಆಗಿತ್ತು.

> **2024ರ ಏಪ್ರಿಲ್–ಮೇನಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ವಿರುದ್ಧ ಸಂಘಟಿತ ಹೋರಾಟ ನಡೆಸುವುದು ಪ್ರತಿಪಕ್ಷಗಳ ಕೂಟದ ಉದ್ದೇಶವಾಗಿದೆ. ಇದು ಸಂವಿಧಾನದ ಮೂಲ ಲಕ್ಷಣಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವದ ರಕ್ಷಣೆಗೆ ನಡೆಸುವ ಹೋರಾಟವಾಗಲಿದೆ.**

ಜೀವನಾವಶ್ಯಕ ವಸ್ತುಗಳು, ಅದರಲ್ಲೂ ವಿಶೇಷವಾಗಿ ಆಹಾರ ವಸ್ತುಗಳ ಬೆಲೆಗಳು ಗಗನಮುಖಿಯಾಗಿಯೇ ಮುಂದುವರಿದಿದ್ದು ಬಡವಾತಿ ಬಡ ಜನರ ಮೇಲೆ ಹೊರೆಯನ್ನು ಹೇರುತ್ತಿದೆ. ನಿಜವಾದ ಕೂಲಿ ಇಳಿಮುಖವಾಗುತ್ತಿದ್ದು ಬೆಲೆಗಳು ಗಗನಕ್ಕೇರುತ್ತಿವೆ. ನಿರುದ್ಯೋಗ ದರವು ಆಕಾಶಮುಖಿಯಾಗಿದ್ದು ಇವೆಲ್ಲದರೊಂದಿಗೆ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ರ್‍ಯಾಂಕ್ 125 ದೇಶಗಳ ಪೈಕಿ 111ಕ್ಕೆ ಕುಸಿದಿದೆ.

ಕಾರ್ಪೊರೇಟ್–ಕೋಮುವಾದಿ ಕೂಟ

ಕಾರ್ಪೊರೇಟ್–ಕೋಮುವಾದಿ ದುಷ್ಟಕೂಟ 2023ರಲ್ಲಿ ಪ್ರಮುಖವಾಗಿ ದೇಶವನ್ನು ಕಾಡಿತ್ತು. ಅದಾನಿ ಸಮೂಹದ ಕಾರ್ಪೊರೇಟ್ ವಂಚನೆ ಮತ್ತು ಸ್ಟಾಕ್ ವಂಚನೆ ಬಗ್ಗೆ ಹಿಂಡನ್‌ಬರ್ಗ್ ರೀಸರ್ಚ್ ಕಂಪನಿ ಬಹಿರಂಗಪಡಿಸಿದ್ದು ಅಂತಾರಾಷ್ಟ್ರೀಯ ಸುದ್ದಿಯಾಗಿತ್ತು. ಆದರೆ, ಮೋದಿ ಸರಕಾರ ಗೌತಮ್ ಅದಾನಿಯನ್ನು ಪ್ರಬಲವಾಗಿ ರಕ್ಷಿಸಿತ್ತು ಹಾಗೂ ತನ್ನ ಅತಿ ಮುದ್ದಿನ ಕ್ರೋನಿ ಬಂಡವಾಳಶಾಹಿಯ ಹಗರಣದ ಬಗ್ಗೆ ಗಂಭೀರ ತನಿಖೆ ನಡೆಸಲು ನಿರಾಕರಿಸಿತ್ತು. ಅದಾನಿ ಮೇಲಿನ ದಾಳಿಯನ್ನು ಹಿಂದುತ್ವ ಆಡಳಿತದ ಭಾರತದ ಮೇಲಿನ ಆಕ್ರಮಣ ಎಂದು ಬಿಂಬಿಸಲಾಯಿತು. ದೊಡ್ಡ ದೊಡ್ಡ ಬಂಡವಾಳಶಾಹಿಗಳಿಗೆ ಮೋದಿ ಸರಕಾರ ತೋರಿದ ಔದಾರ್ಯದ ಫಲವಾಗಿ ಆದಾಯ ಮತ್ತು ಸಂಪತ್ತಿನ ಅಸಮಾನತೆ ಹೊಸ ಎತ್ತರವನ್ನು ತಲುಪಿದೆ. 2023 ಜನವರಿಯಲ್ಲಿ ಆಕ್ಸ್‌ಫಾಮ್ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಭಾರತದ ಶೇಕಡ ಒಂದರಷ್ಟು ಅತ್ಯಂತ ಧನಿಕರು ದೇಶದ ಶೇಕಡ 40ಕ್ಕಿಂತ ಹೆಚ್ಚಿನ ಸಂಪತ್ತನ್ನು ಹೊಂದಿದ್ದಾರೆ. ತಳಮಟ್ಟದ ಅರ್ಧದಷ್ಟು ಜನರು ದೇಶದ ಸಂಪತ್ತಿನಲ್ಲಿ ಕೇವಲ ಮೂರು ಪ್ರತಿಶತ (3%) ಪಾಲನ್ನು ಹೊಂದಿದ್ದಾರೆ.

ದಬ್ಬಾಳಿಕೆಯ ಸಾಧನಗಳ ಬಳಕೆ

ದಬ್ಬಾಳಿಕೆಯ ಸಾಧನಗಳನ್ನು ಸರಕಾರ ಹರಿತಗೊಳಿಸಿದ್ದನ್ನೂ 2023 ಕಂಡಿದೆ. ಅಲ್ಲದೆ ಈ ವರ್ಷ ಪ್ರತಿಪಕ್ಷಗಳನ್ನು ಗುರಿಯಾಗಿಸಿ ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ವ್ಯಾಪಕವಾಗಿ ದುರುಪಯೋಗ ಪಡಿಸಿಕೊಳ್ಳಲಾಗಿದೆ. ಅನುಷ್ಠಾನ ನಿರ್ದೇಶನಾಲಯ (ಇ.ಡಿ.), ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಆದಾಯ ತೆರಿಗೆ ಇಲಾಖೆಗಳು ನಡೆಸಿದ ದಾಳಿಗಳು ಹಾಗೂ ಬಂಧನಗಳು ಆಳುವ ಪಕ್ಷದ ಕೈಯಲ್ಲಿ ಸಿನಿಕತನದ ಅಸ್ತ್ರಗಳಾಗಿವೆ.



ಸಂಸತ್ತಿನ ಚಳಿಗಾಲದ ಅಧಿವೇಶನದ ಕೊನೆಯ ಹಂತದಲ್ಲಿ, ಪ್ರತಿಪಕ್ಷಗಳ ಉಪಸ್ಥಿತಿ ಇಲ್ಲದೆ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು ಅಂಗೀಕರಿಸಲಾಗಿದೆ. ವಸಾಹತುಶಾಹಿ ಪರಂಪರೆಯನ್ನು ತೆಗೆದು ಹಾಕಲು ಈ ಕಾನೂನುಗಳನ್ನು ರಚಿಸಲಾಗಿದೆ ಎಂದು ಸರಕಾರ ಬೊಗಳೆ ಕೊಚ್ಚಿಕೊಳ್ಳುತ್ತಿದೆ. ಆದರೆ, ವಾಸ್ತವವಾಗಿ, ಈ ಪ್ರಕ್ರಿಯೆಯೇ ಒಂದು ರೀತಿಯಲ್ಲಿ ಮರು–ವಸಾಹತೀಕರಣವಾಗಿದೆ. ಹೊಸ ಕ್ರಿಮಿನಲ್ ಕಾನೂನುಗಳಲ್ಲಿನ ಹಲವು ನಿಯಮಗಳು ನಾಗರಿಕರ ಮೂಲಭೂತ ರಕ್ಷಣೆಗಳನ್ನೇ ಕಸಿದು ಕೊಳ್ಳುವಂಥದ್ದಾಗಿದ್ದು ಪೊಲೀಸ್ ರಾಜ್ಯ ಸ್ಥಾಪನೆಗೆ ನೆರವಾಗಲಿದೆ.


ಜನಾಂದೋಲನದ ಸಂಕಲ್ಪ

ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗಗಳು ಕೋಮುವಾದಿ–ಕಾರ್ಪೊರೇಟ್ ಆಡಳಿತದ ವಿರುದ್ಧ ಸೆಣಸುತ್ತಿವೆ. ಇದೇ ಮೊದಲ ಬಾರಿಗೆ, ದುಡಿಯುವ ವರ್ಗ ಹಾಗೂ ರೈತ ವಿಭಾಗವನ್ನು ಪ್ರತಿನಿಧಿಸುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಸೆಪ್ಟೆಂಬರ್‌ನಲ್ಲಿ ಒಂದು ಜಂಟಿ ಸಮಾವೇಶ ನಡೆಸಿದ್ದವು ಮತ್ತು ನವೆಂಬರ್‌ನಲ್ಲಿ ಮೂರು ದಿನಗಳ ಮಹಾ ಪಡಾವ್‌ಗೆ ಸಂಯುಕ್ತ ಕರೆ ನೀಡಿದ್ದವು. ಈ ಸಂಯುಕ್ತ ಕಾರ್ಯಾಚರಣೆಗೂ ಮುನ್ನ ದೇಶದ ನಾನಾ ಭಾಗಗಳಲ್ಲಿ ಕಾರ್ಮಿಕರು ಮತ್ತು ರೈತರ ವಿವಿಧ ವಿಭಾಗಗಳು ಅಸಂಖ್ಯಾತ ಹೋರಾಟವನ್ನು ನಡೆಸಿದವು. ಬಿಜೆಪಿ ಸರಕಾರದ ನವ–ಉದಾರೀಕರಣ ನೀತಿಗಳ ವಿರುದ್ಧ ದುಡಿಯುವ ಜನಸಮುದಾಯ ಹೆಚ್ಚೆಚ್ಚು ಹೋರಾಟಗಳನ್ನು ನಡೆಸಿದ್ದನ್ನು ಈ ವರ್ಷ ದಾಖಲಿಸಿತು.

2023ನೇ ವರ್ಷದ ದ್ವಿತೀಯಾರ್ಧದಲ್ಲಿ ಪ್ರತಿಪಕ್ಷಗಳು ಒಟ್ಟಿಗೇ ಬಂದು ಇಂಡಿಯಾ (ಐಎನ್‌ಡಿಐಎ) ಕೂಟವನ್ನು ರಚಿಸಿಕೊಂಡವು. ಅದರಲ್ಲಿ 28 ಪಕ್ಷಗಳಿವೆ. 2024ರ ಏಪ್ರಿಲ್–ಮೇನಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ವಿರುದ್ಧ ಸಂಘಟಿತ ಹೋರಾಟ ನಡೆಸುವುದು ಪ್ರತಿಪಕ್ಷಗಳ ಕೂಟದ ಉದ್ದೇಶವಾಗಿದೆ. ಇದು ಸಂವಿಧಾನದ ಮೂಲ ಲಕ್ಷಣಗಳಾದ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವದ ರಕ್ಷಣೆಗೆ ನಡೆಸುವ ಹೋರಾಟವಾಗಲಿದೆ.

ಹೊಸ ವರ್ಷ 2024, ಭಾರತದ ಭವಿಷ್ಯವನ್ನು ನಿರ್ಧರಿಸುವ ಮಹಾ ಸಂಘರ್ಷವನ್ನು ಕಾಣಲಿದೆ.

ಅನು: ವಿಶ್ವ



ಪರ್ಯಾಯ ಪ್ರಕ್ರಿಯೆ

ಭಾರತೀಯ ಕುಸ್ತಿ ಒಕ್ಕೂಟದ ನೂತನ ಸಮಿತಿಯ ವಿಸರ್ಜನೆಯಷ್ಟೇ....

ಪುಟ 6 ರಿಂದ

ಇನ್ನೊಂದೆಡೆಯಲ್ಲಿ ನಿರಾಸೆಯ, ಹತಾಶೆಯ ವಾತಾವರಣದಲ್ಲಿ ಕುಸ್ತಿಪಟುಗಳು, ಕ್ರೀಡಾ ಪ್ರೇಮಿಗಳು ಮತ್ತು ನ್ಯಾಯವನ್ನು ಪ್ರೀತಿಸುವ ಜನರು ತಮಗೆ ಒಂದು ಹುಮ್ಮಸ್ಸು ನೀಡುವ ಬೆಳಕು ಕಾಣಿಸುತ್ತಿದೆ ಎಂದು ನಿಟ್ಟುಸಿರು ಬಿಡುತ್ತಿದ್ದಾರೆ.

ಆದಾಗ್ಯೂ, ಹೆಚ್ಚು ಆಳವಾದ ಆತಂಕ ಮೂಡುವ ಸಂಗತಿಯೆಂದರೆ, ಇತ್ತೀಚಿನ ದಶಕಗಳಲ್ಲಿ ತಮ್ಮ ಹೆಣ್ಣು ಮಕ್ಕಳನ್ನು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲಾರಂಭಿಸಿರುವ ಪಾಲಕರ ಮನಸ್ಸನ್ನು ಘಾಸಿಗೊಳಿಸಿರುವ ಈ ಬೆಳವಣಿಗೆಗಳು ಎನ್ನುತ್ತಾರೆ ಜಗ್ಮತಿ ಸಂಗ್ವಾನ್. ಗ್ರಾಮೀಣ ಪ್ರದೇಶಗಳಲ್ಲಿ, ಮುಖ್ಯವಾಗಿ ಹರ್ಯಾಣಾದಲ್ಲಿ ಕ್ರೀಡೆಗಳು ಒದಗಿಸುತ್ತಿರುವ ಉತ್ತಮ ಉದ್ಯೋಗಾವಕಾಶಗಳು ಮತ್ತು ಜತೆಗೆ ಪದಕ ಗೆಲ್ಲುವ ಹೆಮ್ಮೆಯ ಭಾವನೆಯಿಂದಾಗಿ, ಸಾಮಾಜಿಕ–ಸಾಂಸ್ಕೃತಿಕ ಕಟ್ಟುಕಟ್ಟಳೆಗಳನ್ನೂ ಬದಿಗೊತ್ತುವ ಸಕಾರಾತ್ಮಕ ಬೆಳವಣಿಗೆ ಕಂಡು ಬಂದಿತ್ತು. ಆದರೆ ಇತ್ತೀಚಿನ ಈ ಬೆಳವಣಿಗೆಗಳು ಈ ಹುಡುಗಿಯರ ಆತ್ಮವಿಶ್ವಾಸವನ್ನು ಅಲುಗಾಡಿಸಿ ಬಿಟ್ಟಿದೆ. ಇಂತಹ ಸನ್ನಿವೇಶದಲ್ಲಿ ಚುನಾಯಿತ ಸಮಿತಿಯ ವಿಸರ್ಜನೆ ಮಾತ್ರದಿಂದ ಮಹಿಳಾ ಕ್ರೀಡಾಪಟುಗಳ ಸುರಕ್ಷತೆಗೆ ಸಂಬಂಧಿಸಿದಂತೆ ಭಾರೀ ನಂಬಿಕೆ ಕೊರತೆಯನ್ನು ಪುನಃಸ್ಥಾಪಿಸಲು ಸಾಧ್ಯವಿಲ್ಲ. ಈ ಕ್ರಮವು ಸಮಸ್ಯೆಯನ್ನು ಪರಿಹರಿಸಲು ಕೇವಲ ಮೇಲ್ನೋಟದ ಪ್ರಯತ್ನವೆಂದು ಸಾಬೀತಾಗಬಹುದು. ಸಮಿತಿ ವಿಸರ್ಜನೆಯಿಂದ ಕೇಂದ್ರ ಸರ್ಕಾರದ ಪಾತ್ರ ಮುಗಿಯಲಿಲ್ಲ. ಲೈಂಗಿಕ ಕಿರುಕುಳದ ಆರೋಪ ಹೊತ್ತಿರುವ ಬ್ರಿಜ್ ಭೂಷಣ್ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು. ಆಗ ಮಹಿಳಾ ಆಟಗಾರ್ತಿಯರಿಗೆ ಒಂದಿಷ್ಟು ಸಮಾಧಾನ ಸಿಗುತ್ತದೆ.

ಕುಸ್ತಿಪಟುಗಳ ಆಂದೋಲನದಲ್ಲಿ ಮಹಿಳಾ ಸಂಘಟನೆಗಳು ಪ್ರಮುಖ ಪಾತ್ರವಹಿಸಿದ್ದು, ಈ ಸಂದರ್ಭದಲ್ಲಿ ಮಹಿಳಾ ಚಳವಳಿ ಸೇರಿದಂತೆ ಎಲ್ಲಾ ವಿಭಾಗಗಳು ಮಹಿಳೆಯರ ಸುರಕ್ಷತೆ ಮತ್ತು ಸ್ವಾಭಿಮಾನಕ್ಕಾಗಿ ಸಾಮೂಹಿಕವಾಗಿ ಮತ್ತು ಸ್ವತಂತ್ರವಾಗಿ ಹೋರಾಟವನ್ನು ತೀವ್ರವಾಗಿ ಮುಂದುವರಿಸಬೇಕಿದೆ. ಕ್ರೀಡಾ ಸಂಸ್ಥೆಗಳನ್ನು ನಿಜವಾಗಿಯೂ ಮಹಿಳೆಯರನ್ನು ಒಳಗೊಳ್ಳುವ, ಹೆಚ್ಚು ಪ್ರಜಾಸತ್ತಾತ್ಮಕವಾದ, ಪಾರದರ್ಶಕವಾದ ಮತ್ತು ಜವಾಬುದಾರ ಸಂಸ್ಥೆಗಳಾಗಿ ಮಾಡಬೇಕಾಗಿದೆ. ಇದರಲ್ಲಿ ಕುಸ್ತಿಪಟುಗಳ ಜಂತರ್ ಮಂತರ್ ಚಳುವಳಿಯನ್ನು ಕ್ರೋಡೀಕರಿಸಬೇಕಾಗಿದೆ, ಹಲವು ರೀತಿಗಳಲ್ಲಿ ವಿಸ್ತರಿಸಬೇಕಾಗಿದೆ ಎನ್ನುವ ಜಗ್ಮತಿ ಸಂಗ್ವಾನ್, ಪ್ರಧಾನ ಮಂತ್ರಿಗಳು ಕ್ರೀಡಾರಂಗದಲ್ಲಿ ಹೆಣ್ಣುಮಕ್ಕಳ ಪಾತ್ರವನ್ನು ಗುರುತಿಸುತ್ತ 'ಬೇಟಿ ಬಚಾವೋ ಬೇಟೀ ಪಢಾವೋ' ಘೋಷಣೆಯನ್ನು 'ಬೇಟಿ ಖಿಲಾವೊ' (ಮಗಳನ್ನು ಆಡಿಸಿ)ಗೆ ವಿಸ್ತರಿಸಬೇಕು ಎಂದು ಸೂಚಿಸಿದ್ದರು ಎಂದು ನೆನಪಿಸುತ್ತಾರೆ.

ಆದರೆ ನಾವು 2024ನ್ನು ಪ್ರವೇಶಿಸುತ್ತಿರುವಂತೆ, ಇದು 'ಬೇಟಿ ರುಲಾವೋ' (ಮಗಳನ್ನು ಅಳಿಸಿ) ಆಗದಂತೆ ಸಾಮೂಹಿಕವಾಗಿ ಖಾತ್ರಿ ಪಡಿಸಬೇಕು ಎಂದು ಅವರು ಹೇಳುತ್ತಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಭಂಡತನದ ಕೃತ್ಯಗಳನ್ನು ಕೊನೆಗೊಳಿಸಬೇಕು

ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯಲ್ಲಿ ಸೇನೆಯ ವಶದಲ್ಲಿದ್ದಾಗ ಮೂವರು ನಾಗರಿಕರ ಬರ್ಬರ ಹತ್ಯೆಗೈದಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಮೊಹಮ್ಮದ್ ಶೋಕತ್, ಸಫೀರ್ ಹುಸೇನ್ ಮತ್ತು ಶಬೀರ್ ಅಹ್ಮದ್ ಅವರನ್ನು ಸೇನಾ ಸಿಬ್ಬಂದಿ ಸುತ್ತುವರೆದು ತೀವ್ರ ಚಿತ್ರಹಿಂಸೆಗೆ ಒಳಪಡಿಸಿದರು ಮತ್ತು ಇದು ಈ ಮೂವರ ಸಾವಿಗೆ ಕಾರಣವಾಯಿತು. ಮೃತರ ಕುಟುಂಬಗಳಿಗೆ ಜಮ್ಮು ಮತ್ತು ಕಾಶ್ಮೀರ ಆಡಳಿತ ಪರಿಹಾರವನ್ನು ಘೋಷಿಸಿದೆ. ಆದರೆ ಅದು ಸಾಕಾಗುವುದಿಲ್ಲ. ಶೀಘ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇಂತಹ ಭಂಡತನದ ಕೃತ್ಯಗಳಿಂದ ದೀರ್ಘಕಾಲದಿಂದ ಜಮ್ಮು ಮತ್ತು ಕಾಶ್ಮೀರದ ಜನತೆ ಬಹಳ ಕಾಲದಿಂದ ಬಳಲುತ್ತಿದ್ದಾರೆ. ಈ ವಿಷಯದಲ್ಲಿ ಹೊಣೆಗಾರಿಕೆಯನ್ನು ನಿರ್ಧರಿಸಬೇಕು ಮತ್ತು ನ್ಯಾಯವನ್ನು ಕೊಡಿಸಬೇಕು ಎಂದು ಜನತೆ ನಿರೀಕ್ಷಿಸುತ್ತಾರೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಹವಾಮಾನ ಬದಲಾವಣೆಯ ಖಾಯಂ ಅಪಾಯ ತೈಲ ಕಂಪನಿ, ಶ್ರೀಮಂತ ದೇಶಗಳು ಖುಶ್.......

ಪುಟ 7 ರಿಂದ

ಹೊಂದಿತ್ತು. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿರುವ ಕಂಪನಿಗಳು ಮತ್ತು ಶ್ರೀಮಂತ ಅಭಿವೃದ್ಧಿ ಹೊಂದಿದ ದೇಶಗಳ ಪರವಾಗಿತ್ತು. ಶಕ್ತಿಯ ಹಂತ–ಹಂತಕ್ಕೆ ಕರೆ ಮಾಡುವಾಗ, ಅಂದರೆ ಬಿಡುಗಡೆಯಾದ ಇಂಗಾಲವನ್ನು ಸೆರೆಹಿಡಿಯದೆ ಮತ್ತು ಹೇಗಾದರೂ ಬಳಸದೆ ಅಥವಾ ಸಂಗ್ರಹಿಸದೆ ಶಕ್ತಿ ಉತ್ಪಾದಿಸುವ ಕಲ್ಲಿದ್ದಲನ್ನು ಹಂತ ಹಂತವಾಗಿ ಕಡಿತ ಮಾಡಲು ಕರೆ ನೀಡುತ್ತದೆ. "ಕಡಿಮೆ ಇಂಗಾಲದ ಇಂಧನ", "ಕಡಿಮೆ–ಹೊರಸೂಸುವಿಕೆ" ತಂತ್ರಜ್ಞಾನಗಳಿಗೆ ಹಾಗೂ "ಕಡಿಮೆ–ಇಂಗಾಲದ ಹೈಡ್ರೋಜನ್" ಮತ್ತು "ಪರಿವರ್ತನೆ ಇಂಧನಗಳು" (ನೈಸರ್ಗಿಕ ಅನಿಲ ಸಹ ಪಳೆಯುಳಿಕೆ ಇಂಧನವೇ ಆದರೂ, ಅದನ್ನು ವಿವರಿಸಲು ಯುರೋಪ್ ಮತ್ತು ಯುಎಸ್ ನಲ್ಲಿ ವ್ಯಾಪಕವಾಗಿ ಬಳಸಲಾಗುವ ಪದ) ಮುಂತಾದ ಇಂಧನಗಳಿಗೆ ವಿನಾಯಿತಿ ನೀಡುವ ಮೂಲಕ ಬಾಗಿಲು ತೆರೆಯಲಾಗಿದೆ. ಇವೆಲ್ಲವೂ ಬಹಳ ಸಡಿಲವಾದ ವ್ಯಾಖ್ಯಾನಗಳು ಮತ್ತು ಮಾನದಂಡಗಳು ಎಂಬುದನ್ನೂ ಗಮನಿಸಬೇಕು. Carbon Capture, Utilisation And Storage (CCUS–ಇಂಗಾಲ ಸೆರೆಹಿಡಿಯುವ, ಬಳಕೆ ಮತ್ತು ಸಂಗ್ರಹಣೆ) ಬಗ್ಗೆ ಕರಡು ವಿಶೇಷ ಉಲ್ಲೇಖವನ್ನು ನೀಡಿದೆ, ಇದು ಹೆಚ್ಚು ದುಬಾರಿಯಾಗಿದೆ, ಮತ್ತು ಇನ್ನೂ ವಾಣಿಜ್ಯ ಕಾರ್ಯಸಾಧ್ಯತೆಯನ್ನು ಸಾಧಿಸಿಲ್ಲ ಮತ್ತು ಅಂತಿಮವಾಗಿ ಅದರ ಹೊರಸೂಸುವಿಕೆಯ ಉಳಿತಾಯ ಸಹ ತಿಳಿದಿಲ್ಲ. ಹೊರಸೂಸುವಿಕೆ ಕಡಿತ ಮತ್ತು ಶುದ್ಧ ಶಕ್ತಿಯತ್ತ ಸಾಗುವಾಗ, ಕರಡು ಸಮರ್ಪಕವಾಗಿ ಸಮಾನತೆ ಅಥವಾ ಸಾಮಾನ್ಯ ಆದರೆ ವಿಭಿನ್ನ ಜವಾಬ್ದಾರಿಯನ್ನು (ಸಿಬಿಡಿಆರ್) ಉಲ್ಲೇಖಿಸಿಲ್ಲ, ಎಲ್ಲಾ ದೇಶಗಳಿಗೆ ಸಮಾನ ಜವಾಬ್ದಾರಿ ಹೇರುವ ಯುಎಸ್ ಒತ್ತಡ ಇದಕ್ಕೆ ಕಾರಣವಾಗಿರಬಹುದು.

ಈ ಕರಡು ಅಭಿವೃದ್ಧಿ ಹೊಂದಿದ ದೇಶಗಳ ಹಣಕಾಸಿನ ನೆರವಿನ ವಿಷಯದ ಕುರಿತು ಮತ್ತಷ್ಟು ಮಾತುಕತೆ ಮಾಡಲಿಲ್ಲ, ಇದು ಹವಾಮಾನ ಪೀಡಿತ ದುರ್ಬಲ ದೇಶಗಳಿಗೆ ಹೆಚ್ಚಿನ ದುಃಖವನ್ನುಂಟು ಮಾಡಿತು. ಎಷ್ಟೇ ಅಸಮರ್ಪಕವಾಗಿದ್ದರೂ 2020 ರ ವೇಳೆಗೆ ವರ್ಷಕ್ಕೆ 100 ಶತಕೋಟಿ ಡಾಲರುಗಳಷ್ಟು ಹವಾಮಾನ ನೆರವು ನೀಡುವ ಶ್ರೀಮಂತ ದೇಶಗಳ ಹಿಂದಿನ ಭರವಸೆಯ ಈಡೇರಿಸಲಾಗಿಲ್ಲ ಎಂದು ಕರಡು ಕಳವಳ ವ್ಯಕ್ತಪಡಿಸಿದೆ ಅಷ್ಟೇ. 2030 ರ ಪೂರ್ವದ ಅವಧಿಯಲ್ಲಿಯೇ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸುಮಾರು 5800–5900 ಶತಕೋಟಿ ಡಾಲರುಗಳ ನೆರವಿನ ಅಗತ್ಯವಿದೆ ಎಂದು ಜಿ.ಎಸ್.ಟಿ. ವರದಿಗಳ ಅಂದಾಜನ್ನು ಅದು ಪುನರಾವರ್ತಿಸಿತಷ್ಟೇ. ಇದರಲ್ಲಿ "ಶುದ್ಧ ಇಂಧನ ಪರಿವರ್ತನೆ"ಗೆ ವರ್ಷಕ್ಕೆ 4300 ಶತಕೋಟಿ ಡಾಲರ್ ಅಗತ್ಯವಿರುತ್ತದೆ. ಕರಡಿನಲ್ಲಿ ಯಾವುದೇ ಹೊಸ ಗುರಿಗಳನ್ನು ಉಲ್ಲೇಖಿಸಲಾಗಿಲ್ಲ, ಮೊದಲ ದಿನ ಭಾರೀ ಪ್ರಚಾರದೊಂದಿಗೆ ಘೋಷಿಸಲಾದ ಹೊಸ "ನಷ್ಟ ಮತ್ತು ಹಾನಿ ನಿಧಿ"ಗೆ ನಿಖರ ಸಂಖ್ಯೆ ಕೊಡಲಿಲ್ಲ ಮತ್ತು ಕೇವಲ 47 ಕೋಟಿ ಡಾಲರ್ ನೆರವಿನ ಭರವಸೆ ಮಾತ್ರ ಬಂತು.

ಬಲಾತ್ಕಾರದ ದುಬೈ ಘೋಷಣೆ

ಅಂತಿಮ ಕರಡು ಪ್ರಕಟವಾದ ಕೆಲವೇ ಗಂಟೆಗಳ ನಂತರ ಸಮಾರೋಪವನ್ನು ಕರೆಯಲಾಯಿತು, ಇದು ವಿವಿಧ ದೇಶದ ನಿಯೋಗಗಳಿಗೆ ಚರ್ಚೆಗೆ ಸ್ವಲ್ಪ ಸಮಯವನ್ನೂ ನೀಡಲಿಲ್ಲ. ಸಮಾರೋಪಕ್ಕೆ ಪ್ರತಿನಿಧಿಗಳು ಇನ್ನೂ ಸೇರುತ್ತಿರುವಾಗ, ಅಧ್ಯಕ್ಷರು ಕರಡನ್ನು ತ್ವರಿತವಾಗಿ ಮಂಡಿಸಿದರು, ಯಾವುದೇ ಆಕ್ಷೇಪಣೆಗಳಿಲ್ಲ ಎಂದು ಘೋಷಿಸಿ ಮಂಜೂರಾಗಿದೆಯೆಂದರು! ಲೈವ್ಪ್ರಸಾರದಲ್ಲಿ ಪ್ರತಿನಿಧಿಗಳ ದಿಗ್ಭ್ರಮೆಗೊಂಡದ್ದು, ನಂತರ ನಿಧಾನವಾಗಿ ಚಪ್ಪಾಳೆ ಆರಂಭವಾಗಿ ನಿಂತು ಗೌರವಿಸುವ ಸಂಪ್ರದಾಯ ಪಾಲಿಸಲಾಯಿತು. ಭಾರೀ ವಾಗ್ವಾದ ನಡೆಯುವ ಹವಾಮಾನ ಸಮ್ಮೇಳನಗಳಲ್ಲಿ ಆಗಾಗ್ಗೆ ನಡೆಯುವಂತೆ, ಒಮ್ಮತದಂತೆ ಕಾಣುವ ಒಪ್ಪಂದವನ್ನು ವಿರೋಧಿಸುವುದಕ್ಕಿಂತ 'ಹೇಗೋ ಏನೋ ಒಂದು ಒಪ್ಪಂದವಾಯಿತಲ್ಲ', ಎಂಬುದೇ ಲೇಸು ಎಂಬ ಭಾವನೆ ಹೆಚ್ಚಾಗಿತ್ತು.

ಅಸಮಾಧಾನದ ಧ್ವನಿಗಳು ಸಮ್ಮೇಳನದ ನಂತರ ವ್ಯಕ್ತವಾದವು. ಸಣ್ಣ ದ್ವೀಪ ರಾಜ್ಯಗಳನ್ನು ಪ್ರತಿನಿಧಿಸುವ ಸಮೋವಾದ ಪ್ರತಿನಿಧಿ, ಅವರು ಮತ್ತು ಇತರ ದ್ವೀಪ ನಿಯೋಗಗಳು ತಮ್ಮ ಅನುಪಸ್ಥಿತಿಯಲ್ಲಿ ಪಠ್ಯವನ್ನು ಹೊರಗಡೆ ಚರ್ಚಿಸುತ್ತಿರುವಾಗ ಅದನ್ನು ಮಂಜೂರಾಗಿದೆ ಎಂದು ಘೋಷಿಸಲಾಯಿತು ಎಂದು ದೂರಿದರು. ತಮ್ಮ ಆಕ್ಷೇಪಣೆಗಳ ಸುದೀರ್ಘ ಪಟ್ಟಿಯನ್ನು ಬಿಚ್ಚಿಟ್ಟರು. ಆಫ್ರಿಕಾದಿಂದ ಇನ್ನೂ ಅನೇಕ ಧ್ವನಿಗಳು ಬಂದವು. ಮುಖ್ಯವಾಗಿ ಪಳೆಯುಳಿಕೆ ಇಂಧನಗಳ ಬಗೆಗಿನ ಸಡಿಲ ಧೋರಣೆ ಮತ್ತು ಹಣಕಾಸಿನ ನೆರವಿನ ಕೊರತೆಯನ್ನು ತೀವ್ರವಾಗಿ ಟೀಕಿಸಲಾಯಿತು.

COP 28 ಘೋಷಣೆಯು ಹಿಂದಿನ ಘೋಷಣೆಗಳ ಬಹುತೇಕ ಎಲ್ಲ ಸಮಸ್ಯೆಗಳನ್ನು ಹೊಂದಿದೆ. ದೇಶಗಳು ಈಗಾಗಲೇ ಜಾರಿ ಮಾಡಲು ಯತ್ನಿಸುತ್ತಿರುವ "ಪಳೆಯುಳಿಕೆ ಇಂಧನಗಳಿಂದ ಪರಿವರ್ತನೆ"ಯ ನಿರ್ಧಾರವನ್ನು ದಾಖಲಿಸುವುದರ ಹೊರತಾಗಿ, ಮತ್ತು 1.5 ಡಿಗ್ರಿ ಸಿ ಗುರಿಯನ್ನು ಸಾಧಿಸಲು ಹೆಚ್ಚಿನ ಹೊರಸೂಸುವಿಕೆ ಕಡಿತದ ವಿಶಾಲ ಜಾಗತಿಕ ಗುರಿಯನ್ನು ಸೂಚಿಸಿದ್ದು ಬಿಟ್ಟರೆ ಅಔಕ 28 ಹೆಚ್ಚಿನ ಸಾಧನೆಯನ್ನೇನೂ ಮಾಡಲಿಲ್ಲ. ದೇಶಗಳ ಚಿಂತನೆಗೆ ಮಾರ್ಗದರ್ಶನ ನೀಡಲು 2025 ರಲ್ಲಿ ಹೊಸ ಗುರಿಗಳತ್ತ ಮಾರ್ಗಸೂಚಿಯನ್ನೂ ರಚಿಸಲಾಗಿಲ್ಲ. ಹಣಕಾಸಿನ ನೆರವು ಏರಿಸುವುದೂ ನಡೆಯಲಿಲ್ಲ. ಹೊಂದಾಣಿಕೆಗೆ ಜಾಗತಿಕ ಗುರಿಯನ್ನು ಅರ್ಧಬೆಂದ ಸ್ಥಿತಿಯಲ್ಲಿ ಬಿಡಲಾಯಿತು. ಹಲವಾರು ಇತರ ದಾಖಲೆಗಳನ್ನು ಅಂತಿಮಗೊಳಿಸಲಾಗಿಲ್ಲ ಅಥವಾ ಅನುಮೋದಿಸಲಾಗಿಲ್ಲ. ಮತ್ತೊಂದೆಡೆ, ಪಳೆಯುಳಿಕೆ ಇಂಧನ ಉದ್ಯಮವು ಸಂತೋಷದಿಂದ ಹಿಂತಿರುಗಿತು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಂತರ–ರಾಷ್ಟ್ರ ಸಮಾನತೆಯ ವಿರುದ್ಧ ಮತ್ತೊಂದು ಹೊಡೆತವನ್ನು ಯಶಸ್ವಿಯಾಗಿ ನಿಭಾಯಿಸಿದವು ಮತ್ತು ಗಂಭೀರವಾದ ನೆರವಿಗೆ ಬದ್ಧವಾಗುವುದರಿಂದ ತಪ್ಪಿಸಿಕೊಂಡವು.

ಭಾರತ ಅಗೋಚರವಾಗಿತ್ತು

ಆರಂಭಿಕ ದಿನದಂದು ಸರ್ಕಾರದ ಮುಖ್ಯಸ್ಥರ ಭಾಷಣಗಳ ಭಾಗವಾಗಿ ಪಿಎಂ ಮೋದಿಯವರ ಭಾಷಣ ಹೊರತುಪಡಿಸಿ, COP 28 ರಲ್ಲಿ ಭಾರತವು ಬಹುತೇಕ ಅಗೋಚರವಾಗಿತ್ತು ಮತ್ತು ಅದರ ಸೊಲ್ಲು ಕೇಳಿ ಬರಲಿಲ್ಲ. ಪ್ರಧಾನಮಂತ್ರಿಯವರ ಭಾಷಣವು ನಾಟಕೀಯವಾಗಿದ್ದರೂ, ಜಾಗತಿಕ ಮಾಧ್ಯಮಗಳು ಇದನ್ನು ಹೆಚ್ಚಾಗಿ ಕಡೆಗಣಿಸಿದವು.. ಸಮಯಕ್ಕೆ ಸುಮಾರು ಒಂದು ದಶಕದ ಮೊದಲು ಭಾರತ ತನ್ನ ಉದ್ದೇಶಿತ ಗುರಿಯನ್ನು ಸಾಧಿಸಿದೆ ಎಂದು ಅವರು ಹೇಳಿದರು. ಹೇಳಿಕೆಯನ್ನು ಇನ್ನೊಂದು ರೀತಿಯಲ್ಲಿ ಓದಿದ್ದರೆ ನಿರೀಕ್ಷಿತ ಚಪ್ಪಾಳೆ ಮುಜುಗರಕ್ಕೆ ಒಳಗಾಗಬಹುದು, ಅಂದರೆ, ಭಾರತವು ಉದ್ದೇಶ ಪೂರ್ವಕವಾಗಿ ಕಡಿಮೆ ಗುರಿಯನ್ನು ನಿಗದಿಪಡಿಸಿದೆ ಮತ್ತು ಅದನ್ನು ಮೊದಲೇ ಸಾಧಿಸಿದೆ, ಭಾರತವು ತನ್ನ ಗುರಿಯನ್ನು ಹೆಚ್ಚು ಪರಿಷ್ಕರಿಸುವ ಬೇಡಿಕೆಗಳನ್ನು ಅದು ಪ್ರೇರೇಪಿಸಬಹುದಿತ್ತು! 2005–10ರ ಅವಧಿಯಲ್ಲಿ ಹೊರಸೂಸುವಿಕೆಯ ತೀವ್ರತೆಯಲ್ಲಿ ಭಾರತವು ವಾರ್ಷಿಕ ಶೇಕಡಾ 2.5 ರಷ್ಟು ಸುಧಾರಣೆಯನ್ನು ಸಾಧಿಸಿದೆ ಎಂದು ಭಾರತದ ರಾಷ್ಟ್ರೀಯವಾಗಿ ನಿರ್ಧರಿಸಿದಕೊಡುಗೆ (ಎನ್ಡಿಸಿ) ಹೇಳಿದೆ, ಆದರೆ 2030 ರ ಗುರಿ ವಾರ್ಷಿಕ ಶೇಕಡಾ 1.5 ರಷ್ಟಿದೆ! ಸ್ಥಾಪಿಸಲಾದ ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಶೇಕಡಾವಾರು ಪರಿಸ್ಥಿತಿಯಲ್ಲಿ ಸಹ ಇದೇ ಪರಿಸ್ಥಿತಿಯಿದೆ.

COP ಜತೆಗೆ ಅದರ ಮುಖ್ಯ ಭಾಗವಾಗಿರದೆ ಪಕ್ಕದಲ್ಲಿ ನಡೆದ ಅನೇಕ ವಲಯ ಚರ್ಚೆಗಳು ಮತ್ತು ಒಪ್ಪಂದಗಳಲ್ಲಿ ಭಾರತವು ಭಾಗವಹಿಸಲಿಲ್ಲ ಅಥವಾ ಸಹಿ ಮಾಡಲಿಲ್ಲ ಅಥವಾ ಇತ್ತೀಚಿನ COPಗಳಲ್ಲಿ ಈ ಪ್ರವೃತ್ತಿ ಹೆಚ್ಚಾಗಿದೆ, ವಿಶೇಷವಾಗಿ COP ಪ್ರಕ್ರಿಯೆಯು ತುಂಬಾ ನಿಧಾನವಾಗಿ ಚಲಿಸುತ್ತಿದೆಯಾದ್ದರಿಂದ ಕೃಷಿ ಮತ್ತು ಆಹಾರ ಸುರಕ್ಷತೆ, ಆರೋಗ್ಯ, ನಗರೀಕರಣ, (ದೆಹಲಿಯಲ್ಲಿ ಜಿ 20 ಸಮಯದಲ್ಲಿ ಪ್ರಾರಂಭಿಸಲಾದ) ನವೀಕರಿಸಬಹುದಾದ ಇಂಧನ, ಪರಮಾಣು ಶಕ್ತಿ ಮತ್ತು ಹೈಡ್ರೋಜನ್ ಕುರಿತು ಪ್ರಮುಖ ಒಪ್ಪಂದಗಳಿಗೆ ಸಹಿಹಾಕಲಾಯಿತು. ಮುಂದುವರಿಯುತ್ತಾ, ಭಾರತವು ತನ್ನ ಹೊಸ, ಬೆಳೆದ ಎನ್ಡಿಸಿ ಗುರಿಗಳ ಬಗ್ಗೆ ಮತ್ತು ರಾಷ್ಟ್ರೀಯ ಹೊಂದಾಣಿಕೆಯ ಯೋಜನೆಯ ಬಗ್ಗೆ ಶ್ರಮಿಸಬೇಕಾಗುತ್ತದೆ, ಇದಕ್ಕೆ COP 28 ರಲ್ಲಿ ಹೆಚ್ಚು ಒತ್ತು ನೀಡಲಾಯಿತು. ಅದರ ಸ್ವಭಾವದಿಂದ, ಇದು ರಾಜ್ಯ ಸರ್ಕಾರಗಳು ಮತ್ತು ಇತರ ಪಾಲುದಾರರ ಸಹಭಾಗಿತ್ವದಲ್ಲಿ ರೂಪೀಕರಣ, ಯೋಜನೆ ಮತ್ತು ಅನುಷ್ಠಾನವನ್ನು ಒಳಗೊಂಡಿರುತ್ತದೆ, ಪ್ರಸ್ತುತ ಸರಕಾರ ಇಂತಹ ಮಾದರಿಗೆ ಒಗ್ಗಿದ್ದಲ್ಲ.

ಉಚಿತ ಪಡಿತರ ಪಡೆಯುವ 80 ಕೋಟಿ ಬಡವರಿರುವ ಮೋದಿ ಆಡಳಿತದಲ್ಲಿ 'ಅಮೃತ ಕಾಲ' ಯಾರಿಗೆ!!

ಸಿ. ಸಿದ್ದಯ್ಯ

2024ರ ಚುನಾವಣೆಗೆ ಇನ್ನು ಕೆಲವು ತಿಂಗಳು ಬಾಕಿ ಇರುವಾಗಲೇ, ಮಾಧ್ಯಮಗಳಲ್ಲಿ ದೊಡ್ಡ ದೊಡ್ಡ ಚುನಾವಣಾ ಜಾಹಿರಾತುಗಳನ್ನು ಬಿಜೆಪಿ (ಸಾರ್ವಜನಿಕರ ತೆರಿಗೆ ಹಣದಿಂದ) ನೀಡತೊಡಗಿದೆ. ಇಂತಹ ಜಾಹಿರಾತುಗಳಲ್ಲಿ "ಬಿಜೆಪಿ ಆಡಳಿತದಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (PMGKAY) ಅಡಿಯಲ್ಲಿ ದೇಶದ 80 ಕೋಟಿಗೂ ಹೆಚ್ಚು ಬಡವರು ಮತ್ತು ದುರ್ಬಲರಿಗೆ ಆಹಾರ ಧಾನ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ" ಎಂಬುದೂ ಒಂದು.



ಜಾಹಿರಾತುಗಳಲ್ಲದೆ, ಹಲವು ಸಭೆ, ಸಮಾರಂಭಗಳಲ್ಲಿಯೂ ಬಿಜೆಪಿ ನಾಯಕರು ಮತ್ತು ಸರ್ಕಾರ ಇದನ್ನೇ ಮತ್ತೆ ಮತ್ತೆ ಡಂಗುರ ಬಾರಿಸುತ್ತಿದ್ದಾರೆ. ಕೆಲವೊಮ್ಮೆ ಸಚಿವರುಗಳ ಮಾತುಗಳು ಹೇಗಿವೆಯೆಂದರೆ, ಪಡಿತರ ಧಾನ್ಯಗಳು ಬಿಜೆಪಿ ಬೊಕ್ಕಸದಿಂದ ಬಂದಿದೆಯೇ ಹೊರತು ತೆರಿಗೆದಾರರ ಹಣದಿಂದಲ್ಲ ಎಂಬ ಭಾವನೆಯನ್ನು ಬಿತ್ತುವಂತಿರುತ್ತದೆ. ಒಮ್ಮೆ, ಕ್ಯಾಬಿನೆಟ್ ಸಚಿವೆ ಸ್ಮೃತಿ ಇರಾನಿ "ನಾವು 80 ಕೋಟಿಗೆ ಉಚಿತ ಪಡಿತರವನ್ನು ನೀಡುತ್ತಿದ್ದೇವೆ, ನಾವು ಇನ್ನೇನು ಮಾಡಬಹುದು." ಎನ್ನುತ್ತಾ ತುಂಬಾ ದುರಹಂಕಾರದಿಂದ ವ್ಯಂಗ್ಯವಾಡಿದರು. (ಮಾಹಿತಿ: ಟೈಮ್ಸ್ ಆಫ್ ಇಂಡಿಯಾ)

"5 ವರ್ಷಗಳಲ್ಲಿ 13.5 ಕೋಟಿ ಬಡವರು ಹೊಸ ಮಧ್ಯಮ ವರ್ಗವಾಗಿ!!

ಪ್ರಧಾನಿ ನರೇಂದ್ರ ಮೋದಿಯವರು ಸ್ವಾತಂತ್ರ್ಯ ಆಚರಣೆಯ ದಿನದಂದು ಕೆಂಪು ಕೋಟೆಯ ಮೇಲೆ ನಿಂತು ಭಾಷಣ ಮಾಡುತ್ತಾ, "ನಾವು ಮಾಡಿದ ಈ ಎಲ್ಲಾ ಪ್ರಯತ್ನಗಳ ಫಲವೆಂದರೆ ಇಂದು, ನನ್ನ ಐದು ವರ್ಷಗಳ ಅಧಿಕಾರವಧಿಯಲ್ಲಿ, ನನ್ನ 13.5 ಕೋಟಿ ಬಡ ಸಹೋದರರು ಮತ್ತು ಸಹೋದರಿಯರು ಬಡತನದ ಸರಪಳಿಗಳನ್ನು ಮುರಿದು ಹೊಸ ಮಧ್ಯಮ ವರ್ಗವಾಗಿ ಹೊರಹೊಮ್ಮಿದ್ದಾರೆ. ಜೀವನದಲ್ಲಿ ಇದಕ್ಕಿಂತ ದೊಡ್ಡ ಸಂತೃಪ್ತಿ ಬೇರೊಂದಿಲ್ಲ' ಎಂದು ಹೇಳುತ್ತಾರೆ!!

2015-16 ಮತ್ತು 2019-21ರ ಅವಧಿಯಲ್ಲಿ ಭಾರತದ ರಾಷ್ಟ್ರೀಯ ಬಹು ಆಯಾಮದ ಬಡತನ ಸೂಚ್ಯಂಕವು 24.86 ಪ್ರತಿಶತದಿಂದ 14.96 ಪ್ರತಿಶತಕ್ಕೆ ಇಳಿದಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಈ ಶೇ. 9.89 ಇಳಿಕೆ ಎಂದರೆ ಈ ಅವಧಿಯಲ್ಲಿ ಸುಮಾರು 13.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ. ಯಾರಿವರು? ಬಡತನದ ಸರಪಳಿಗಳನ್ನು ಮುರಿದು ಮೇಲೆ ಬಂದವರು? ಯಾವ ಆಧಾರದ ಮೇಲೆ ಇಂತಹ ಹೇಳಿಕೆ ನೀಡುತ್ತಾರೆ?

4.5 ಕೋಟಿ ಪಡಿತರ ಚೀಟಿ ರದ್ದು

ಸರ್ಕಾರದ ಮಾಹಿತಿಯಂತೆ, ಮೋದಿ ಅಧಿಕಾರಕ್ಕೆ ಬಂದ ನಂತರದ 8 ವರ್ಷಗಳಲ್ಲಿ 4.5 ಕೋಟಿ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ. ಆ ಮೂಲಕ 8 ವರ್ಷಗಳಲ್ಲಿ 18 ಕೋಟಿ ಜನರನ್ನು ಪಡಿತರ ಸೌಲಭ್ಯದಿಂದ ಹೊರಹಾಕಲಾಗಿದೆ. ಇವುಗಳನ್ನು ಬೋಗಸ್ ಕಾರ್ಡುಗಳು, ಅನರ್ಹರು ಪಡೆದ ಕಾರ್ಡುಗಳು, ಒಂದಕ್ಕಿಂತ ಹೆಚ್ಚು ಕಾರ್ಡ್ ಪಡೆದಿದ್ದವುಗಳು ಎಂದು ಸರ್ಕಾರ ಹೇಳುತ್ತದೆಯಾದರೂ, ಪಡಿತರ ಚೀಟಿ ಜೊತೆಗೆ ಆಧಾರ್ ಕಾರ್ಡ್ ಜೋಡಣೆ ಕಡ್ಡಾಯ ಮಾಡಿದ ನಂತರ, ಕೋಟ್ಯಾಂತರ ಅರ್ಹ ಫಲಾನುಭವಿಗಳು ಪಡಿತರದಿಂದ ವಂಚಿತರಾಗಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಇದು ಏನೇ ಇರಲಿ, 18 ಕೋಟಿ ಜನರನ್ನು ಪಡಿತರದಿಂದ ಹೊರತಳ್ಳಿದ ನಂತರವೂ, 19.33 ಕೋಟಿ ಪಡಿತರ ಚೀಟಿಗಳೊಂದಿಗೆ 80 ಕೋಟಿ ಜನರು ಇನ್ನೂ ಪಡಿತರ ಪಡೆಯುತ್ತಿದ್ದಾರೆ. 9 ವರ್ಷಗಳ ಹಿಂದೆ ಎಷ್ಟು ಜನರು ಬಿಪಿಎಲ್ ಕಾರ್ಡ್ ಹೊಂದಿದ್ದರೋ ಅಷ್ಟೇ ಸಂಖ್ಯೆಯ ಜನರು ಇಂದಿಗೂ ಹೊಂದಿದ್ದಾರೆ. ಅಂದರೆ, 80 ಕೋಟಿ ಜನರು ಬಡತನದ ರೇಖೆಗಿಂತ ಕೆಳಗಿನ ಜೀವನ ಸಾಗಿಸುತ್ತಿದ್ದಾರೆ ಎಂದು ಸರ್ಕಾರವೇ ಒಪ್ಪಿಕೊಂಡಂತೆ ಆಗುತ್ತದೆ.

ಬಿಪಿಎಲ್ ಕಾರ್ಡ್ ಫಲಾನುಭವಿಗಳಾಗಿದ್ದ ಮತ್ತು 5 ವರ್ಷಗಳ ಹಿಂದೆ ಬಡತನದ ರೇಖೆಗಿಂತ ಕೆಳಗಿದ್ದವರು, ಬಡತನದ ಸರಪಳಿಗಳನ್ನು ಮುರಿದು ಹೊಸ ಮಧ್ಯಮ ವರ್ಗವಾಗಿ ಹೊರಹೊಮ್ಮಿದ ಕಾರಣಕ್ಕೆ ಬಿಪಿಎಲ್ ಕಾರ್ಡ್‌ಗಳನ್ನು ಹಿಂಪಡೆಯಲಾಗಿದೆ ಎಂಬ ಕಾರಣವನ್ನು ಸರ್ಕಾರ ನೀಡುತ್ತಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ಉದ್ಯೋಗಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ

ಅಐಖಇ ಅಂದಾಜಿನ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ಉದ್ಯೋಗಗಳ ಸಂಖ್ಯೆಯಲ್ಲಿ ಯಾವುದೇ ಹೆಚ್ಚಳವಾಗಿಲ್ಲ. ಕಾರ್ಮಿಕರ ತಲಾವಾರು ನೈಜ ಆದಾಯ ಹೆಚ್ಚಾಗಲಿಲ್ಲ. ಉದ್ಯೋಗಿಗಳಿಗೆ ಹೋಲಿಸಿದರೆ ನಿರುದ್ಯೋಗಿಗಳ ಅನುಪಾತ ಹೆಚ್ಚುತ್ತಿದೆ. ಕೆಲಸ ಮಾಡುವವರಲ್ಲಿ ಪೂರ್ಣಾವಧಿಯ ಉದ್ಯೋಗಿಗಳು, ತಿಂಗಳಿಗೆ ಕೆಲವೇ ಗಂಟೆಗಳು ಅಥವಾ ಕೆಲವು ದಿನಗಳು ಮಾತ್ರ ಕೆಲಸ ಹುಡುಕುವವರು, ತಮ್ಮ ಇರುವ ಕೆಲಸವನ್ನು ಕಳೆದುಕೊಳ್ಳುವವರು - ಇತ್ಯಾದಿ. ಪೂರ್ಣ ಸಮಯದ ಉದ್ಯೋಗದಲ್ಲಿರುವ ಜನರ ಸಂಖ್ಯೆ ತುಲನಾತ್ಮಕವಾಗಿ ಕಡಿಮೆ ಇರುವುದರಿಂದ ಸರಾಸರಿ ತಲಾವಾರು ಆದಾಯವು ಕುಸಿಯುತ್ತಿದೆ. ನಿಜ ಸ್ಥಿತಿ ಹೀಗಿದ್ದರೂ, ಬಹುಪಾಲು ಜನರು ಬಡತನದಿಂದ ಹೊರಬಂದಿದ್ದಾರೆ ಎಂದು ಪ್ರಚಾರ ಮಾಡಲಾಗುತ್ತಿದೆ. ಜನರು ಸಂಚರಿಸುವ ರಸ್ತೆಗಳ ಸ್ಥಿತಿ ಸುಧಾರಿಸಿದೆ. ಬೀದಿ ದೀಪಗಳು ಪ್ರಕಾಶಮಾನವಾಗಿವೆ. ಆದರೆ ಅವರಿಗೆ

ಪುಟ 14 ಕ್ಕೆ

ಸರ್ಕಾರದ ಮಾಹಿತಿಯಂತೆ, ಮೋದಿ ಅಧಿಕಾರಕ್ಕೆ ಬಂದ ನಂತರದ 8 ವರ್ಷಗಳಲ್ಲಿ 4.5 ಕೋಟಿ ಪಡಿತರ ಚೀಟಿಗಳನ್ನು ರದ್ದುಗೊಳಿಸಲಾಗಿದೆ. ಆ ಮೂಲಕ 18 ಕೋಟಿ ಜನರನ್ನು ಪಡಿತರ ಸೌಲಭ್ಯದಿಂದ ಹೊರಹಾಕಲಾಗಿದೆ. ಇವರುಗಳನ್ನು ಬೋಗಸ್ ಕಾರ್ಡುಗಳು, ಅನರ್ಹರು ಪಡೆದ ಕಾರ್ಡುಗಳು, ಒಂದಕ್ಕಿಂತ ಹೆಚ್ಚು ಕಾರ್ಡ್ ಪಡೆದಿದ್ದವುಗಳು ಎಂದು ಸರ್ಕಾರ ಹೇಳುತ್ತದೆಯಾದರೂ, ಪಡಿತರ ಚೀಟಿ ಜೊತೆಗೆ ಆಧಾರ್ ಕಾರ್ಡ್ ಜೋಡಣೆ ಕಡ್ಡಾಯ ಮಾಡಿದ ನಂತರ, ಕೋಟ್ಯಾಂತರ ಅರ್ಹ ಫಲಾನುಭವಿಗಳು ಪಡಿತರದಿಂದ ವಂಚಿತರಾಗಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ. 2011 ರ ನಂತರ ಜನಗಣತಿ ನಡೆದಿಲ್ಲ. 2021 ರಲ್ಲಿ ಗಣತಿ ನಡೆದಿದ್ದರೆ, NFSA ಅಡಿಯಲ್ಲಿ ಸಹಾಯಕ್ಕೆ ಅರ್ಹರಾಗಿರುವ ಬಡವರ ಪ್ರಮಾಣವನ್ನು ನಿರ್ಣಯಿಸಲು ಸಾಧ್ಯವಾಗುತ್ತಿತ್ತು.



ಒಂದಡೆ ಪ್ರಧಾನಿ ನರೇಂದ್ರ ಮೋದಿಯವರು 'ಅಮೃತ್ ಕಾಲ್' ಬಗ್ಗೆ ಮಾತನಾಡುತ್ತಾರೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ 'ಅಮೃತ್ ಕಾಲ್' ಅನ್ನು ಹಲವು ಬಾರಿ ಉಲ್ಲೇಖಿಸುತ್ತಾರೆ. "ನಾವು ಆಜಾದಿ ಕಾ ಅಮೃತ್ ಮಹೋತ್ಸವವನ್ನು ಗುರುತಿಸುತ್ತಿದ್ದೇವೆ ಮತ್ತು ಮುಂದಿನ 25 ವರ್ಷಗಳ ಕಾಲ ಭಾರತವನ್ನು 100ರ ಕಡೆಗೆ ಮುನ್ನಡೆಯುತ್ತಿರುವ 'ಅಮೃತ್ ಕಾಲ್'ಗೆ ಪ್ರವೇಶಿಸಿದ್ದೇವೆ" ಎನ್ನುತ್ತಾರೆ. ಮತ್ತೊಂದಡೆ, "ಬಡತನ ರೇಖೆಗಿಂತ ಕೆಳಗಿನ 80 ಕೋಟಿ ಜನರಿಗೆ ಉಚಿತ ಆಹಾರ ಧಾನ್ಯಗಳನ್ನು ವಿತರಿಸುತ್ತಿದ್ದೇವೆ. ಮತ್ತೆ ಐದು ವರ್ಷಗಳ ಕಾಲ 81.35 ಕೋಟಿ ಜನರಿಗೆ ಉಚಿತ ಪಡಿತರ ವಿತರಿಸುವ ಕಾರ್ಯ ಮುಂದುವರಿಸುತ್ತೇವೆ" ಎನ್ನುತ್ತಾ, ತಮ್ಮದು ಬಡಜನರ ಪರವಾದ ಸರ್ಕಾರ, ನಾವು ಯಾರನ್ನೂ ಹಸಿವಿನಿಂದ ನರಳಲು ಬಿಡುವುದಿಲ್ಲ ಎನ್ನುತ್ತಾರೆ.

ಮೋದಿ-9 ವರ್ಷಗಳು-ಭಾಗ-32

ಆಹಾರ ಧಾನ್ಯಗಳ ಬದಲಾಗಿ ನೇರ ನಗದು

ಬಿಜೆಪಿ ಆಡಳಿತದಲ್ಲಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿಯಲ್ಲಿ ದೇಶದ 80 ಕೋಟಿಗೂ ಹೆಚ್ಚು ಬಡವರು ಮತ್ತು ದುರ್ಬಲರಿಗೆ ಆಹಾರ ಧಾನ್ಯಗಳನ್ನು ಉಚಿತವಾಗಿ ಒದಗಿಸುವ ಮೂಲಕ ಅವರ ಹಸಿವನ್ನು ನೀಗಿಸುತ್ತಿದೆ ಎಂದು ಮೋದಿ ಸರ್ಕಾರ ಒಂದಡೆ ಹೇಳುತ್ತಿದೆ. ಮತ್ತೊಂದಡೆ ಇದೇ ಸರ್ಕಾರ ಸದ್ದಿಲ್ಲದೆ, ಪಡಿತರ ಆಹಾರ ಧಾನ್ಯಗಳ ಬದಲು ನೇರ ನಗದು ಯೋಜನೆ (ಡಿಬಿಟಿ) ಜಾರಿಗೆ ತರುವ ನಿಟ್ಟಿನಲ್ಲಿ ದೇಶದ ಕೆಲವು ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಡಿಬಿಟಿ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಜನ್-ಧನ್ ಬ್ಯಾಂಕ್ ಖಾತೆಗಳು, ಆಧಾರ್ ಮತ್ತು ಮೊಬೈಲ್ ಏಕೀಕರಣದ ಅದರ JAM ಟ್ರಿನಿಟಿಯನ್ನು ಹತೋಟಿಗೆ ತರಲು, ಸರ್ಕಾರವು ಹಲವಾರು ಡಿಜಿಟಲ್-ಆಧಾರಿತ ಉಪಕ್ರಮಗಳನ್ನು ಘೋಷಿಸಿತು, ವಿಶೇಷವಾಗಿ 2015 ರ ಸುಮಾರಿಗೆ. JAM ಅನ್ನು ಅಸ್ತಿತ್ವದಲ್ಲಿರುವ ಕಲ್ಯಾಣ ಯೋಜನೆಗಳ ವಿತರಣೆ ಮತ್ತು ಗುರಿಯನ್ನು ಸುಧಾರಿಸಲು ಪ್ರಮುಖ ಆವಿಷ್ಕಾರವೆಂದು ಪರಿಗಣಿಸಲಾಗಿದೆ.

ಆಹಾರ ಸಬ್ಸಿಡಿ ಯೋಜನೆಯ ನಗದು ವರ್ಗಾವಣೆಯ ಯೋಜನೆಯನ್ನು 21.08.2015 ರಂದು ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013 (NFSA) ಅಡಿಯಲ್ಲಿ ಅಧಿಸೂಚಿಸಲಾದ ಆಹಾರ ಸಬ್ಸಿಡಿ ನಿಯಮಗಳ ನಗದು ವರ್ಗಾವಣೆ, 2015 ರ ನಿಬಂಧನೆಗಳ ಪ್ರಕಾರ ಜಾರಿಗೊಳಿಸಲಾಗಿದೆ.

ಆಹಾರ ಧಾನ್ಯಗಳನ್ನು ಒದಗಿಸುವ ಬದಲು, ಆಹಾರ ಸಬ್ಸಿಡಿಯನ್ನು ನೇರವಾಗಿ ಪಡಿತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮಾಡುವ ಯೋಜನೆಯನ್ನು ಈಗಾಗಲೇ ಮೂರು ಕೇಂದ್ರಾಡಳಿತ ಪ್ರದೇಶಗಳಾದ ಚಂಡೀಗಢ ಮತ್ತು ಪುದುಚೇರಿಯಲ್ಲಿ ಸೆಪ್ಟೆಂಬರ್, 2015 ರಿಂದ ಮತ್ತು ದಾದ್ರಾ ಮತ್ತು ನಗರ ಹವೇಲಿಯ ನಗರ ಪ್ರದೇಶಗಳಲ್ಲಿ ಮಾರ್ಚ್, 2016 ರಿಂದ ಪ್ರಾಯೋಗಿಕವಾಗಿ ಜಾರಿಗೆ ತಂದಿದೆ. "ಈ ಕೇಂದ್ರಾಡಳಿತ ಪ್ರದೇಶಗಳ ಫಲಾನುಭವಿಗಳು ನಗದು ವರ್ಗಾವಣೆಯನ್ನು ಸ್ವೀಕರಿಸುತ್ತಿದ್ದಾರೆ. ಆಹಾರ ಪಡಿತರ ಧಾನ್ಯಗಳ ಬದಲಿಗೆ ಅವರು ಮುಕ್ತ ಮಾರುಕಟ್ಟೆಯಿಂದ ತಮ್ಮ ಆಯ್ಕೆಯ ಆಹಾರ ಧಾನ್ಯಗಳನ್ನು ಖರೀದಿಸಲು ಬಳಸುತ್ತಾರೆ" ಎಂದು ಈ ನೇರ ನಗದು ಯೋಜನೆಯನ್ನು ಸರ್ಕಾರ ಸಮರ್ಥಿಸಿಕೊಳ್ಳುತ್ತದೆ.

ಜಾರ್ಖಂಡ್, ದೆಹಲಿ, ಪಂಜಾಬ್ ಮತ್ತು ಮಧ್ಯಪ್ರದೇಶದ ಕೆಲವು ಆಯ್ದ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಎರಡನೇ ಹಂತಕ್ಕಾಗಿ ಹರಿಯಾಣ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ಕೇರಳವನ್ನು ಗುರುತಿಸಲಾಗಿದೆ.

ನೇರ ಲಾಭ ವರ್ಗಾವಣೆ (DBT) ಪ್ರಯೋಗವು ಫಲಾನುಭವಿಗಳಿಗೆ ತಮ್ಮ ಬಳಕೆಯ ಬುಟ್ಟಿಯನ್ನು ಆಯ್ಕೆ ಮಾಡಲು ಹೆಚ್ಚಿನ ಸ್ವಾಯತ್ತತೆಯನ್ನು ಒದಗಿಸುತ್ತದೆ, ಆಹಾರದ ವೈವಿಧ್ಯತೆಯನ್ನು ಹೆಚ್ಚಿಸುತ್ತದೆ, ಸೋರಿಕೆಯನ್ನು ಕಡಿಮೆ ಮಾಡುತ್ತದೆ, ಆರ್ಥಿಕ ಸೇರ್ಪಡೆಯನ್ನು ಉತ್ತೇಜಿಸುತ್ತದೆ ಎಂದು ಸರ್ಕಾರ ಹೇಳುತ್ತದೆ.

ಕರ್ನಾಟಕದಲ್ಲಿ ಡಿಬಿಟಿ ಜಾರಿ

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಚುನಾವಣಾ ಭರವಸೆಯಲ್ಲಿ, ಬಿಪಿಎಲ್ ಕುಟುಂಬಗಳ ಸದಸ್ಯರಿಗೆ ಉಚಿತವಾಗಿ ತಲಾ ಐದು ಕೆಜಿ ಹೆಚ್ಚುವರಿಯಾಗಿ ಅಕ್ಕಿ ಕೊಡುವುದಾಗಿ ಹೇಳಿತ್ತು. ಐದು ಕೆಜಿ ಅಕ್ಕಿ ವಿತರಣೆಯ ಬದಲಿಗೆ ನಗದು ಕೊಡುತ್ತಿದೆ. ಈ ನಿರ್ಧಾರವು, ಕೇಂದ್ರ ಸರ್ಕಾರವು ತನ್ನ ನೇರ ನಗದು ವರ್ಗಾವಣೆ (ಡಿಬಿಟಿ) ಯೋಜನೆಯ ಜಾರಿಯ ಭಾಗವಾಗಿ ಕರ್ನಾಟಕವನ್ನು ಉದ್ದೇಶಪೂರ್ವಕವಾಗಿ ಈ ಯೋಜನೆಯ ಒಳಗೆ ತಳ್ಳಿದೆ.

ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಗವಾಗಿ ಇವೆಲ್ಲವೂ ನಡೆಯುತ್ತಿದೆ ಎಂಬುದನ್ನು ಅರಿಯುವುದು ಒಳಿತು. ಇಂತಹ ಜನವಿರೋಧಿ ನವ ಉದಾರವಾದಿ ನೀತಿಗಳ ವಿರುದ್ದ ದೊಡ್ಡ ಪ್ರಮಾಣದ ಧ್ವನಿ ಎತ್ತುವ ಮೂಲಕ ಇಂತಹ ಜನವಿರೋಧಿ ನೀತಿಗಳನ್ನು ತಡೆಯಬಹುದಾಗಿದೆ.

ಭಾರತ ಸರ್ಕಾರ ವಿಶ್ವ ವಾಣಿಜ್ಯ ಸಂಸ್ಥೆ(WTO) ಜೊತೆಗೆ ಮಾಡಿಕೊಂಡಿರುವ 'ಸುಂಕಗಳು ಮತ್ತು ವ್ಯಾಪಾರಗಳ ಮೇಲಿನ ಸಾಮಾನ್ಯ ಒಪ್ಪಂದ' (GATT)ದ ಷರತ್ತುಗಳ ಪ್ರಕಾರ, ಪಡಿತರ ವ್ಯವಸ್ಥೆಯೂ ಸೇರಿದಂತೆ, ಎಲ್ಲಾ ರೀತಿಯ ಸರಕು ಮತ್ತು ಸೇವೆಗಳನ್ನು ಮುಕ್ತ ಮಾರುಕಟ್ಟೆಗೆ ತೆರೆದಿಡಬೇಕು. ಈ ಷರತ್ತುಗಳ ಗುರಿಯನ್ನು ಪೂರೈಸುವ ಬರದಲ್ಲಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಬಡವರಿಗೆ ಉಚಿತ ಅಥವಾ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತಿರುವ ಪಡಿತರ ವ್ಯವಸ್ಥೆಯನ್ನು ತೆಗೆದುಹಾಕುವ ಪ್ರಯತ್ನದ ಭಾಗವಾಗಿ ಇವೆಲ್ಲವನ್ನೂ ಮಾಡುತ್ತಿದೆ.

146 ಎಂ.ಪಿ.ಗಳ ಸಾಮೂಹಿಕ ಅಮಾನತ್ತು : ಅಮೃತ ಕಾಲದ ಹೊಸ ದಾಖಲೆ

ಗಣತಂತ್ರ ಭಾರತ 75 ನೇ ವರ್ಷಕ್ಕೆ ಕಾಲಿಡಲು ಸಿದ್ಧವಾಗುತ್ತಿರುವಂತೆ ಭಾರತದ ಸಂಸತ್ತು ಹೊಸದೊಂದು ದಾಖಲೆ ಸೃಷ್ಟಿಸಿದೆ. 2023ರ ಮಳೆಗಾಲದ ಅಧಿವೇಶನದಲ್ಲಿ ಲೋಕಸಭೆಯ 100 ಸದಸ್ಯರು ಮತ್ತು ರಾಜ್ಯಸಭೆಯ 46 ಸದಸ್ಯರು, ಅಂದರೆ ಒಟ್ಟು 146 ಎಂಪಿಗಳು ಅಮಾನತಿಗೆ ಒಳಗಾಗಿದ್ದಾರೆ. ಇವರೆಲ್ಲರೂ ಪ್ರತಿಪಕ್ಷಗಳಿಗೆ ಸೇರಿದವರು ಎಂದು ಬೇರೆ ಹೇಳಬೇಕಾಗಿಲ್ಲ. ಇದುವರೆಗಿನ ದಾಖಲೆಯೆಂದರೆ ಮಾರ್ಚ್15, 1989ರಂದು, 8ನೇ ಲೋಕಸಭೆಯ 63 ಪ್ರತಿಪಕ್ಷಗಳ ಸದಸ್ಯರನ್ನು ಅಮಾನತು ಮಾಡಲಾಗಿತ್ತು. ಆಗ ರಾಜೀವ್ ಗಾಂಧಿ ಪ್ರಧಾನ ಮಂತ್ರಿಯಾಗಿದ್ದರು. ಅವರ ಅಮಾನತು ಒಂದೆರಡು ದಿನಗಳಲ್ಲೇ ರದ್ದಾಯಿತು. ಆದರೆ ಇವರಲ್ಲಿ ಹಲವರ ಅಮಾನತು ಅಧಿವೇಶನ ಮುಗಿದ ಮೇಲೂ ಮುಂದುವರೆಯುತ್ತಿದೆ

ಇಬ್ಬರು ಯುವಕರು ವೀಕ್ಷಕರ ಗ್ಯಾಲರಿಯಿಂದ ಜಿಗಿದು ತಗಡಿನ ಡಬ್ಬಿಯಿಂದ ಹಳದಿ ಹೊಗೆ ಚೆಲ್ಲಿ ಘೋಷಣೆಗಳನ್ನು ಕೂಗಿ ಗೊಂದಲ ಸೃಷ್ಟಿಸಿದ ಭದ್ರತಾಲೋಪದ ಬಗ್ಗೆ ಗೃಹಮಂತ್ರಿಗಳು ಹೇಳಿಕೆ ನೀಡಬೇಕು ಎಂದು ಕೇಳಿದ್ದಕ್ಕೇ ಈ 146 ಎಂಪಿಗಳನ್ನು ಅಮಾನತುಗೊಳಿಸಿರುವುದು ಈ ದಾಖಲೆಯನ್ನು ಇನ್ನಷ್ಟು 'ವಿಶಿಷ್ಟ'ಗೊಳಿಸಿದೆ ಎನ್ನುತ್ತಾರೆ ವೀಕ್ಷಕರು.

ಇನ್ನೂ ವಿಶೇಷವೆಂದರೆ, ಆ ಯುವಕರಿಗೆ ಸಂದರ್ಶಕರ ಪಾಸ್ ನೀಡಿದ ಮೈಸೂರಿನ ಬಿಜೆಪಿ ಎಂಪಿ ಯ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

146 ಪ್ರತಿಪಕ್ಷಗಳ ಸದಸ್ಯರ ಗೈರುಹಾಜರಿಯಲ್ಲಿ ಮೂರು ಕ್ರಿಮಿನಲ್ ಕಾಯ್ದೆ ತಿದ್ದುಪಡಿ ಮಸೂದೆಗಳು, ದೂರ ಸಂಪರ್ಕ ನಿಯಂತ್ರಣದ ಒಂದು ಮಸೂದೆ ಮತ್ತು ಚುನಾವಣಾ ಆಯೋಗದ ನೇಮಕವನ್ನು ಕುರಿತ ಮಹತ್ವದ ಮಸೂದೆಗಳು ಸೇರಿದಂತೆ ಈ ಅಧಿವೇಶನದಲ್ಲಿಯೇ ಮಂಡಿಸಿದ ಎಲ್ಲ 10 ಮಸೂದೆಗಳು ಮತ್ತು 7 ಹಿಂದಿನ ಅಧಿವೇಶನಗಳಲ್ಲಿ ಬಾಕಿ ಉಳಿದಿದ್ದ ಮಸೂದೆಗಳನ್ನು ಎರಡು ವಾರಗಳ ಈ ಅಧಿವೇಶನದಲ್ಲಿ ಹೆಚ್ಚೇನೂ ಚರ್ಚೆಯೇ ಇಲ್ಲದೆ ಪಾಸು ಮಾಡಿಸಿಕೊಳ್ಳಲಾಯಿತು.

ಮಾತ್ರವಲ್ಲ, ಅಮಾನತುಗೊಂಡ ಸದಸ್ಯರ 264 ಪ್ರಶ್ನೆಗಳನ್ನು ಪ್ರಶ್ನೆಗಳ ಪಟ್ಟಿಯಿಂದಲೇ ತೆಗೆದು ಹಾಕಲಾಯಿತು. ನಿಯಮಗಳ ಪ್ರಕಾರ ಪ್ರಶ್ನೆ ಕೇಳಿದ ಸದಸ್ಯರು ಸದನದಲ್ಲಿ ಹಾಜರಿರಲಿ, ಬಿಡಲಿ, ಸರಕಾರದ ವತಿಯಿಂದ ಅದಕ್ಕೆ ಉತ್ತರ ನೀಡಲೇಬೇಕು.

ಈ ಸಾಮೂಹಿಕ ಅಮಾನತಿನ ಹಿಂದೆ ಒಂದು ಸ್ಪಷ್ಟ ತಂತ್ರವಿದ್ದಂತೆ ಕಾಣುತ್ತದೆ ಎನ್ನುತ್ತಾರೆ ಸಿಪಿಐ(ಎಂ) ಎಂಪಿ ಜಾನ್ ಬ್ರಿಟ್ಟಾಸ್. ಕಾರ್ಯಾಂಗ ಶಾಸಕಾಂಗಕ್ಕೆ ಜವಾಬುದಾರವಾಗಿರಬೇಕು ಎಂಬ ಸಂವಿಧಾನಿಕ ತತ್ವವನ್ನು ಈ 'ಅಚ್ಛೇದಿನ್', ನಂತರ 'ನಯಾಬಾರತ್' ಮತ್ತು ಈಗಿನ 'ಅಮೃತ ಕಾಲ'ದಲ್ಲಿ ಗಾಳಿಗೆ ತೂರುವ ಪ್ರಯತ್ನ ಈ ಎನ್‍ಡಿಎ–2 ಸರಕಾರದ ಕೊನೆಗಾಲಕ್ಕೆ ತಾರಕವನ್ನು ತಲುಪಿರುವಂತೆ ಕಾಣುತ್ತದೆ.

ಕಳೆದ ನಾಲ್ಕು ಲೋಕಸಭೆಗಳ ಕಾರ್ಯನಿರ್ವಹಣೆಯ ಅಂಕಿ–ಅಂಶಗಳನ್ನು ಪರಿಶೀಲಿಸಿದಾಗ ಇದು ಹೆಚ್ಚು ಸ್ಪಷ್ಟವಾಗಿ ಕಾಣುತ್ತದೆ ಎನ್ನುತ್ತಾರೆ ವಿಶ್ಲೇಷಕರು. 17ನೇ ಲೋಕಸಭೆ ಇದುವರೆಗೆ ಪಾಸು ಮಾಡಿದ 172 ಮಸೂದೆಗಳಲ್ಲಿ 64 ರ ಮೇಲೆ ಒಂದು ಗಂಟೆಯ ಚರ್ಚೆಯೂ ನಡೆದಿಲ್ಲ. 15 ನೇ ಲೋಕಸಭೆಯಲ್ಲಿ ಈ ಸಂಖ್ಯೆ 44 ಮತ್ತು 24. ಈ ಅವಧಿಯಲ್ಲಿ ರಾಜ್ಯಸಭೆಯಲ್ಲಿ 61 ಮಸೂದೆಗಳು ಒಂದು ಗಂಟೆಯ ಒಳಗೇ ಪಾಸಾದವು 15 ನೇ ಮತ್ತು 16ನೇ ಲೋಕಸಭೆಯ ಅವಧಿಯಲ್ಲಿ ಈ ಸಂಖ್ಯೆ 34 ಮತ್ತು 39.(ದಿ ಹಿಂದು, ಡಿ.28)

ಈ ಚಳಿಗಾಲದ ಅಧಿವೇಶನ ಮುಗಿದ ಮೇಲೆ ಸಂಸದೀಯ ವ್ಯವಹಾರಗಳ ಮಂತ್ರಿ ಪ್ರತಿಪಕ್ಷಗಳು ಸಂಸತ್ತಿನ ಕಲಾಪಗಳಿಗೆ ಅಡ್ಡಿ ಪಡಿಸಿದರು ಎಂದು ಕಿಡಿ ಕಾರಿದ್ದಾರೆ. ಆದರೆ,ಪ್ರಸಕ್ತ ಲೋಕಸಭೆಯಲ್ಲಿ ಕಲಾಪಗಳಿಗೆ ಅಡ್ಡಿಯಾದ್ದರಿಂದ ನಷ್ಟಗೊಂಡ ಅಧಿವೇಶನದ ಸಮಯ 25.6%. ಮತ್ತೆ ಯುಪಿಎ–2 ಸರಕಾರದ ಅವಧಿಯಲ್ಲಿ ಬಿಜೆಪಿ ಪ್ರಮುಖ ಪ್ರತಿಪಕ್ಷವಾಗಿದ್ದಾಗ ನಷ್ಟಗೊಂಡ ಪ್ರಮಾಣ 50.3% .ಎಂಬುದು ಅವರಿಗೆ ತಿಳಿದಂತಿಲ್ಲ.




ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಫೇಸ್ ಬುಕ್

ಇನ್ನೂ ವಿಶೇಷವೆಂದರೆ, ಆಗ ಪ್ರತಿಪಕ್ಷ ನಾಯಕರಾಗಿದ್ದ ಅರುಣ್ ಜೈಟ್ಲಿ "ಸಂಸದೀಯ ಜವಾಬುದಾರಿಕೆಯನ್ನು ಬುಡಮೇಲು ಮಾಡಿದರೆ ಕಲಾಪಗಳಿಗೆ ಅಡ್ಡಿಪಡಿಸುವುದು ಕೂಡ ಪ್ರತಿಪಕ್ಷದ ನ್ಯಾಯಬದ್ಧ ಕಾರ್ಯತಂತ್ರವಾಗಿದೆ" ಎಂದಿದ್ದರು ಎಂದೊಬ್ಬ ವಿಶ್ಲೇಷಕರು ನೆನಪಿಸಿದ್ದಾರೆ. ಅವರಷ್ಟೇ ಅಲ್ಲ, ಅವರದ್ದೇ ಪಕ್ಷದ ಸುಷ್ಮಾ ಸ್ವರಾಜ್ ಕೂಡ " ಸಂಸತ್ತು ಕಾರ್ಯನಿರ್ವಹಿಸದಂತೆ ಮಾಡುವುದು ಕೂಡ ಪ್ರಜಾಪ್ರಭುತ್ವದ ಒಂದು ರೂಪ" ಎಂದಿದ್ದರಂತೆ.

ಸಾರಾಸಗಟು ಅಮಾನತು ಸಂಸತ್ತನ್ನು ಎಲ್ಲದ್ದಕ್ಕೂ ಸೈ ಎನ್ನುವ ಜೀಹುಜೂರ್ ಕೋಷ್ಟವನ್ನಾಗಿ ಪರಿವರ್ತಿಸುವ ದುಷ್ಟ ಉದ್ದೇಶದಿಂದ ಮಾಡಲಾಗಿದೆ ಎನ್ನುತ್ತಾರೆ ಜಾನ್ ಬ್ರಿಟ್ಟಾಸ್ (ಪೀಪಲ್ಸ್ ಡೆಮಾಕ್ರಸಿ, ಡಿ30). ಸಾರ್ವಜನಿಕರ ಗಮನವನ್ನು ಸಂಸತ್ತಿಗೆ ನುಸುಳಿದ ಯುವಕರು ಎತ್ತಿದ ಹಣದುಬ್ಬರ, ನಿರುದ್ಯೋಗ, ಪ್ರಜಾಪ್ರಭುತ್ವದಲ್ಲಿ ಹಿಂಜರಿಕೆ, ಇತ್ಯಾದಿಗಳಿಂದ ಬೇರೆಡೆಗೆ ತಿರುಗಿಸುವುದು ಕೂಡ ಉದ್ದೇಶವಾಗಿರಬಹುದು. ಆ ಯುವಕರು "ಕಿವುಡರೂ ಕೇಳುವಂತೆ" ಮಾಡುವುದಕ್ಕಾಗಿ ಬಳಸಿದ ತಂತ್ರವನ್ನು ಖಂಡಿಸುವಾಗಲೇ, ಈ ಉದ್ರೇಕಕಾರಿ ಕಥನದ ಆಚೆಗೂ ನೋಡುವುದು ಬಹಳ ಅಗತ್ಯದ್ದಾಗುತ್ತದೆ ಎನ್ನುವ ಜಾನ್ ಬ್ರಿಟ್ಟಾಸ್ "ಅವರು ಎತ್ತಿದ ಪ್ರಶ್ನೆಗಳು ಒಟ್ಟು ಸಾರ್ವಜನಿಕರ ಮನದಲ್ಲಿ, ಎದೆಯಲ್ಲಿ ರಿಂಗಣಗುಡುತ್ತಿರುವ ಭಾವನೆಗಳ, ಆತಂಕಗಳ ಒಂದು ಕಟುವಾದ ಬಿಂಬವಾಗಿಯೂ ಕಾಣುತ್ತವೆ. ಅದಕ್ಕೆ ಬದಲಾಗಿ, ಸರಕಾರ ಅತ್ಯಂತ ಹೀನರೀತಿಯಲ್ಲಿ 'ಎಲ್ಲ ಪ್ರಜಾಪ್ರಭುತ್ವಗಳ ಮಾತೆ'ಯ ಕತ್ತು ಹಿಸುಕುವಲ್ಲಿ ನಿರತವಾಗಿದೆ" ಎನ್ನುತ್ತಾರೆ.

"ನೀವು ಸೆಂಟ್ರಲ್ ವಿಸ್ತಾ ಪ್ರಾಜೆಕ್ಟಿನಲ್ಲಿ ಕೆಲಸ ಮಾಡಿದ್ದೀರಾ? ಎಲ್ಲಾದರೂ ಪ್ರಜಾಪ್ರಭುತ್ವದ ಗುಪ್ತ ಸಮಾಧಿಯ ಯೋಜನೆ ಇದೆಯೇ?"



ಅಮೃತ ಕಾಲದ ಹೆಮ್ಮೆಯ ಈ ಸೆಲ್ಫಿ ಗೀಳು

ರೈಲ್ವೆ ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ, ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ. ಕೊನೆಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಭಾರತದ ಹೆಮ್ಮೆಯ ಪ್ರದರ್ಶನವಾಗಿ ಪ್ರಧಾನಿಯೊಂದಿಗೆ ಸೆಲ್ಫಿಯ ಬೂತ್‍ಗಳನ್ನು ಸ್ಥಾಪಿಸಬೇಕು ಎಂದು ರೈಲ್ವೆ ಇಲಾಖೆ, ರಕ್ಷಣಾ ಇಲಾಖೆ ಮತ್ತು ಅವನ್ನನುಸರಿಸಿ ಯುಜಿಸಿ ಕೂಡ ನಿರ್ದೇಶನಗಳನ್ನು ಹೊರಡಿಸಿತ್ತು ಎಂದು ಈ ಹಿಂದೆ ಓದಿದ್ದೇವೆ. ಕೆಲವು ರೈಲ್ವೆ ನಿಲ್ದಾಣಗಳಲ್ಲಂತೂ ಅವು ಕಾಣುತ್ತಿರುವಾಗ ಈ ಹೆಮ್ಮೆಯ ಪ್ರದರ್ಶನಕ್ಕೆ ಆಗುತ್ತಿರುವ ಖರ್ಚು ಎಷ್ಟು ಎಂಬುದು ಸಹಜವಾಗಿ ಏಳುವ ಪ್ರಶ್ನೆ. ನಿವೃತ್ತ ರೈಲ್ವೆ ನೌಕರ ಅಜಯ್ ಬೋಸ್ ಭಾರತಿಯ ರೈಲ್ವೆಯ 18 ವಲಯಗಳಲ್ಲಿ ಒಂದಾದ ಸೆಂಟ್ರಲ್ ರೈಲ್ವೆಗೆ ಈ ಪ್ರಶ್ನೆಯನ್ನು ಆರ್‌ಟಿಐ ಮೂಲಕ ಕೇಳಿಯೇ ಬಿಟ್ಟಿದ್ದಾರೆ. ಅದರ ಪ್ರಕಾರ 5 ಡಿವಿಷನ್‍ಗಳಲ್ಲಿ 50 ಸೆಲ್ಫಿ ಬೂತ್‍ಗಳ ಮೇಲೆ 1.62 ಕೋಟಿ ರೂ. ಖರ್ಚು ಮಾಡಿದೆ ಎಂದು ಆರ್‌ಟಿಐ ಮಾಹಿತಿಯ ಲೆಕ್ಕಾಚಾರದಿಂದ ತಿಳಿದು ಬಂದಿದೆ (ದಿ ಹಿಂದು, ಡಿ.27). ಒಕ್ಕೂಟ ಸರಕಾರ ಪ್ರತಿ ಶಾಶ್ವತ ಬೂತ್‍ಗೆ 6.25ಲಕ್ಷ ರೂ. ನಂತೆ ಮತ್ತು ತಾತ್ಕಾಲಿಕ ಬೂತ್‍ಗೆ 1.1.25ಲಕ್ಷ ರೂ. ನಂತೆ ದರ ನಿಗದಿ ಮಾಡಿದೆಯಂತೆ.



ಟಿಕೆಟುಗಳ ಮೇಲೆ ರಿಯಾಯ್ತಿಗಳಿಲ್ಲ, ಆದರೆ ಸೆಲ್ಫಿ ಫ್ರೀ!

ದಕ್ಷಿಣ ರೈಲ್ವೆಯ 6 ಡಿವಿಶನ್‍ಗಳಲ್ಲಿ ಒಂದು ಮಾತ್ರ ಆರ್‌ಟಿಐ ಪ್ರಶ್ನೆಗೆ ಉತ್ತರ ನೀಡಿದೆ. ಉತ್ತರ ರೈಲ್ವೆ 100 ಸ್ಥಳಗಳಲ್ಲಿ ಈ ಬೂತ್‍ಗಳನ್ನು ಹಾಕಲಾಗುವುದು ಎಂದು ಉತ್ತರಿಸಿದೆ. ಪಶ್ಚಿಮ ರೈಲ್ವೆಯ 5 ಡಿವಿಶನ್‍ಗಳಲ್ಲಿ ಒಂದು ಮಾತ್ರ ಉತ್ತರ ನೀಡಿದೆ.

ಭಾರತೀಯ ರೈಲ್ವೆಗೆ ಸೇರಿರದ ಕೊಂಕಣ ರೈಲ್ವೆ ಬಿಟ್ಟು ಭಾರತೀಯ ರೈಲ್ವೆಯಲ್ಲಿ 18 ವಲಯಗಳು ಮತ್ತು ಸುಮಾರು 70 ಡಿವಿಶನ್‍ಗಳಿವೆ. ಮೇಲೆ ಹೇಳಿದ ದರಗಳಲ್ಲಿ ರೈಲ್ವೆ ಇಲಾಖೆ ಕೇವಲ ಈ 'ಹೆಮ್ಮೆ ಪ್ರದರ್ಶನ'ಕ್ಕೆ ಎಷ್ಟು ಖರ್ಚು ಮಾಡುತ್ತಿದೆ ಎಂದು ಅಂದಾಜು ಮಾಡಬಹುದು.

ಇದೇ ಭಾರತೀಯ ರೈಲ್ವೆ ಎರಡು ವರ್ಷಗಳ ಹಿಂದೆ ಹಿರಿಯ ನಾಗರಿಕರಿಗೆ ರೈಲು ಟಿಕೆಟಿನಲ್ಲಿ ಕೊಡುತ್ತಿದ್ದ ರಿಯಾಯ್ತಿಗಳನ್ನು ರದ್ದು ಮಾಡಿತು. ಅದರಿಂದಾಗಿ 2022–23ರಲ್ಲಿ ರೈಲ್ವೆಗೆ 2242 ಕೋಟಿ ರೂ. ಆದಾಯ ಹೆಚ್ಚಿತು ಎಂದು ಕೆಲವು ತಿಂಗಳ ಹಿಂದೆ ವರದಿಯಾಗಿತ್ತು **ಅದನ್ನು ಈ ಸಂದರ್ಭದಲ್ಲಿ ನೆನಪಿಸುತ್ತ ವ್ಯಂಗ್ಯಚಿತ್ರಕಾರ ಸತೀಶ ಆಚಾರ್ಯರವರು ಈ ವ್ಯಂಗ್ಯಚಿತ್ರವನ್ನು ತಮ್ಮ ಫೇಸ್‍ಬುಕ್ ಪೇಜಿನಲ್ಲಿ ಪ್ರಕಟಿಸಿದ್ದಾರೆ.**

"2014–2022ರಲ್ಲಿ ಸರಾಸರಿ ದಿನಕ್ಕೆ 30 ರೈತರ ಆತ್ಮಹತ್ಯೆ"

ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ(ಎನ್.ಸಿ.ಆರ್.ಬಿ.) ಅಂಕಿ–ಅಂಶಗಳ ಪ್ರಕಾರ 2014ರಿಂದ 2022 ರ ನಡುವೆ, ಅಂದರೆ ಅಚ್ಛೇದಿನ್ ಇತ್ಯಾದಿ ಅವಧಿಯಲ್ಲಿ ಕೃಷಿ ವಲಯದಲ್ಲಿ 1,00,474 ಆತ್ಮಹತ್ಯೆಗಳು ನಡೆದಿವೆ ಎಂದು ಸೆಂಟರ್ ಫಾರ್ ಫಿನಾನ್ಶಿಯಲ್ ಅಕೌಂಟೇಬಿಲಿಟಿ(ಸಿಎಫ್‍ಎ)ಯ ಇಬ್ಬರು ಸಂಶೋಧಕರಾದ ಅನಿರ್ಬಾನ್ ಭಟ್ಟಾಚಾರ್ಯ ಮತ್ತು ನ್ಯಾನ್ಸಿ ಪಾಠಕ್ ಒಂದು ವಿಶ್ಲೇಷಣೆಯಲ್ಲಿ ಹೇಳುತ್ತಾರೆ(ದಿ ವೈರ್, ಡಿ.18).

ಎನ್‍ಸಿಆರ್‌ಬಿಯ ವರದಿ ಮಾಧ್ಯಮಗಳಲ್ಲಾಗಲೀ, ಪ್ರೈಮ್‍ಟೈಮ್ ಚರ್ಚೆಗಳಲ್ಲಾಗಲೀ ಯಾವುದೇ ನೈತಿಕ ಆಕ್ರೋಶವನ್ನು ಉಂಟು ಮಾಡಿಲ್ಲ ಎಂದು ಈ ವಿಶ್ಲೇಷಕರು ಖೇದ ವ್ಯಕ್ತ ಪಡಿಸುತ್ತಾರೆ.

ಆಳುವ ಪಕ್ಷದ, ಬಹಳ ಸುದ್ದಿಯಲ್ಲಿರುವ ಸಂಸತ್ ಸದಸ್ಯ ನಿಶಿಕಾಂತ್ ದುಬೆಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೋದಿ ಅಧಿಕಾರಾವಧಿಯಲ್ಲಿ ಒಬ್ಬ ರೈತನೂ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದಿದ್ದಾರಂತೆ. "ಕಳೆದ ಎಂಟು ವರ್ಷಗಳಲ್ಲಿ ಪ್ರತಿಪಕ್ಷಗಳು ಒಮ್ಮೆಯಾದರೂ ಈ ಬಗ್ಗೆ ಚರ್ಚೆ ನಡೆಸಿದ್ದಾರಾ? ನಡೆಸಿಲ್ಲವಾದರೆ, ರೈತರು ಆತ್ಮಹತ್ಯೆಯಿಂದ ಸಾಯುತ್ತಿಲ್ಲ ಎಂದರ್ಥ". ಇದು ಆತನ ತರ್ಕ.

ಕುಸಿಯುತ್ತಿರುವ ಸಾರ್ವಜನಿಕ ಹೂಡಿಕೆಗಳು, ಪ್ರಮುಖ ಕೈಗಾರಿಕೆಗಳ ಖಾಸಗೀಕರಣ, ವಿದೇಶ ವ್ಯಾಪಾರಕ್ಕೆ ತೆರೆದುಕೊಳ್ಳುವುದು, ಸಬ್ಸಿಡಿಗಳ ಕುಸಿತ ಮತ್ತು ಔಪಚಾರಿಕ ಕೃಷಿ ಸಾಲದ ಕುಗ್ಗುವಿಕೆ ಇವೆಲ್ಲವೂ ಭಾರತದ ರೈತರಿಗೆ ಮಾರಕವಾಗುತ್ತಿವೆ. ಜತೆಗೆ ಮೊನ್ಸಾಂಟೊದಂತಹ ಕೃಷಿ–ವ್ಯಾಪಾರ ದೈತ್ಯರ ಗುತ್ತೇದಾರಿ ಕ್ರಮಗಳಿಂದಾಗಿ ಏರುತ್ತಿರುವ ಕೃಷಿ ಲಾಗುವಾಡುಗಳ ವೆಚ್ಚ, ಇವೆಲ್ಲವೂ ಸೇರಿ ರೈತರನ್ನು ಮಳೆಯ ಮತ್ತು ಮಾರುಕಟ್ಟೆಯ ಏರುಪೇರುಗಳಿಗೆ ಒಡ್ಡಿದೆ ಎನ್ನುತ್ತಾರೆ ಈ ವಿಶ್ಲೇಷಕರು.

"ನಮ್ಮಲ್ಲಿ ಹಣವಿಲ್ಲ, ಲೇವಾದೇವಿಗಾರರು ಕಾಯಲು ಸಿದ್ಧರಿಲ್ಲ. ನಾವು ಏನು ಮಾಡಬೇಕು? ಈರುಳ್ಳಿಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ನಮಗೆ ಸಾಧ್ಯವಾಗುತ್ತಿಲ್ಲ. ಮೋದಿ ಸಾಹೇಬ್ರೇ, ನೀವು ನಿಮ್ಮ ಬಗ್ಗೆ ಮಾತ್ರ ಯೋಚಿಸುತ್ತಿದ್ದೀರಿ. ನೀವು ಉತ್ಪನ್ನಗಳಿಗೆ ಖಾತರಿಯ ಬೆಲೆಯನ್ನು ಒದಗಿಸಬೇಕು... ಲೇವಾದೇವಿ ಮಂದಿ ಬೆದರಿಕೆ ಹಾಕುತ್ತಾರೆ ಮತ್ತು ಸಹಕಾರಿ ಸಂಘದ ಅಧಿಕಾರಿಗಳು ನಿಂದಿಸುತ್ತಾರೆ. ನ್ಯಾಯಕ್ಕಾಗಿ ನಾವು ಯಾರ ಮೊರೆ ಹೋಗಬೇಕು?... ನಿಮ್ಮ ನಿಷ್ಕ್ರಿಯತೆಯಿಂದ ಇಂದು ನಾನು ಆತ್ಮಹತ್ಯೆ ಮಾಡಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದೇನೆ"–ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮಹಾರಾಷ್ಟ್ರದ ಪುಣೆ ಜಿಲ್ಲೆಯ ದಶರಥ ಲಕ್ಷ್ಮಣ್ ಕೇದಾರಿ ಎಂಬವರ ಈ ಮಾತುಗಳು ರೈತರ ದುಸ್ಥಿತಿಯ ಒಂದು ಚಿತ್ರ ನೀಡುತ್ತದೆ ಎನ್ನುತ್ತಾರೆ ಇವರು.

"ಯಾವ ವಸ್ತುಗಳ ಉತ್ಪಾದನೆಯಲ್ಲಿ ದೇಶಗಳು "ತೌಲನಿಕ ಅನುಕೂಲ" ಹೊಂದಿವೆಯೋ ಅವುಗಳಲ್ಲೇ ಪರಿಣತರಾಗಬೇಕು, ಪ್ರತಿಯೊಂದು ದೇಶವೂ ಅದು ನೈಪುಣ್ಯತೆ ಹೊಂದಿರುವ ವಸ್ತುಗಳ ತಯಾರಿಕೆಯಲ್ಲೇ ಪರಿಣತಿ ಹೊಂದಿದರೆ, ಇಡೀ ಪ್ರಪಂಚದ ಒಟ್ಟು ಉತ್ಪಾದನೆ ಬಹಳ ದೊಡ್ಡದಾಗಿರುತ್ತದೆ. ಹಾಗಾಗಿ, ಎಲ್ಲ ದೇಶಗಳೂ ಮೊದಲಿಗಿಂತ ಉತ್ತಮವಾದ ಸ್ಥಿತಿಯಲ್ಲಿರಬಹುದು" ಎಂಬ ಒಂದು ಹುಸಿ ವಾದವನ್ನು, ಮುಕ್ತ ವ್ಯಾಪಾರವು ಒಳ್ಳೆಯದು ಎಂಬ ಅನಿಸಿಕೆಯನ್ನು ಉಂಟುಮಾಡಲು, ಮಂಡಿಸಲಾಗಿದೆ. ಇದು ಸಂಪೂರ್ಣವಾಗಿ ಮೋಸ. ಮುಕ್ತ ವ್ಯಾಪಾರ ಆಳ್ವಿಕೆಯಲ್ಲಿ ಒಂದು ದೇಶದ ಸರ್ಕಾರವು ಒಟ್ಟು ಬೇಡಿಕೆಯನ್ನು ಹೆಚ್ಚಿಸುವುದಕ್ಕಾಗಿ ಮಧ್ಯಪ್ರವೇಶ ಮಾಡುವುದು, ಆ ಮೂಲಕ ಉದ್ಯೋಗವನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಅಂದರೆ ಒಂದು ನಿರ್ದಿಷ್ಟ ದೇಶದಲ್ಲಿ ಅಥವಾ ವಿಶ್ವ ಮಟ್ಟದಲ್ಲಿ, ಉದ್ಯೋಗ ಪರಿಸ್ಥಿತಿ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಂಡ ಸನ್ನಿವೇಶದಲ್ಲಿ ಯಾವ ಮಟ್ಟದಲ್ಲಿ ಇರುತ್ತದೆಯೋ, ಮುಕ್ತ ವ್ಯಾಪಾರಗಳಿಗೆ ತೆರೆದುಕೊಂಡ ಸನ್ನಿವೇಶದಲ್ಲಿ ಅದಕ್ಕಿಂತಲೂ ಕೆಳ ಮಟ್ಟದಲ್ಲಿ ಇರಬಹುದು ಎಂದಾಗುತ್ತದೆ. ಈ ವಿದ್ಯಮಾನವು 'ಮುಕ್ತ ವ್ಯಾಪಾರ'ದ ಮೂಲ ತರ್ಕವನ್ನೇ ಪೂರ್ಣವಾಗಿ ನಿರಾಕರಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**



ನಿರುದ್ಯೋಗ ಸೃಷ್ಟಿಸುವ 'ಮುಕ್ತ ವ್ಯಾಪಾರ' ಎಂಬ ಟೊಳ್ಳು ತರ್ಕ

ಹೆಚ್ಚು ನಿರ್ಬಂಧಗಳಿಲ್ಲದ ವ್ಯಾಪಾರ ನೀತಿಯನ್ನು ಹೊಂದಿದ ಒಂದು ದೇಶವು ತೊಡಗುವ ವಿದೇಶ ವ್ಯಾಪಾರಗಳ ಪರಿಸ್ಥಿತಿಯನ್ನು ಕಲ್ಪಿಸಿಕೊಳ್ಳೋಣ. ಇಂಥಹ ವ್ಯಾಪಾರ ನೀತಿಯ ಕಾರಣದಿಂದಾಗಿ ಎರಡು ಸಮಸ್ಯೆಗಳು ಆ ದೇಶಕ್ಕೆ ಎದುರಾಗಬಹುದು: ಮೊದಲನೆಯದು, ಆಮದು ಬಾಕಿ ತೀರಿಸುವ ಸಮಸ್ಯೆ ಅಥವಾ ಪಾವತಿ ಶೇಷವನ್ನು ಚುಕ್ತಾ ಮಾಡುವ ಸಮಸ್ಯೆ. ಇದು ಸಮಸ್ಯೆಯಾಗುತ್ತದೆ ಏಕೆಂದರೆ, ಆ ದೇಶದ ರಫ್ತುಗಳು ಅದರ ಆಮದುಗಳಿಗಿಂತ ಕಡಿಮೆ ಇರುತ್ತವೆ. ಎರಡನೆಯ ಸಮಸ್ಯೆ ಎಂದರೆ, ನಿರುದ್ಯೋಗದ ಸೃಷ್ಟಿ ಮತ್ತು ಆಮದುಗಳೊಂದಿಗೆ ಸ್ಪರ್ಧಿಸಲಾಗದ ಕಾರಣದಿಂದ ಬಳಕೆಯಾಗದೆ ಉಳಿಯುವ ದೇಶೀಯ ಸಂಪನ್ಮೂಲಗಳು. ಇವೆರಡೂ ಒಂದೇ ರೀತಿಯ ಸಮಸ್ಯೆಗಳಲ್ಲ. ಹೆಚ್ಚಿನ ಮಟ್ಟದ ಆಮದುಗಳು ಇಲ್ಲದಿದ್ದರೂ ನಿರುದ್ಯೋಗ ಉಂಟಾಗಬಹುದು. ಈ ಪರಿಸ್ಥಿತಿ ಭಾರತದಲ್ಲಿ ಸಂಭವಿಸಿತ್ತು ಕೂಡ. ವಸಾಹತುಶಾಹಿ ಅವಧಿಯಲ್ಲಿ ಹೆಚ್ಚು ಆಮದುಗಳಿಲ್ಲದಿದ್ದರೂ ಸಹ (ವಾಸ್ತವವಾಗಿ ರಫ್ತುಗಳೇ ಜಾಸ್ತಿ ಇದ್ದವು ಮತ್ತು ಅವುಗಳ ಮೌಲ್ಯವನ್ನು ಕೊಡದೇ ಬ್ರಿಟಿಷ್ ವಸಾಹತುಶಾಹಿಗಳು ಸೂರೆ ಮಾಡಿದರು), ದೇಶದ ಕೈಗಾರಿಕೆಗಳನ್ನು ಹಾಳುಗೆಡವಿದ(ಅಪ–ಕೈಗಾರಿಕೀಕರಣ–de-industrialisation) ಪರಿಣಾಮವಾಗಿ ಭಾರತದ ಕುಶಲಕರ್ಮಿಗಳು ಮತ್ತು ಸೃಜನಶೀಲ ಕೈಕಸಬುದಾರರು ನಿರುದ್ಯೋಗಿಗಳಾದರು. ಇಲ್ಲಿ ಪ್ರಸ್ತಾಪಿಸುವ ವಿಷಯಗಳಲ್ಲಿ, ನಿರ್ಬಂಧಗಳಿಲ್ಲದ ವಿದೇಶ ವ್ಯಾಪಾರಗಳಿಂದಾಗಿ ಮೂರನೇ ಜಗತ್ತಿನ ದೇಶಗಳಲ್ಲಿ ಉಂಟಾದ ಪಾವತಿ ಶೇಷ ಇತ್ಯರ್ಥದ ಸಮಸ್ಯೆಯ ಗೊಡವೆಗೆ ನಾನು ಹೋಗುವುದಿಲ್ಲ. ಉದ್ಯೋಗ ಸಮಸ್ಯೆಯ ಬಗ್ಗೆ ಮಾತ್ರ ನಾವು ಸೀಮಿತಗೊಳ್ಳೋಣ.

ವಿದೇಶಗಳೊಂದಿಗಿನ ವ್ಯಾಪಾರಗಳಲ್ಲಿ ಕೆಲವು ನಿರ್ಬಂಧಗಳನ್ನು ಹೇರದಿದ್ದರೆ ದೇಶದಲ್ಲಿ ನಿರುದ್ಯೋಗ ಸೃಷ್ಟಿಯಾಗುತ್ತದೆ ಎಂಬುದು ವಸಾಹತುಶಾಹಿ ಆಳ್ವಿಕೆಯ ಅವಧಿಯಲ್ಲಿ ಅಪ–ಕೈಗಾರಿಕೀಕರಣದ ಪರಿಣಾಮವನ್ನು ಅನುಭವಿಸಿದ ಮೂರನೇ ಜಗತ್ತಿನ ದೇಶಗಳ ಜನರಿಗೆ ತಿಳಿದಿದೆ. ಆದಾಗ್ಯೂ, ಮುಕ್ತ ವ್ಯಾಪಾರವು ಒಳ್ಳೆಯದು ಎಂಬ ಸಾಮಾನ್ಯ ಅನಿಸಿಕೆಯೂ ಅವರಲ್ಲಿದೆ. ಇಂಥಹ ಒಂದು ಅನಿಸಿಕೆಯನ್ನು ಉಂಟುಮಾಡಲು ಒಂದು ಹುಸಿ ವಾದವನ್ನು ಮಂಡಿಸಲಾಗಿದೆ. ಹಾಗೆ ನೋಡಿದರೆ, ವಿಶ್ವ ವ್ಯಾಪಾರ ಸಂಘಟನೆಯ ಅಡಿಯಲ್ಲಿ ರೂಪಿಸಿದ ಜಾಗತಿಕ ವ್ಯಾಪಾರ ನಿಯಮಗಳು ಈ ಹುಸಿ ವಾದವನ್ನೇ ಆಧರಿಸಿವೆ. ಈ ವಾದವು ಹೇಳುವುದೇನೆಂದರೆ, ಯಾವ ವಸ್ತುಗಳ ಉತ್ಪಾದನೆಯಲ್ಲಿ ದೇಶಗಳು "ತೌಲನಿಕ ಅನುಕೂಲ" ಹೊಂದಿವೆಯೋ ಅವುಗಳಲ್ಲೇ ಪರಿಣತರಾಗಬೇಕು ಎಂಬುದು. ಪ್ರತಿಯೊಂದು ದೇಶವೂ ಅದು ನೈಪುಣ್ಯತೆ ಹೊಂದಿರುವ ವಸ್ತುಗಳ ತಯಾರಿಕೆಯಲ್ಲೇ ಪರಿಣತಿ ಹೊಂದಿದರೆ, ಇಡೀ ಪ್ರಪಂಚದ ಒಟ್ಟು ಉತ್ಪಾದನೆ ಬಹಳ ದೊಡ್ಡದಾಗಿರುತ್ತದೆ. ಹಾಗಾಗಿ, ಎಲ್ಲ ದೇಶಗಳೂ ಮೊದಲಿಗಿಂತ ಉತ್ತಮವಾದ ಸ್ಥಿತಿಯಲ್ಲಿರಬಹುದು.

"ತೌಲನಿಕ ಅನುಕೂಲ"ವನ್ನು (ಇದು ಮುಕ್ತ ವ್ಯಾಪಾರವನ್ನು ಸಮರ್ಥಿಸುವ ಏಕೈಕ ವಾದವೂ ಹೌದು) ಆಧರಿಸಿರುವ ಈ ಮುಕ್ತ ವ್ಯಾಪಾರವಾದದ ಪರಿಕಲ್ಪನೆಯು ಸಂಪೂರ್ಣವಾಗಿ ಮೋಸದ್ದು. ಪ್ರತಿಯೊಂದು ದೇಶದಲ್ಲೂ ಮತ್ತು ಅದರಿಂದಾಗಿ ಇಡೀ ವಿಶ್ವದಲ್ಲಿ, ಇಡೀ ಶ್ರಮಿಕ–ಪಡೆಯೂ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನೂ ಪೂರ್ಣವಾಗಿ ಬಳಕೆ ಮಾಡಿಕೊಳ್ಳಲಾಗಿರುತ್ತದೆ ಎಂದು ಈ ಪರಿಕಲ್ಪನೆ ಊಹಿಸಿಕೊಳ್ಳುತ್ತದೆ. ಅದು ವ್ಯಾಪಾರದಲ್ಲಿ ತೊಡಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಲೆಕ್ಕಿಸದೆ ಮಾಡುವ ಕೇವಲ ಊಹೆ ಇದು. ಇದು ನಿಜ ಎಂದಿಟ್ಟುಕೊಂಡರೆ, ಒಂದು ದೇಶವು ಅದರ ಶ್ರಮಿಕ–ಪಡೆಯೂ ಸೇರಿದಂತೆ ಎಲ್ಲ ಸಂಪನ್ಮೂಲಗಳನ್ನು ಒಂದು ವೇಳೆ ವ್ಯಾಪಾರದ ಮೊದಲು ಮತ್ತು ವ್ಯಾಪಾರದ ನಂತರ ಪೂರ್ಣವಾಗಿ ಬಳಸಿಕೊಂಡಿದ್ದರೆ, ಆಗ ವ್ಯಾಪಾರವೆಂದರೆ, ಸಂಪನ್ಮೂಲಗಳ ಬಳಕೆಯನ್ನು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ತಿರುಗಿಸುವುದು, ಅಷ್ಟೇ. ಅಂದರೆ, ದೇಶದ ಶ್ರಮಿಕ–ಪಡೆಯೂ ಸೇರಿದಂತೆ ಯಾವ ಸಂಪನ್ಮೂಲವೂ ಬಳಕೆಯಾಗದೆ ಉಳಿಯದು ಎಂದು ಊಹಿಸಿಕೊಳ್ಳಲಾಗುತ್ತದೆ.

ಈ ಊಹೆಯನ್ನು ನಾವು ತಿರಸ್ಕರಿಸಲೇ ಬೇಕಾಗುತ್ತದೆ, ಏಕೆಂದರೆ, ವಾಸ್ತವಾಂಶಗಳಲ್ಲಾಗಲಿ ಅಥವಾ ಸಿದ್ಧಾಂತದಲ್ಲಾಗಲಿ, ಈ ಊಹೆಗೆ ಯಾವ ಆಧಾರವೂ ಇಲ್ಲ (ಅದರ ಸೈದ್ಧಾಂತಿಕ ವಿಚಾರ–ಶೂನ್ಯತೆಯನ್ನು 1930ರ ದಶಕದಲ್ಲಿ ಮೈಕಲ್ ಕಲೆಕಿ ಮತ್ತು ಜಾನ್ ಮೇನಾರ್ಡ್ ಕೀನ್ಸ್ ವಿವರಿಸಿದ್ದರು ಮತ್ತು ಅವರ ಈ ಸೈದ್ಧಾಂತಿಕ ನಾವೀನ್ಯತೆಯನ್ನು ಅದಕ್ಕೂ ಮೊದಲೇ, ಮುಕ್ಕಾಲು ಶತಮಾನದ ಹಿಂದೆಯೇ ಮಾರ್ಕ್ಸ್ ಮುಂಗಂಡಿದ್ದರು); ಹಾಗೆ ತಿರಸ್ಕರಿಸಿದೆವೆಂದರೆ, ಒಂದು ದೇಶಕ್ಕೆ ಎದುರಾಗುವ ಮುಕ್ತ ವ್ಯಾಪಾರದ ಸಂಭಾವ್ಯ ಹಾನಿಕಾರಕ ಪರಿಣಾಮಗಳು ಸ್ಪಷ್ಟವಾಗುತ್ತವೆ.

ಕೈಕಟ್ಟಿ ಹಾಕಿರುವ ಅವಾಸ್ತವಿಕ ತರ್ಕ

ಈ ಊಹೆಯು ಅದೆಷ್ಟು ಅವಾಸ್ತವಿಕ ಎಂಬುದನ್ನು ಅರ್ಥಮಾಡಿಕೊಳ್ಳಲು ಒಂದು ತುಂಬಾ ಸರಳವಾದ ಮಾರ್ಗವಿದೆ. ವಿಶ್ವ ಅರ್ಥವ್ಯವಸ್ಥೆಯ ಒಟ್ಟು ಉತ್ಪಾದನಾ ಸಾಮರ್ಥ್ಯವು 100 ಯೂನಿಟ್‌ಗಳು ಎಂದು ಭಾವಿಸೋಣ. ವಿಶ್ವ ಅರ್ಥವ್ಯವಸ್ಥೆಯ ಒಟ್ಟು ಬೇಡಿಕೆಯು 80 ಯೂನಿಟ್‌ಗಳಾಗಿದ್ದರೆ, ಆಗ, ವಿಶ್ವ ಉತ್ಪಾದನಾ ಸಾಮರ್ಥ್ಯದ 20 ಯುನಿಟ್‌ಗಳು ಬಳಕೆಯಾಗದೆ ಉಳಿಯುತ್ತವೆ. ಹಾಗೆಯೇ, ಬಂಡವಾಳಶಾಹಿ ಪರಿಸ್ಥಿತಿಗಳಲ್ಲೂ 20 ಯೂನಿಟ್‌ಗಳು ಬಳಕೆಯಾಗದೆ ಉಳಿಯುತ್ತವೆ. ಪರಿಣಾಮವಾಗಿ, ಬಳಕೆಯಾಗದೆ ಉಳಿದ ಸಂಪನ್ಮೂಲಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ದೇಶಗಳ ನಡುವೆ ಹಂಚಲಾಗುತ್ತದೆ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಎತ್ತಬಹುದು. ಬಂಡವಾಳಶಾಹಿಯು ಸೃಷ್ಟಿಸುವ ನಿರುದ್ಯೋಗದಿಂದ ಭ್ರಮನಿರಸನಗೊಂಡ ಕಾರ್ಮಿಕರು ಸಮಾಜವಾದದ ಕಡೆಗೆ ಚಲಿಸುತ್ತಾರೆ ಎಂದು ಹೆದರಿದ ಕೀನ್ಸ್, ಒಟ್ಟಾರೆ ಬೇಡಿಕೆಯ ಮಟ್ಟವನ್ನು ಹೆಚ್ಚಿಸಲು ಮತ್ತು ಆ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರಭುತ್ವ ಮಧ್ಯಪ್ರವೇಶಿಸಬೇಕು ಎಂದು ಸೂಚಿಸಿದ್ದರು. ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸುವ ಸಂದರ್ಭದಲ್ಲಿ, ಯಾವುದೇ ದೇಶದ ಸಂಪನ್ಮೂಲಗಳು ಬಳಕೆಯಾಗದೆ ಉಳಿಯದಂತಾಗಲು ಕೀನ್ಸ್ ಅವರ ಈ ಸೂಚನೆಯನ್ನು ವಿಶ್ವ ಮಟ್ಟದಲ್ಲಿ ಅನುಸರಿಸಲು ಏಕೆ ಪ್ರಯತ್ನಿಸಬಾರದು?

ಈ ಪ್ರಶ್ನೆಯಲ್ಲಿ ಅಂತರ್ಗತವಾಗಿರುವ ಜಟಿಲ ವಿವರಗಳಿಗೆ ಹೋಗದೆ, ಹೇಳಬಹುದಾದ ಅತಿ ಸರಳವಾದ ಮತ್ತು ಸ್ಪಷ್ಟವಾದ ಉತ್ತರವೆಂದರೆ, ವಿಶ್ವ ಮಟ್ಟದಲ್ಲಿ ಪ್ರಭುತ್ವದ ಮಧ್ಯಪ್ರವೇಶ ಇರಬೇಕು ಎಂದಾದರೆ, ವಿಶ್ವ ಸರ್ಕಾರವನ್ನು ಹೊಂದಿದ ಒಂದು ವಿಶ್ವ ಪ್ರಭುತ್ವವೂ ಇರಬೇಕಾಗುತ್ತದೆ. ಇದು ಬಂಡವಾಳಶಾಹಿಯ ಅಡಿಯಲ್ಲಿ ಸಾಧ್ಯವಿಲ್ಲದ ಮಾತು. ಮತ್ತು, ವಿಶ್ವದ ಒಟ್ಟು ಬೇಡಿಕೆಯು ಸಾಕಷ್ಟು ಇಲ್ಲದೆ ಇರುವುದರಿಂದ, ಸಂಪನ್ಮೂಲಗಳು ಬಳಕೆಯಾಗದೆ ಉಳಿದ ದೇಶಗಳಲ್ಲಿ, ಆ ದೇಶದ ನಿರ್ದಿಷ್ಟ ರಾಜ್ಯಗಳು ದೊಡ್ಡ ಪ್ರಮಾಣದ ನಿರುದ್ಯೋಗವನ್ನು ಸೃಷ್ಟಿಸಲು ಆ ಅರ್ಥವ್ಯವಸ್ಥೆಗಳಲ್ಲಿ ಬೇಡಿಕೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ, ನಂತರ ಮುಕ್ತ ವ್ಯಾಪಾರ ಪರಿಸ್ಥಿತಿಗಳಲ್ಲಿ ಈ ಅಧಿಕ ಬೇಡಿಕೆಯು ಸೋರಿಕೆಯಾಗಿ ಅಧಿಕ ಆಮದುಗಳಿಗೆ ಕಾರಣವಾಗಬಹುದು ಮತ್ತು ಆ ಮೂಲಕ ತಾಳಿಕೊಳ್ಳಲಾರದ ಒಂದು ವ್ಯಾಪಾರ ಕೊರತೆಗೆ ಕಾರಣವಾಗಬಹುದು. ಈ ದೇಶಗಳು ಮುಕ್ತ ವ್ಯಾಪಾರ ಪದ್ಧತಿಗೆ ತೆರೆದುಕೊಳ್ಳದಿದ್ದರೆ ಮತ್ತು ತಮ್ಮ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಸಾಧ್ಯವಾದರೆ, ಅವರ ಸರ್ಕಾರಗಳು ದೇಶೀಯ ಒಟ್ಟು ಬೇಡಿಕೆಯನ್ನು ಹಿಗ್ಗಿಸಬಹುದು ಮತ್ತು ಆ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಮುಕ್ತ ವ್ಯಾಪಾರ ಪದ್ಧತಿ ಅವರ ಕೈಗಳನ್ನು ಕಟ್ಟಿಹಾಕಿದೆ.



ಮುಕ್ತ ವ್ಯಾಪಾರ ಆಳ್ವಿಕೆಯಲ್ಲಿ ಒಂದು ದೇಶದ ಸರ್ಕಾರವು ಒಟ್ಟು ಬೇಡಿಕೆಯನ್ನು ಹೆಚ್ಚಿಸುವುದಕ್ಕಾಗಿ ಮಧ್ಯಪ್ರವೇಶ ಮಾಡುವುದು ಸಾಧ್ಯವಿಲ್ಲ ಮತ್ತು ಆ ಮೂಲಕ ಉದ್ಯೋಗವನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಆದರೆ, ವಿಶ್ವದ ಬೇಡಿಕೆಯ ಮಟ್ಟವು ಏನೇ ಇರಲಿ, ಅದರಿಂದ ಹೊರಬೀಳುವ ಪರಿಣಾಮಗಳನ್ನು ಭಕ್ತಿಗೌರವಗಳಿಂದ ಒಪ್ಪಿಕೊಳ್ಳಬೇಕು ಎಂದರೆ ಅದರ ಅರ್ಥ, ಒಂದು ನಿರ್ದಿಷ್ಟ ದೇಶದಲ್ಲಿ ಅಥವಾ ವಿಶ್ವ ಮಟ್ಟದಲ್ಲಿ, ಉದ್ಯೋಗ ಪರಿಸ್ಥಿತಿ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಂಡ ಸನ್ನಿವೇಶದಲ್ಲಿ ಯಾವ ಮಟ್ಟದಲ್ಲಿ ಇರುತ್ತದೆಯೋ, ಮುಕ್ತ ವ್ಯಾಪಾರಗಳಿಗೆ ತೆರದುಕೊಂಡ ಸನ್ನಿವೇಶದಲ್ಲಿ ಅದಕ್ಕಿಂತಲೂ ಕೆಳ ಮಟ್ಟದಲ್ಲಿ ಇರಬಹುದು ಎಂದಾಗುತ್ತದೆ. ಈ ವಿದ್ಯಮಾನವು ಮುಕ್ತ ವ್ಯಾಪಾರದ ಮೂಲ ವಾದವನ್ನು ಪೂರ್ಣವಾಗಿ ನಿರಾಕರಿಸುತ್ತದೆ. ಮುಕ್ತ ವ್ಯಾಪಾರ ವಾದವು ಏನನ್ನು ಹೇಳುತ್ತದೆ ಎಂಬುದನ್ನು ನೆನಪಿಸಿಕೊಳ್ಳಬಹುದು: ಪ್ರತಿಯೊಂದು ದೇಶವೂ ಯಾವ ವಸ್ತುಗಳ ಉತ್ಪಾದನೆಯಲ್ಲಿ "ತೌಲನಿಕ ಅನುಕೂಲ" ಹೊಂದಿದೆಯೋ ಅವುಗಳಲ್ಲೇ ಪರಿಣತಿ ಹೊಂದಬೇಕು ಮತ್ತು ನೈಪುಣ್ಯತೆ ಹೊಂದಿರುವ ವಸ್ತುಗಳ ತಯಾರಿಕೆಯಲ್ಲೇ ಪರಿಣತಿ ಹೊಂದಿದರೆ, ಇಡೀ ಪ್ರಪಂಚದ ಒಟ್ಟು ಉತ್ಪಾದನೆ ಹೆಚ್ಚುತ್ತದೆ ಮತ್ತು ಅದು ಎಲ್ಲ ದೇಶಗಳಿಗೂ ಅನುಕೂಲಕರವಾಗುವ ಸಾಧ್ಯತೆ ಇರುತ್ತದೆ. ಆದರೆ, ಮುಕ್ತ ವ್ಯಾಪಾರಗಳಿಗೆ ತೆರೆದುಕೊಂಡ ನಂತರ, ಒಂದು ವೇಳೆ ವಿಶ್ವದ ಬೇಡಿಕೆ ಕುಸಿದರೆ, ಮುಕ್ತ ವ್ಯಾಪಾರಗಳಿಗೆ ತೆರೆದುಕೊಳ್ಳುವ ಮೊದಲು ವಿಶ್ವದ ಬೇಡಿಕೆ ಒಟ್ಟು ಎಷ್ಟಿತ್ತೋ ಅದಕ್ಕಿಂತಲೂ ಕಡಿಮೆ ಇರಬಹುದು ಎಂಬುದನ್ನು ಗುರುತಿಸಿದ ಕೂಡಲೇ ಈ ವಾದವು ಕುಸಿದು ಬೀಳುತ್ತದೆ.

ರಾಷ್ಟ್ರಪ್ರಭುತ್ವ vs ಬದಲಿ ವಿಶ್ವಪ್ರಭುತ್ವ

ಮುಕ್ತ–ವ್ಯಾಪಾರ–ನಂತರದ ವಿಶ್ವದ ಒಟ್ಟು ಬೇಡಿಕೆಯು ಏನನ್ನು ಅವಲಂಬಿಸಿದೆ ಎಂದು ಕೇಳಬಹುದು? ವಿಶ್ವದ ಒಟ್ಟು ಬೇಡಿಕೆಯ ಪ್ರಾಥಮಿಕ ನಿರ್ಧಾರಕ ಅಂಶ ಯಾವುದು ಎಂದರೆ, ಪ್ರಮುಖ ಬಂಡವಾಳಶಾಹಿ ದೇಶದೊಳಗೆ – ಪ್ರಸ್ತುತ ಸಂದರ್ಭದಲ್ಲಿ ಅದು ಅಮೇರಿಕಾದೊಳಗೆ – ಸೃಷ್ಟಿಯಾಗುವ ಬೇಡಿಕೆಯೇ; ಈ ಬೇಡಿಕೆಯು ಇತರ ದೇಶಗಳಿಗೆ "ಸೋರಿಕೆ"ಯಾದಾಗಲೂ ಬೇಡಿಕೆಯನ್ನು ಸೃಷ್ಟಿಸುವಲ್ಲಿ ಅಮೇರಿಕಾ ಒಂದು ರೀತಿಯ ಸ್ವಾತಂತ್ರ್ಯವನ್ನು ಹೊಂದಿದೆ. ಪರಿಸ್ಥಿತಿ ಹೀಗಾಗಿದೆ ಏಕೆಂದರೆ, ವ್ಯಾಪಾರ ಕೊರತೆಯ ಬಗ್ಗೆ ಅಮೇರಿಕಾ ಚಿಂತಿಸಬೇಕಾಗಿಲ್ಲ. ಏಕೆಂದರೆ, ಅದರ ಡಾಲರ್ ಕರೆನ್ಸಿಯನ್ನು "ಚಿನ್ನಕ್ಕೆ ಸಮ" ಎಂದೇ ಪರಿಗಣಿಸಲಾಗಿದೆ. ಆದ್ದರಿಂದ, ಅಮೇರಿಕಾ ತನ್ನ ಬಾಹ್ಯ ವ್ಯಾಪಾರ ಕೊರತೆಗಳಿಗೆ ಬೇಕಾಗುವಷ್ಟು ಡಾಲರ್‌ಗಳನ್ನು ಸುಮ್ಮನೇ ಪ್ರಿಂಟ್ ಮಾಡಬಹುದು ಮತ್ತು ಈ ಡಾಲರ್‌ಗಳನ್ನು ಹಿಡಿಟ್ಟುಕೊಳ್ಳಲು ವಿಶ್ವದ ಉಳಿದ ದೇಶಗಳು ತುದಿಗಾಲಲ್ಲಿ ನಿಂತಿವೆ.

ಈ ಕಾರಣದಿಂದಾಗಿಯೇ ಅಮೆರಿಕಾದಲ್ಲಿ ಬಳಕೆ+ಹೂಡಿಕೆ+ಸರ್ಕಾರದ ವೆಚ್ಚಗಳು ವಿಶ್ವದ ಒಟ್ಟು ಬೇಡಿಕೆಯ ಪ್ರಾಥಮಿಕ ನಿರ್ಣಾಯಕ ಅಂಶಗಳಾಗಿವೆ. ನಿರ್ದಿಷ್ಟವಾಗಿ ಅಮೆರಿಕಾ ಸರ್ಕಾರದ ವೆಚ್ಚಗಳು ಇಲ್ಲಿ ಮುಖ್ಯವಾಗುತ್ತವೆ. ಏಕೆಂದರೆ, ಅಮೆರಿಕಾ ಒಂದು ನಿರ್ದಿಷ್ಟ ಸ್ವಾತಂತ್ರ್ಯವನ್ನು ಹೊಂದಿದೆ: ನಲ್ಲಿಯನ್ನು ತಿರುಗಿಸಿ ಬೇಕಾದಾಗ ನೀರು ಹಿಡಿಯುವಂತೆ **ಪುಟ 14 ಕ್ಕೆ**

ಕಟ್ಟಡ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸುವ ಹರಿಯಾಣ ಸರ್ಕಾರದ ನಡೆ ಆಘಾತಕಾರಿ: ಸಿಡಬ್ಲ್ಯುಎಫ್‌ಐ ಖಂಡನೆ “ನಮ್ಮ ಕಾರ್ಮಿಕರ ಜೀವವನ್ನು ಅಪಾಯಕ್ಕೆ ಸಿಲುಕಿಸಿ ಇಸ್ರೇಲಿ ನರಮೇಧದಲ್ಲಿ ಪಾಲುಗೊಳ್ಳುವ ಆಘಾತಕಾರಿ ಕ್ರಮ”

ಹರ್ಯಾಣ ರಾಜ್ಯ ಸರಕಾರ 10 ಸಾವಿರ ನುರಿತ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸುವ ಬಗ್ಗೆ ಮಾತಾಡುತ್ತಿರುವುದನ್ನು ಭಾರತದ ಕಟ್ಟಡ ಕಾರ್ಮಿಕರ ಒಕ್ಕೂಟ (ಸಿಡಬ್ಲ್ಯುಎಫ್‌ಐ)ಬಲವಾಗಿ ಖಂಡಿಸಿದೆ. ಬಿಜೆಪಿ ನೇತೃತ್ವದ ಹರಿಯಾಣ ಸರ್ಕಾರದ 'ಹರಿಯಾಣ ಕೌಶಲ್ ರೋಜ್ಗರ್ ನಿಗಮ್' (ಹೆಚ್‌ಕೆಆರ್‌ಎನ್) 15 ಡಿಸೆಂಬರ್, 2023 ರಂದು ಪ್ಯಾಲೆಸ್ಟೈನ್ ಮೇಲೆ ಇಸ್ರೇಲ್ ನರಹಂತಕ ಯುದ್ಧ ಪ್ರಾರಂಭವಾದಾಗಿನಿಂದ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಮಾನವ ಶಕ್ತಿಯ ಕೊರತೆಯಿರುವ ಇಸ್ರೇಲ್‌ಗೆ 10,000 ನುರಿತ ಕಾರ್ಮಿಕರ ನೇಮಕಾತಿಗಾಗಿ ಜಾಹೀರಾತನ್ನು ಹಾಕಿದೆ.

ಪ್ಯಾಲೇಸ್ಟಿನಿಯನ್ನರ ಮೇಲಿನ ದಾಳಿಯ ಭಾಗವಾಗಿ ಇಸ್ರೇಲಿ ಅಧಿಕಾರಿಗಳು ಕೆಲಸದ ಪರವಾನಗಿಯೊಂದಿಗೆ ಇಸ್ರೇಲ್‌ನಲ್ಲಿ ವಿವಿಧ ವಲಯಗಳಲ್ಲಿ ಕೆಲಸ ಮಾಡುವ ಪ್ಯಾಲೆಸ್ತೀನ್ ಕಾರ್ಮಿಕರನ್ನುಹೊರಹೋಗುವಂತೆಆದೇಶಿಸಿದ್ದಾರೆ ಎಂದು ಈ ಹಿಂದೆ ವರದಿಯಾಗಿತ್ತು. ಇಸ್ರೇಲಿ ಬಿಲ್ಡರ್ಸ್, ಅಸೋಸಿಯೇಷನ್ ಪ್ಯಾಲೆಸ್ತೀನ್ ಕಾರ್ಮಿಕರ ಬದಲಿಗೆ 50000–100000 ಭಾರತೀಯ ಕಟ್ಟಡ ಕಾರ್ಮಿಕರನ್ನು ಕೇಳಿದೆ, ಇಸ್ರೇಲ್ ಮತ್ತು ಭಾರತದ ನಡುವೆ 15000 ಕಾರ್ಮಿಕರನ್ನು ಕಳುಹಿಸುವ ಬಗ್ಗೆ ಮಾತುಕತೆ ನಡೆಯುತ್ತಿದೆ ಎಂದೂ ವರದಿಯಾಗಿದೆ.

ಹೆಚ್‌ಕೆಆರ್‌ಎನ್ ಯುವ ಕೆಲಸಗಾರರ ನೇಮಕಾತಿ ಡ್ರೈವ್‌ನಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ನಿರ್ದಿಷ್ಟ ಮಾನದಂಡಗಳ ರೂಪುರೇಷೆಯನ್ನು ಕೊಟ್ಟಿದೆ. ಇದು ಆಕರ್ಷಕ ಸಂಬಳದ ಆಮಿಷ ತೋರಿಸಿ ಪ್ಯಾಲೆಸ್ತೀನೀ ಸಹ–ಕಾರ್ಮಿಕರ ಸಾವು, ಹಸಿವು ಮತ್ತು ಆದಾಯ ನಷ್ಟವುಂಟು ಮಾಡಲು ನಮ್ಮ ದೇಶದ ಬಡ ಕಟ್ಟಡ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸಲು ದುರುಪಯೋಗಪಡಿಸಿಕೊಳ್ಳುವ ದುಷ್ಟ ತಂತ್ರವಾಗಿದೆ ಎಂದು ಸಿಡಬ್ಲ್ಯುಎಫ್‌ಐ ಹೇಳಿದೆ. ಅದರ ಜೊತೆಗೆ, ಹೆಚ್‌ಕೆಆರ್‌ಎನ್ ಇಸ್ರೇಲ್‌ನ ನೈಟ್ ಕ್ಲಬ್‌ಗಳ ಕಾವಲಿಗೆ ದೊಡ್ಡ ಸಂಖ್ಯೆಯಲ್ಲಿ ಬೌನ್ಸರ್‌ಗಳ ನೇಮಕಾತಿಯನ್ನೂ ಮಾಡುತ್ತಿದೆ. ಇದು ಅತ್ಯಂತ ಕಳವಳದ ಗಂಭೀರ ಸಂಗತಿ ಎಂದಿರುವ ಸಿಡಬ್ಲ್ಯುಎಫ್‌ಐ ಈ ಭಾರತೀಯ ಬೌನ್ಸರ್‌ಗಳನ್ನು ಅಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಬಳಸಬಹುದು ಎಂದು ಸಂದೇಹ ವ್ಯಕ್ತಪಡಿಸಿದೆ.

ಬಿಜೆಪಿ ನೇತೃತ್ವದ ಉತ್ತರಾಖಂಡ ಸರ್ಕಾರವೂ ಕಟ್ಟಡ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸಲು ಚಿಂತನೆ ನಡೆಸುತ್ತಿದೆ ಎಂದು ವರದಿಗಳು ಬರುತ್ತಿವೆ. ಇದೇ ರೀತಿಯ ನೇಮಕಾತಿ ವ್ಯಾಯಾಮ ಉತ್ತರಾಖಂಡದಲ್ಲೂ ಆಗಬಹುದು ಎಂದು ಅದು ಆತಂಕ ವ್ಯಕ್ತಪಡಿಸಿದೆ.

ನರಮೇಧದಲ್ಲಿ ತೊಡಗಿರುವ ಇಸ್ರೇಲಿನಲ್ಲಿ ದುಡಿಮೆಗಾರರ ಕೊರತೆಯನ್ನು ನೀಗಿಸಲು ನಮ್ಮ ದೇಶದ ಬಡ ಕಟ್ಟಡ ಕಾರ್ಮಿಕರನ್ನು ಅಲ್ಲಿಗೆ ಕಳುಹಿಸುವ ಹರಿಯಾಣ ಸರ್ಕಾರದ ಕ್ರಮ ಗಾಬರಿ ಪಡಿಸುವಂತದ್ದು, ವಾಸ್ತವವಾಗಿ ಇದು ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ಸಾವಿರಾರು ಅಮಾಯಕ ಜನರ ನರಮೇಧಕ್ಕೆ ಬೆಂಬಲ ನೀಡುವ ಕ್ರಮವಾಗುತ್ತದೆ ಎಂದು ಕಟ್ಟಡ ಕಾರ್ಮಿಕರ ಒಕ್ಕೂಟ ಬಲವಾಗಿ ಖಂಡಿಸಿದೆ.

ತಕ್ಷಣ ಕದನ ವಿರಾಮ, 1967 ರ ಗಡಿಗಳನ್ನು ಮತ್ತು ಪೂರ್ವ ಜೆರುಸಲೇಂನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೇಸ್ಟಿನಿಯನ್ ಪ್ರಭುತ್ವದ ಸ್ಥಾಪನೆಗೆ ಕರೆ ನೀಡುವ ವಿಶ್ವಸಂಸ್ಥೆಯ ನಿರ್ಣಯವನ್ನು ಭಾರತ ಸರ್ಕಾರವು ಸಕ್ರಿಯವಾಗಿ ಬೆಂಬಲಿಸಬೇಕು ಎಂದು ಸಿಡಬ್ಲ್ಯುಎಫ್‌ಐ ಆಗ್ರಹಿಸಿದೆ. ಇಸ್ರೇಲಿಗೆ ಕಟ್ಟಡ ಕಾರ್ಮಿಕರನ್ನು ಕಳುಹಿಸಲು ಮಾತುಕತೆ ನಡೆಸುವ ಬದಲು, ಇಸ್ರೇಲ್ ವಿಶ್ವಸಂಸ್ಥೆಯ ನಿರ್ಣಯಕ್ಕೆ ಬದ್ಧವಾಗುವಂತೆ ಮಾಡಲು ಭಾರತ ಸರಕಾರ ಅದರೊಂದಿಗಿನ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಬಳಸಬೇಕು ಎಂದೂ ಸಿಡಬ್ಲ್ಯುಎಫ್‌ಐ ಭಾರತ ಸರಕಾರವನ್ನು ಆಗ್ರಹಿಸಿದೆ.

ಇಸ್ರೇಲ್‌ಗೆ ಕಳುಹಿಸುವ ಮೂಲಕ ನಮ್ಮ ದೇಶದ ಕಟ್ಟಡ ಕಾರ್ಮಿಕರ ಜೀವವನ್ನು ಅಪಾಯಕ್ಕೆ ಸಿಲುಕಿಸುವ ಮತ್ತು ಇಸ್ರೇಲಿನ ನರಮೇಧದ ಆಕ್ರಮಣದಲ್ಲಿ ಅವರನ್ನು ಪರೋಕ್ಷ ಪಾಲುದಾರರನ್ನಾಗಿ ಮಾಡುವ ಕ್ರಮಗಳ ವಿರುದ್ಧ ಡಿಸೆಂಬರ್ 22 ಮತ್ತು 23 ರಂದು ಪ್ರತಿಭಟಿಸಲು ಸಿಡಬ್ಲ್ಯುಎಫ್‌ಐ ತನ್ನ ಎಲ್ಲಾ ಸದಸ್ಯರು ಮತ್ತು ಭಾರತದ ಎಲ್ಲಾ ಕಟ್ಟಡ ಕಾರ್ಮಿಕರಿಗೆ ಕರೆ ನೀಡಿತ್ತು.

ನಿರುದ್ಯೋಗ ಸೃಷ್ಟಿಸುವ ‘ಮುಕ್ತ ವ್ಯಾಪಾರ’ ಎಂಬ ಟೊಳ್ಳು ತರ್ಕ...... ಪುಟ 13 ರಿಂದ

ಅದು ಸಾಲವನ್ನು ಬಳಕೆ ಮಾಡಬಹುದು. ಈ ಅರ್ಥದಲ್ಲಿ ಅಮೆರಿಕಾ ಪ್ರಭುತ್ವವು, ಒಂದು ರಾಷ್ಟ್ರ–ಪ್ರಭುತ್ವವಾಗಿರುವುದರ ಹೊರತಾಗಿಯೂ, ಸಮಕಾಲೀನ ಬಂಡವಾಳಶಾಹಿ ಪರಿಸ್ಥಿತಿಗಳಲ್ಲಿ ಒಂದು ಬದಲಿ (surrogate) ವಿಶ್ವ–ಪ್ರಭುತ್ವವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ ಮತ್ತು ವಾಸ್ತವವಾಗಿ ಒಂದು ಹಂತದವರೆಗೆ ಅದು ಹಾಗೆ ಕಾರ್ಯನಿರ್ವಹಿಸಿರುವುದೂ ಹೌದು.

‘ಸದ್ಗುಣ’ಗಳ ಧೂರ್ತ ಬೋಧನೆ

ಇಲ್ಲಿ ಒಂದು ವೈರುಧ್ಯವಿದೆ. ಅದು ಈಗ ಪ್ರಕಟಗೊಳ್ಳಲಾರಂಭಿಸಿದೆ. ಅಮೆರಿಕಾ ಪ್ರಭುತ್ವವು ಬದಲಿ ವಿಶ್ವ ಪ್ರಭುತ್ವವಾಗಿ ಕಾರ್ಯನಿರ್ವಹಿಸಬಹುದಾದರೂ, ಅದು ವಿಶ್ವ ಪ್ರಭುತ್ವವಲ್ಲ; ಏನೇ ಹೇಳಿದರೂ, ಅಂತಿಮವಾಗಿ ಅದು ಒಂದು ರಾಷ್ಟ್ರ–ಪ್ರಭುತ್ವವೇ. "ಸೋರಿಕೆ"ಯಾಗುವ ತನ್ನ ಆಂತರಿಕ ಒಟ್ಟು ಬೇಡಿಕೆಯನ್ನು ಅಮೆರಿಕಾ ಪ್ರಭುತ್ವವು ಒಂದು ವೇಳೆ ಹೆಚ್ಚಿಸಿದರೆ, ಆಗ, ಅಮೆರಿಕಾ ತನ್ನ ಬಾಹ್ಯ ಕೊರತೆಗೆ ಹಣಕಾಸು ಹೊಂದಿಸಿಕೊಳ್ಳುವಲ್ಲಿ ಸಮಸ್ಯೆಗಳಿಲ್ಲದಿದ್ದರೂ ಸಹ, ಆ ಬಾಹ್ಯ ಕೊರತೆಯನ್ನು ನೀಗಿಸಿಕೊಳ್ಳುವಲ್ಲಿ ಅದು ಸಾಲಗಾರನಾಗುತ್ತದೆ. ಮತ್ತು ಉದ್ಯೋಗ ಸೃಷ್ಟಿಸುವಾಗಲೂ–ಹೆಚ್ಚಿನ ಉದ್ಯೋಗಗಳು (ಬೇಡಿಕೆ "ಸೋರಿಕೆ" ಯಾಗುವುದರಿಂದ) ಹೊರ ದೇಶದಲ್ಲಿವೆಯಾದ್ದರಿಂದ–ಅದು ಸಾಲಗಾರನಾಗುತ್ತದೆ. ಸರ್ಕಾರದ ಬೃಹತ್ ವೆಚ್ಚಗಳ ಮೂಲಕ ಒಟ್ಟು ಬೇಡಿಕೆಯನ್ನು ಹಿಗ್ಗಿಸುವ ಅಮೆರಿಕಾದ ಕ್ರಮವು, ತಾಳಿಕೆಯಿರದ್ದು ಎಂಬ ಅರ್ಥದಲ್ಲಿ ಅಮೆರಿಕಾಗೆ ಯಾವ ತಾಂತ್ರಿಕ ಸಮಸ್ಯೆಗಳು ಈ ಸಂಬಂಧವಾಗಿ ಉದ್ಭವವಾಗದಿದ್ದರೂ, ಸಂಕುಚಿತ ರಾಷ್ಟ್ರೀಯ ದೃಷ್ಟಿಕೋನದ ವಿರುದ್ಧ ಸೆಣಸಾಟಕ್ಕೆ ಇಳಿಯುತ್ತದೆ. ಈ ಸೆಣಸಾಟವನ್ನು ಅಮೆರಿಕಾ ಪ್ರಭುತ್ವವು ನಿರ್ಲಕ್ಷಿಸುವುದು ಸಾಧ್ಯವಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅದರ ರಾಷ್ಟ್ರ–ಪ್ರಭುತ್ವದ ಪಾತ್ರವು ಅದರ ಬದಲಿ ವಿಶ್ವ–ಪ್ರಭುತ್ವದ ಪಾತ್ರದಲ್ಲಿ ತೊಡಕಾಗುತ್ತದೆ.

ಈ ವೈರುಧ್ಯವು ಈಗ ಒಂದು ಉಗ್ರ ಸ್ವರೂಪವನ್ನು ಪಡೆಯುತ್ತಿದೆ. ಕೊರೊನಾ ಸಮಯದಲ್ಲಿ ಅಮೆರಿಕಾ ಮತ್ತು ಇತರ ಮುಂದುವರಿದ ದೇಶಗಳು ತಮ್ಮ ಜನರಿಗೆ ಪರಿಹಾರ ಒದಗಿಸಲು ಹಣದ ಬಹು ದೊಡ್ಡ ಕೊರತೆಯನ್ನು ಎದುರಿಸಿದವು. ಕೊರೊನಾ ಕೊನೆಗೊಂಡ ನಂತರದ ಅವಧಿಯಲ್ಲಿ, ಒಟ್ಟು ಆಂತರಿಕ ಬೇಡಿಕೆಯನ್ನು ಹೆಚ್ಚಿಸಲು, ಹಣಕಾಸಿನ ಪರಿಸ್ಥಿತಿ ಅದಾಗಲೇ ಕೊರತೆಯಲ್ಲಿದ್ದರೂ ಸಹ, ಮತ್ತಷ್ಟು ಕೊರತೆಗೆ ಹೊಂದಿಕೊಳ್ಳಲು(ಅಂದರೆ, ಸಾಲ ಮಾಡಲು) ಅಮೆರಿಕಾ ಉತ್ಸುಕವಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಹಣದುಬ್ಬರ ತೀವ್ರವಾಗಿ ಏರಿದ್ದರಿಂದ ಈ ಉತ್ಸಾಹ ತಗ್ಗಿದೆ. ಈ ಹಣದುಬ್ಬರ ಒಮ್ಮೆ ತಗ್ಗಿದ ಕೂಡಲೇ, ಪ್ರಭುತ್ವದ ವೆಚ್ಚಗಳ ಮೂಲಕ ಅಮೆರಿಕಾದಲ್ಲಿ ಒಟ್ಟು ಆಂತರಿಕ ಬೇಡಿಕೆಗೆ ಉತ್ತೇಜನ ನೀಡುವ ಸಾಧ್ಯತೆಯಿದೆ. ಮತ್ತು, ಈ ಉತ್ತೇಜನವು, ಇತರ ದೇಶಗಳಿಗೆ ಬೇಡಿಕೆ "ಸೋರಿಕೆ"ಯಾಗುವುದನ್ನು ತಡೆಗಟ್ಟುವ ಸ್ವರಕ್ಷಕ ನೀತಿಯಿಂದ (protectionism) ಕೂಡಿರುತ್ತದೆ. ವಾಸ್ತವವಾಗಿ, ಸ್ವಲ್ಪ ಸಮಯದ ಹಿಂದಿನಿಂದ, ಸ್ವದೇಶೀ ಕೈಗಾರಿಕೆಗಳನ್ನು ವಿದೇಶಿ ಪೈಪೋಟಿಯಿಂದ ರಕ್ಷಿಸಲು, ವಿದೇಶೀ ಉತ್ಪನ್ನಗಳ ಮೇಲೆ ಅಧಿಕ ಸುಂಕ ವಿಧಿಸುವ ಸ್ವರಕ್ಷಣಾತ್ಮಕ ಆರ್ಥಿಕ ನೀತಿಯನ್ನು ಅಮೆರಿಕಾ ಅನುಸರಿಸುತ್ತಾ ಬಂದಿದೆ. ಈ ಕ್ರಮವು ಹೆಚ್ಚು ಸ್ಪಷ್ಟವಾಗಿ ಚೀನಾದ ವಿರುದ್ಧ ನಿರ್ದೇಶಿಸಲ್ಪಟ್ಟಿದೆ ಮತ್ತು ಮೂರನೆಯ ಜಗತ್ತಿನ ಇತರ ದೇಶಗಳಿಗೂ ಈ ನೀತಿಯ ಬಿಸಿ ತಟ್ಟುತ್ತಿದೆ.

ಸ್ವರಕ್ಷಣಾ ಆರ್ಥಿಕ ನೀತಿಯನ್ನು ಅನುಸರಿಸುತ್ತಾ ಬಂದಿರುವ ಅಮೆರಿಕಾದ ಕ್ರಮವನ್ನು ಕೆಲವರು "ಅಪ–ಜಾಗತೀಕರಣ" ಎಂದು ಕರೆದಿದ್ದಾರೆ. ಅದು ಸರಿಯಲ್ಲ. ಈ ಸ್ವರಕ್ಷಣಾವಾದವನ್ನು ಪರಿಚಯಿಸುವ ಪ್ರವೃತ್ತಿಯನ್ನು ಅಮೆರಿಕಾ ಹೊಂದಿದ್ದರೂ ಸಹ, ಹಣಕಾಸು ಬಂಡವಾಳದ ಹರಿದಾಟದ ಮೇಲೆ ಅದು ಯಾವುದೇ ನಿರ್ಬಂಧಗಳನ್ನು ಹೇರಿಲ್ಲ. ಬದಲಾಗಿ, ಬಂಡವಾಳದ ಹರಿವಿನ ಮೇಲೆ ನಿಯಂತ್ರಣಗಳನ್ನು ಹೇರುವ ಯಾವುದೇ ಮೂರನೇ ಜಗತ್ತಿನ ದೇಶವು ಅಮೆರಿಕಾದ ಸಿಟ್ಟಿಗೆ ಬಲಿಯಾಗಬೇಕಾಗುತ್ತದೆ. ಇಂಥಹ ವೈರುಧ್ಯಗಳು ಅಮೇರಿಕಾಕ್ಕೇನೂ ಪರಿವೆಯೇ ಇಲ್ಲ. ಎಷ್ಟೆಂದರೂ, ಅದು ತಾನು ಸ್ವರಕ್ಷಣಾವಾದಿ ಯಾಗುತ್ತಿರುವಾಗಲೇ, ಜಗತ್ತಿನ ಇತರ ದೇಶಗಳಿಗೆ ಮುಕ್ತ ವ್ಯಾಪಾರದ ಸದ್ಗುಣಗಳನ್ನು ಬೋಧಿಸುತ್ತಾ ಬಂದಿದೆ ತಾನೇ?

ಉಚಿತ ಪಡಿತರ ಪಡೆಯುವ 80 ಕೋಟಿ ಬಡವರಿರುವ ಮೋದಿ ಆಡಳಿತದಲ್ಲಿ ‘ಅಮೃತ ಕಾಲ’ ಯಾರಿಗೆ... ಪುಟ 11 ರಿಂದ

ಮೂಲಭೂತವಾಗಿ ಅತ್ಯಗತ್ಯವಾಗಿರುವ ಆಹಾರ ಧಾನ್ಯಗಳ ಲಭ್ಯತೆ ಕಡಿಮೆಯಾಗುತ್ತಿದೆ. ಇದು ಬಡತನವನ್ನು ಹೆಚ್ಚಿಸುತ್ತದೆ.

ಬಡತನವನ್ನು ಅಳೆಯುವ ಮಾನದಂಡ

ನಮ್ಮ ದೇಶದಲ್ಲಿ ಬಡತನದ ಅಧ್ಯಯನವು 1973–74 ರಿಂದ ಪ್ರಾರಂಭವಾಯಿತು. ಯೋಜನಾ ಆಯೋಗವು, ಸಂಪೂರ್ಣ ಬಡತನವಿದೆ ಎಂದು ಖಚಿತಪಡಿಸಿಕೊಳ್ಳಲು ಜನರಿಗೆ ಎಷ್ಟು ಪೌಷ್ಟಿಕ ಆಹಾರ ಸಿಗುತ್ತಿದೆ ಎಂಬ ಅಳತೆಯನ್ನು ತೆಗೆದುಕೊಂಡಿದೆ. ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ತಲಾ 2,200 ಕ್ಯಾಲೋರಿಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ 2,100 ಕ್ಯಾಲೋರಿಗಳನ್ನು ಅಳತೆಯಾಗಿ ತೆಗೆದುಕೊಳ್ಳಲಾಗಿದೆ. ಈ ಪ್ರಮಾಣದ ಕ್ಯಾಲೋರಿಗಳುಳ್ಳ ಆಹಾರ ಗಳಿಸಲಾಗದ ಕುಟುಂಬಗಳನ್ನು ಬಡತನ ರೇಖೆಗಿಂತ ಕೆಳಗಿನವರು ಎಂದು ಗುರುತಿಸಲಾಗುತ್ತದೆ. ಆ ನಂತರ ಸರ್ಕಾರಗಳು ಮತ್ತು ವಿಶ್ವಬ್ಯಾಂಕ್ ನಂತಹ ಸಂಸ್ಥೆಗಳು ಈ ಮಾನದಂಡಕ್ಕೆ ಎಳ್ಳುನೀರು ಬಿಡುವ ಅನೇಕ ಷಡ್ಯಂತ್ರಗಳನ್ನು ಮಾಡುತ್ತಿವೆ. ಹಾಗಾಗಿ ದೇಶದಲ್ಲಿ ಬಡತನ ಕಡಿಮೆಯಾಗಿದೆ ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ.

2011–12 ಕ್ಕೆ ಹೋಲಿಸಿದರೆ, 2017–18 ರ ಹೊತ್ತಿಗೆ, ಜನರ ವಿನಿಮಯ ಶಕ್ತಿಯು ಇನ್ನೂ ಶೇ. 9ರಷ್ಟು ಕಡಿಮೆಯಾಗಿದೆ. ಪರಿಣಾಮವಾಗಿ, ಕನಿಷ್ಠ ಮಟ್ಟದ ಆಹಾರ ಧಾನ್ಯಗಳನ್ನು ಪಡೆಯಲಾಗದವರು ಗ್ರಾಮೀಣ ಪ್ರದೇಶಗಳಲ್ಲಿ ಶೇಕಡಾ 80 ಕ್ಕೆ ಏರಿದ್ದಾರೆ. ಮೋದಿ ಸರ್ಕಾರವು ಈ ಅಂಕಿಅಂಶಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡದೆ ಮುಚ್ಚಿಟ್ಟಿತು. ತಾತ್ವಿಕವಾಗಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (NFHS) 4 ಮತ್ತು 5 ರ ಸಮೀಕ್ಷೆಗಳನ್ನು ರಾಷ್ಟ್ರೀಯ ಮಾದರಿ ಸಮೀಕ್ಷೆಯ 75 ನೇ ಸುತ್ತಿಗೆ ಗೃಹ ಬಳಕೆ ವೆಚ್ಚವನ್ನು ಲಿಂಕ್ ಮಾಡಬೇಕು. ಆ ಸುತ್ತಿನಲ್ಲಿ ಬಡತನದ ನೈಜ ಪರಿಸ್ಥಿತಿ ಬಯಲಾಗುತ್ತಿದ್ದಂತೆ ಮೋದಿ ಸರಕಾರ ಈ ವಿಧಾನವನ್ನೇ ಕೈಬಿಟ್ಟಿತು.

ಹೀಗಾಗಿ, ವಿಶ್ವ ಹಸಿವಿನ ಸೂಚ್ಯಂಕದಲ್ಲಿ ನಮ್ಮ ದೇಶವು 125 ದೇಶಗಳಲ್ಲಿ 111 ನೇ ಸ್ಥಾನದಲ್ಲಿದ್ದರೆ ಆಶ್ಚರ್ಯವೇನಿಲ್ಲ. ಆ ಸೂಚ್ಯಂಕದಲ್ಲಿ, ನಾವು ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ನೇಪಾಳದಂತಹ ನೆರೆಯ ದೇಶಗಳಿಗಿಂತ ಹಿಂದುಳಿದಿದ್ದೇವೆ.

ಜನಸಂಖ್ಯೆ ಹೆಚ್ಚಿದೆ. ಆದರೆ ಇನ್ನೊಂದು ಆಯಾಮದಲ್ಲಿ ನೋಡುವುದಾದರೆ, ಕಳೆದ 10 ವರ್ಷಗಳಲ್ಲಿ ಜನಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಆದರೂ ಪಡಿತರ ಪಡೆಯುವವರ ಸಂಖ್ಯೆ ಹೆಚ್ಚಾಗಲಿಲ್ಲ ಎಂಬುದನ್ನು ಗಮನಿಸಬೇಕು. ಇದರಲ್ಲಿ 80 ಕೋಟಿ ಜನರು ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಕುಟುಂಬಗಳಿಗೆ ಸೇರಿದವರಾಗಿದ್ದರು. ಅಥವಾ ಇಷ್ಟು ಪ್ರಮಾಣದ ಜನರು ಬಿಪಿಎಲ್ ಕಾರ್ಡ್ ಪಡೆದಿದ್ದರು. ಇಂದಿಗೂ ಅಷ್ಟೇ ಪ್ರಮಾಣದ ಫಲಾನುಭವಿಗಳಿದ್ದಾರೆ. 2011 ರ ನಂತರ ಜನಗಣತಿ ನಡೆದಿಲ್ಲ. 2021 ರಲ್ಲಿ ಗಣತಿ ನಡೆದಿದ್ದರೆ, ಓಈಖಂ ಅಡಿಯಲ್ಲಿ ಸಹಾಯಕ್ಕೆ ಅರ್ಹರಾಗಿರುವ ಬಡವರ ಪ್ರಮಾಣವನ್ನು ನಿರ್ಣಯಿಸಲು ಸಾಧ್ಯವಾಗುತ್ತಿತ್ತು.


ಅನರ್ಹರೂ ಬಿಪಿಎಲ್ ಕಾರ್ಡ್

“ಇಷ್ಟೊಂದು ಪ್ರಮಾಣದಲ್ಲಿ ಬಡವರಿಲ್ಲ, ಅನರ್ಹರೂ ಬಿಪಿಎಲ್ ಕಾರ್ಡ್ ಪಡೆದಿದ್ದಾರೆ” ಎಂಬುದು ಬಿಜೆಪಿಯ ಕೆಲವು ಸಮರ್ಥಕರ ವಾದ. ಇದು ಸ್ವಲ್ಪ ಮಟ್ಟಿಗೆ ನಿಜವಾದರೂ, ಇಂತಹ ಪಡಿತರ ಪಡೆಯಲು ಅನರ್ಹರಾದ ಕುಟುಂಬಗಳ ಬಿಪಿಎಲ್ ಕಾರ್ಡ್ ಗಳನ್ನು ರದ್ದುಮಾಡಲಾಗದಷ್ಟು ಮೋದಿ ಆಡಳಿತ ನಿಷ್ಕ್ರಿಯವಾಗಿದೆ ಎಂಬುದನ್ನು ಇವರು ಒಪ್ಪಿಕೊಳ್ಳಬೇಕಾಗುತ್ತದೆ. (ಎಡಪಕ್ಷಗಳ ಬೇಡಿಕೆ ಏನೆಂದರೆ, ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿಗೆ ಬರಬೇಕು. ಅಂತ್ಯೋದಯ, ಬಿಪಿಎಲ್, ಎಪಿಎಲ್ ಎಂಬ ತಾರತಮ್ಯ ಇಲ್ಲದೆ, ಮೂಲಭೂತ ಅಗತ್ಯ ವಸ್ತುಗಳನ್ನು ಬಯಸಿ ಬರುವ ಯಾವುದೇ ಕುಟುಂಬಕ್ಕೂ ಪಿಡಿಎಸ್ ಮೂಲಕ ವಿತರಣೆ ಆಗಬೇಕು ಎಂಬುದು. ಇದರಿಂದ ಅರ್ಹ ಫಲಾನುಭವಿಗಳು ಪಡಿತರದಿಂದ ವಂಚಿತರಾಗುವುದನ್ನು ತಡೆಯುವುದರ ಜೊತೆಗೆ, ಆಹಾರ ಪದಾರ್ಥಗಳ ಬೆಲೆ ನಿಯತ್ರಣದಲ್ಲಿ ಇರುತ್ತದೆ.)

ಬಹು ಆಯಾಮದ ಬಡತನ ಸೂಚ್ಯಂಕವನ್ನು ಆಧರಿಸಿ ಬಡತನವನ್ನು ಸೋಲಿಸಿದ್ದೇವೆ ಎಂದು ಬಿಜೆಪಿ ಸರ್ಕಾರ ಹೇಳಿಕೊಳ್ಳುವುದು ಶುದ್ಧ ಉತ್ಪ್ರೇಕ್ಷೆಯಾಗಿದೆ. ಅದೇ ಸಮಯದಲ್ಲಿ ಅದು ಬಡತನವನ್ನು ಕಡಿಮೆ ಮಾಡಲು ಯಾವುದೇ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬ ಅಂಶವನ್ನು ಮರೆಮಾಡಲು ಪ್ರಯತ್ನಿಸುತ್ತದೆ.

ಇಟಾಲಿಯನ್ ನವ ವಾಸ್ತವವಾದಿ ಸಿನಿಮಾ 'ದಿ ಬೈಸಿಕಲ್ ಥೀವ್ಸ್'ಗೆ 75ರ ಗರಿಮೆ

ಶ್ರೀಮುರಳಿ ಕೃಷ್ಣ



ಎರಡನೇ ವಿಶ್ವ ಸಮರದ ತರುವಾಯ, ಯೂರೋಪಿನ ಅನೇಕ ದೇಶಗಳು ಜರ್ಝರಿತಗೊಂಡವು. ಇಟಲಿ ಅದಕ್ಕೆ ಹೊರತಾಗಿರಲಿಲ್ಲ. ಅದರ ಜನತೆ ಅಭಾವ, ಬಡತನ, ಹಸಿವು, ನಿರುದ್ಯೋಗ, ಗಲಭೆಗಳು, ಸಾಮಾಜಿಕ ಪ್ರಕ್ಷುಬ್ಧತೆ ಇತ್ಯಾದಿಗಳಿಂದ ನಲುಗಿತು. ನಂತರ ನಿಧಾನವಾಗಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಕ್ಷೇತ್ರಗಳಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಇದರ ಪರಿಣಾಮ ಸಿನಿಮಾ ರಂಗದ ಮೇಲೂ ಆಯಿತು. ಕೆಲವು ಸಿನಿಮಾ ನಿರ್ದೇಶಕರು ವಸ್ತುಸ್ಥಿತಿಯನ್ನು ಯಥಾ ರೂಪದಲ್ಲಿ, ಯಾವುದೇ ಕುಸುರಿ ಕೆಲಸಗಳಿಲ್ಲದೆ, ಅಭಿವ್ಯಕ್ತಿಸುವ ನಿಟ್ಟಿನಲ್ಲಿ ಹೊಸ ಸಿನಿಮಾ ಭಾಷೆಯ ಅಗತ್ಯತೆಯನ್ನು ಮನಗಂಡರು. ಸಾಮಾನ್ಯ ಮಂದಿಯ ನಿತ್ಯದ ಕಥೆಗಳು, ಬಾಳುವುದಕ್ಕಾಗಿ ಅವರು ಪಡುವ ಪಡಿಪಾಟಲುಗಳು ಇತ್ಯಾದಿಗಳನ್ನು ಸಿನಿಮಾ ಮಾಧ್ಯಮದ ಮೂಲಕ ಬಿಂಬಿಸಲು ಮುಂದಾದರು. ಇದು ಇಟಾಲಿಯಲ್ಲಿ ನವವಾಸ್ತವಾದಿ ಸಿನಿಮಾದ ಚಾಲನೆಗೆ ಅಡಿಗಲ್ಲಾಯಿತು. ಇಟಾಲಿಯನ್ ನವವಾಸ್ತವವಾದಿ ಸಿನಿಮಾ ಚಳವಳಿ ಫ್ರಂಚ್ ನವ ಅಲೆ ಮತ್ತು ನವ ಜರ್ಮನ್ ಸಿನಿಮಾ ಚಳವಳಿಗಳಿಗೆ ಪ್ರೇರೇಪಣೆಯನ್ನು ನೀಡಿತು ಎನ್ನಬಹುದು. 'ದಿ ಬೈಸಿಕಲ್ ಥೀವ್ಸ್" ನವವಾಸ್ತವಾದಿ ಸಿನಿಮಾದ ಒಂದು ಪ್ರಮುಖ ಚಿತ್ರ. ಎಪ್ಪತ್ತೈದು ವರ್ಷಗಳಾದರೂ, ಪ್ರಪಂಚದಾದ್ಯಂತ, ಈ ಸಿನಿಮಾ ಸಿನಿ ಪ್ರೇಮಿಗಳು ಮತ್ತು ಸಿನಿ ವಿದ್ವಾಂಸರ ಚರ್ಚೆಗಳಿಗೆ ಗ್ರಾಸವಾಗಿರುವುದು ಅದರ ಮಹತ್ವವನ್ನು ಸಾರುತ್ತದೆ!

ವಿಟ್ಟೋರಿಯೊ ಡಿ ಸಿಕಾ ನಿರ್ದೇಶನದ "ದಿ ಬೈಸಿಕಲ್ ಥೀವ್ಸ್" ಸಿನಿಮಾದ ಆಂತರ್ಯವನ್ನು ಹೊಕ್ಕುವ ಮುನ್ನ ಇಟಾಲಿಯನ್ ನವವಾಸ್ತವವಾದಿ ಸಿನಿಮಾ ಚಳಚಳಿ ಕುರಿತು ಸ್ಥೂಲವಾಗಿ ಅರಿತಾಗ ಇಂತಹ ಚಲನಚಿತ್ರಗಳ ಉಗಮದ ಹಿಂದಿನ ಕಾರಣಗಳನ್ನು ತಿಳಿಯಬಹುದು. 1920ರ ದಶಕದಲ್ಲಿ ಇಟಾಲಿಯಲ್ಲಿ ಅಮೆರಿಕಾದ ಸಿನಿಮಾಗಳು ಪ್ರವರ್ಧಮಾನದಲ್ಲಿದ್ದವು. ಇದರಿಂದ ಇಟಾಲಿಯ ಸಿನಿಮಾ ಉದ್ಯಮ ಮಸುಕಾಗಿತ್ತು. ಬೆನಿಟೊ ಮುಸ್ಸೊಲಿನಿ ಸರಕಾರ ತನ್ನ ಫ್ಯಾಸಿಸ್ಟ್ ಆಳ್ವಿಕೆಯನ್ನು ಬಲಪಡಿಸಿಕೊಳ್ಳಲು ಅದರ ಕೈಗಾರಿಕಾ ಮತ್ತು ಸಾಂಸ್ಕೃತಿಕ ನೀತಿಗಳ ಅನುಸಾರ ಸಿನಿಮಾ ನಿರ್ಮಾಣಕ್ಕೆ ಸಹಾಯ ಧನವನ್ನು ಒದಗಿಸಲು ಮುಂದಾಯಿತು. ಹೀಗೆ ಸಿನಿಮಾ ಉದ್ಯಮಕ್ಕೂ ಮತ್ತು ಅಲ್ಲಿನ ಆಡಳಿತ ಯಂತ್ರಕ್ಕೂ ಒಂದು ಹೊಸ ಪಾಲುದಾರಿಕೆ ಪ್ರಾರಂಭವಾಯಿತು. ಇದು 99 ಏಕರೆಯ ಭೂಮಿಯಲ್ಲಿ "ಸಿನಿಸಿಟ್ಟ" ಎಂಬ ಬಹುದೊಡ್ಡ ಸ್ಟುಡಿಯೊದ ಸ್ಥಾಪನೆಗೆ ನಾಂದಿಯನ್ನು ಹಾಡಿತು!

ಇಟಾಲಿಯ ಫ್ಯಾಸಿಸ್ಟ್ ಆಡಳಿತದ ಸಮಯದಲ್ಲಿ ತೆರೆಕಂಡ ಸಿನಿಮಾಗಳಲ್ಲಿ ಖುಲ್ಲಂಖುಲ್ಲ ಫ್ಯಾಸಿಸ್ಟ್ ವಿಚಾರಧಾರೆಯ ಅಂಶಗಳಿರುತ್ತಿರಲಿಲ್ಲ. ಆದರೆ ಆ ಕಾಲದ ಸರ್ಕಾರಕ್ಕೆ ಹಾಯೆನಿಸುವ, ಬೆರಗುಗೊಳಿಸುವ, ಥಳಕಿನ ಪಲಾಯನವಾದಿ ಸಿನಿಮಾಗಳ ನಿರ್ಮಾಣಕ್ಕೆ ಉತ್ತೇಜನವನ್ನು ನೀಡುವ ಉದ್ದೇಶವಿತ್ತು. ಅಂದರೆ ವೀಕ್ಷಕರಿಗೆ ಜೋಗುಳದ ಹಾಡಿನಂತೆ ಮುದವನ್ನು ನೀಡುವ ಸಿನಿಮಾಗಳಿಗೆ ಪ್ರಾಶಸ್ತ್ಯ ದೊರಕಿತು. ಇಂತಹ ಸಿನಿಮಾಗಳನ್ನು ವೈಟ್ ಟೆಲಿಫೋನ್ ಫಿಲ್ಮ್ಸ್ ಎಂದು ಕರೆಯಲಾಗುತ್ತಿತ್ತು. ಈ ಸಿನಿಮಾಗಳಲ್ಲಿ ಫ್ರೇಮ್ಗಳನ್ನು ವೈಭವೀಕರಿಸಲು ಬಿಳಿ ಟೆಲಿಫೋನ್ಗಳನ್ನು ಬಳಸಲಾಗುತ್ತಿತ್ತು! ಇದೇ ಅವಧಿಯಲ್ಲಿ ಅಡಾಲ್ಫ್ ಹಿಟ್ಲರ್ನ ನಾಝಿ ಸರ್ಕಾರ ಕೂಡ ತನ್ನ ಪ್ರಚಾರ ಸಚಿವನಾಗಿದ್ದ ಜೋಸೆಫ್ ಗೊಬೆಲ್ಸ್ ಮೂಲಕ ಇಂತಹ ಸಿನಿಮಾಗಳನ್ನು ಪ್ರೋತ್ಸಾಹಿಸುತ್ತಿತ್ತು! ಮುಂದೆ ಇಟಾಲಿಯನ್ ನವವಾಸ್ತವವಾದಿ ಸಿನಿಮಾ ಚಳವಳಿಯ ಅರ್ಧ್ವಯುವಾದ ರಾಬರ್ಟೊ ರೊಸ್ಸೆಲಿನಿ ಕೂಡ ಪ್ರಚಾರದ ಸರಕಿದ್ದ ಸಿನಿಮಾಗಳನ್ನು ನಿರ್ದೇಶಿಸುವಂತೆ ನೋಡಿಕೊಳ್ಳಲಾಯಿತು!


ವಿಟ್ಟೋರಿಯೊ ಡಿ ಸಿಕಾ

ನವ ವಾಸ್ತವವಾದಿ ಸಿನಿಮಾ


ಎರಡನೇ ವಿಶ್ವ ಸಮರದ ತರುವಾಯ, ಯೂರೋಪಿನ ಅನೇಕ ದೇಶಗಳು ಜರ್ಝರಿತಗೊಂಡವು. ಇಟಲಿ ಅದಕ್ಕೆ ಹೊರತಾಗಿರಲಿಲ್ಲ. ಅದರ ಜನತೆ ಅಭಾವ, ಬಡತನ, ಹಸಿವು, ನಿರುದ್ಯೋಗ, ಗಲಭೆಗಳು, ಸಾಮಾಜಿಕ ಪ್ರಕ್ಷುಬ್ಧತೆ ಇತ್ಯಾದಿಗಳಿಂದ ನಲುಗಿತು. ನಂತರ ನಿಧಾನವಾಗಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಕ್ಷೇತ್ರಗಳಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಇದರ ಪರಿಣಾಮ ಸಿನಿಮಾ ರಂಗದ ಮೇಲೂ ಆಯಿತು. ಕೆಲವು ಸಿನಿಮಾ ನಿರ್ದೇಶಕರು ವಸ್ತುಸ್ಥಿತಿಯನ್ನು ಯಥಾ ರೂಪದಲ್ಲಿ, ಯಾವುದೇ ಕುಸುರಿ ಕೆಲಸಗಳಿಲ್ಲದೆ, ಅಭಿವ್ಯಕ್ತಿಸುವ ನಿಟ್ಟಿನಲ್ಲಿ ಹೊಸ ಸಿನಿಮಾ ಭಾಷೆಯ ಅಗತ್ಯತೆಯನ್ನು ಮನಗಂಡರು. ಸಾಮಾನ್ಯ ಮಂದಿಯ ನಿತ್ಯದ ಕಥೆಗಳು, ಬಾಳುವುದಕ್ಕಾಗಿ ಅವರು ಪಡುವ ಪಡಿಪಾಟಲುಗಳು ಇತ್ಯಾದಿಗಳನ್ನು ಸಿನಿಮಾ ಮಾಧ್ಯಮದ ಮೂಲಕ ಬಿಂಬಿಸಲು ಮುಂದಾದರು. ಕಲೆ ಸಮಾಜವನ್ನು ಪ್ರತಿಫಲಿಸಬೇಕು ಎಂಬ ಪರಿಕಲ್ಪನೆ ಮುನ್ನೆಲೆಗೆ ಬಂದಿತು. ಇದು ಇಟಾಲಿಯಲ್ಲಿ ನವವಾಸ್ತವಾದಿ ಸಿನಿಮಾದ ಚಾಲನೆಗೆ ಅಡಿಗಲ್ಲಾಯಿತು. ಒಂದು ಹೊಸ ಸಿನಿಮಾ ಪ್ರಜ್ಞೆ ರೂಪುಗೊಂಡಿತು. ಹೊರಾಂಗಣದ ಶೂಟಿಂಗ್, ವೃತ್ತಿಯೇತರ ನಟ–ನಟಿಯರು, ಕೊನೆ ಸಮಯದಲ್ಲಿ ಬದಲಾವಣೆಯಾಗುವ ಸಂಭಾಷಣೆಗಳು, ಕಡಿಮೆ ಸೆಟ್ ಡಿಸೈನುಗಳು, ಲಾಂಗ್ ಟೇಕ್ಗಳು, ಸಾಕ್ಷ್ಯಚಿತ್ರ ಮಾದರಿಯ ಸಿನಿಮಾ ತಯಾರಕ ವಿಧಾನಗಳು, ಪ್ರಕೃತಿದತ್ತ ಬೆಳಕಿನ ಬಳಕೆ, ಎದ್ದು ಕಾಣದ ಸಂಕಲನ, ದುಡಿಯುವ ವರ್ಗದ ಪಾತ್ರಗಳು, ಹಾಲಿ ಸಾಮಾಜಿಕ ಬೆಳವಣಿಗೆಗಳು ಇತ್ಯಾದಿ ಇಟಾಲಿಯನ್ ನವವಾಸ್ತವವಾದಿ ಸಿನಿಮಾದ ಹೆಗ್ಗುರುತುಗಳಾಗಿದ್ದವು.

ಲುಕಿನೊ ವಿಸ್ಕೊಂತಿ ನಿರ್ದೇಶಿಸಿದ 'ಒಸ್ಸೆಸಿಯೋನೆ' (Ossessione-1943) ಯನ್ನು ಇಟಾಲಿಯ ನವವಾಸ್ತವವಾದಿ ಸಿನಿಮಾ ಚಳವಳಿಯ ಪ್ರಥಮ ಸಿನಿಮಾ ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ನಂತರದ ಒಂದು ದಶಕದಲ್ಲಿ ವಿಟ್ಟೊರಿಯೊಡಿಸಿಕಾ, ರಾಬರ್ಟೊರೊಸ್ಸೆಲಿನಿ, ಪಿಯರ್ ಪೌಲೊಪಸೊಲಿನಿ, ಗುಸೆಪ್ಪೆಡಿ ಸಾಂತಿಸ್, ಆಲ್ಬೆರ್ಟೊಲತುವಾದ, ಫೆಡ್ರಿಕೊಫೆಲ್ಲಿನಿ ಮುಂತಾದ ನಿರ್ದೇಶಕರು ಗಮನಾರ್ಹ ಸಿನಿಮಾಗಳನ್ನು ನಿರ್ದೇಶಿಸಿದರು. ಒಂದರ್ಥದಲ್ಲಿ ಇಟಾಲಿಯನ್ ನವವಾಸ್ತವವಾದಿ ಸಿನಿಮಾ ಚಳವಳಿ ಫ್ರಂಚ್ ನವ ಅಲೆ ಮತ್ತು ನವ ಜರ್ಮನ್ ಸಿನಿಮಾ ಚಳವಳಿಗಳಿಗೆ ಪ್ರೇರೇಪಣೆಯನ್ನು ನೀಡಿತು ಎನ್ನಬಹುದು.

"ದಿಬೈಸಿಕಲ್ ಥೀವ್ಸ್"

ವಿಟ್ಟೊರಿಯೊಡಿಸಿಕಾ 1917ರಲ್ಲಿ ಒಂದು ಮೂಕಿ ಸಿನಿಮಾದಲ್ಲಿ ಸಣ್ಣ ಪಾತ್ರ ಮಾಡುವುದರ ಮೂಲಕ ತಮ್ಮ ವೃತ್ತಿ ಜೀವನವನ್ನು ಶುರು ಮಾಡಿದರು. ಸುಮಾರು 55 ವರ್ಷಗಳ ವೃತ್ತಿ ಜೀವನದಲ್ಲಿ ಅವರು 150 ಸಿನಿಮಾಗಳಲ್ಲಿ ಪಾತ್ರವನ್ನು ವಹಿಸಿದರು; 35 ಸಿನಿಮಾಗಳನ್ನು ನಿರ್ದೇಶಿಸಿದರು. ಹಾಸ್ಯಗಾರರು ಮತ್ತು ವೃದ್ಧರ ಪಾತ್ರಗಳನ್ನು ಮಾಡುತ್ತಲೇ ಅನೇಕ ರೊಮ್ಯಾಂಟಿಕ್ ಹಾಸ್ಯ ಸಿನಿಮಾಗಳಲ್ಲಿ ನಟಿಸಿದರು. 1930ರ ದಶಕದಲ್ಲಿ ಅವರು ಮ್ಯಾಟಿನಿ ಐಡಲ್ ಆದರು. ನಂತರದ ವರ್ಷಗಳಲ್ಲಿ ಅವರು ಸಿನಿಮಾ ನಿರ್ದೇಶನದಲ್ಲಿ ತೊಡಗಿದರು. ಈ ಅವಧಿಯಲ್ಲಿ ಅವರು 'ವೈಟ್ ಟೆಲಿಫೋನ್ ಫಿಲ್ಮ್'ಗಳನ್ನು ನಿರ್ದೇಶಿಸಿದರು. ಇದರಿಂದ ಅವರು ನಿರ್ದೇಶನದ ಮತ್ತು ತಾಂತ್ರಿಕ ಕೌಶಲಗಳನ್ನು ಗಳಿಸಿದರು. 1944ರಲ್ಲಿ ಅವರು ನಿರ್ದೇಶಿಸಿದ 'ದಿಚಿಲ್ಡ್ರನ್ ಆರ್ ವಾಚಿಂಗ್ ಅಸ್' ಸಿನಿಮಾಕ್ಕೆ ಚೆಸಾರೆಝುವಟ್ಟಿನಿಯವರ ಚಿತ್ರ ಕಥೆಯಿತ್ತು. ನಂತರ ಅವರು ಖ್ಯಾತ ಚಿತ್ರ ಕಥಾಗಾರರಾದರು. ಡಿಸಿಕಾ ಮತ್ತು ಝುನಟ್ಟಿನಿ ಒಟ್ಟಿಗೆ ಅನೇಕ ಸಿನಿಮಾಗಳಲ್ಲಿ ದುಡಿದರು. ಗಮನಾರ್ಹ ಜೋಡಿಯಾದರು.

1948ರಲ್ಲಿ ಡಿಸಿಕಾ "ದಿಬೈಸಿಕಲ್ ಥೀವ್ಸ್" ಸಿನಿಮಾವನ್ನು ನಿರ್ದೇಶಿಸಿದರು. ಆಂಟೊನಿಯೊರಿಚಿ (ನಟಲಮ್ಬೆರ್ಟೊಮಗ್ಗಿಯೊರನಿ– ಈತ ಒಬ್ಬ ವೃತ್ತಿಯೇ ತರನಟ) ಒಬ್ಬ ಬಡವ. ಆತ ತನ್ನ ಸಂಸಾರವನ್ನು ನಿಭಾಯಿಸಲು ನಿತ್ಯ ದೊಡ್ಡ ಕ್ಯೂನಲ್ಲಿ ನಿಂತು ಉದ್ಯೋಗವನ್ನು ಅರಸುತ್ತಿರುತ್ತಾನೆ. ಒಂದು ದಿನ ಆತನಿಗೆ ಒಂದು ಕೆಲಸವಿರುವುದು ತಿಳಿಯುತ್ತದೆ. ಆದರೆ ಉದ್ಯೋಗಾಕಾಂಕ್ಷಿಯ ಬಳಿ ಒಂದು ಬೈಸಿಕಲ್ ಇರಲೇಬೇಕು ಎಂಬ ನಿಬಂಧನೆಯಿರುತ್ತದೆ. ರಿಚಿ ಜೋರಾಗಿ "ನನ್ನಲ್ಲಿದೆ" ಎಂದು ಕೂಗುತ್ತಾನೆ. ಆದರೆ ಆತನ ಬಳಿ ಬೈಸಿಕಲ್ ಇರುವುದಿಲ್ಲ. ಏಕೆಂದರೆ ಆತ ಅದನ್ನು ಅಡವಿಟ್ಟಿರುತ್ತಾನೆ. ಬೈಸಿಕಲ್ಲು ವಾಪಸ್ಸು ಪಡೆಯಲು ಆತನ ಮಡದಿ ಮರಿಯಾ (ನಟಿಲಿಯ ನೆಲ್ಲಕರೆಲ್) ತಮ್ಮ ಹಾಸಿಗೆಯ ಹೊದಿಕೆಗಳನ್ನು ರಿಚಿಗೆ ನೀಡಿ ಅವುಗಳನ್ನು ಅಡವಿಡಲು ತಿಳಿಸುತ್ತಾಳೆ. ಹೀಗಾಗಿ ರಿಚಿಗೆ ಗೋಡೆಗಳ ಮೇಲೆ ಸಿನಿಮಾ ಪೋಸ್ಟರ್ಗಳನ್ನು ಅಂಟಿಸುವ ಕೆಲಸ ದೊರಕುತ್ತದೆ. ಈ ಕೆಲಸದಲ್ಲಿರುವಾಗ ಆತನ ಬೈಸಿಕಲ್ ಕಳುವಾಗುತ್ತದೆ. ಇದಕ್ಕಾಗಿ ರೋಮ್ನ ಬೀದಿಗಳಲ್ಲಿ ಹುಡುಕುವಾಗ, ಮಗ ಬ್ರೂನೊ (ನಟಎನ್ಝೊಸ್ಟೈಓಲಾ) ಆತನ ಜೊತೆ ಗೂಡುತ್ತಾನೆ.



ಸಿನಿಮಾ ಶುರುವಾಗುವಾಗ, ರಿಚಿ ನಿರುದ್ಯೋಗಿಗಳ ಸಮೂಹದಿಂದ ಹೊರಹೊಮ್ಮುತ್ತಾನೆ. ಕೊನೆಯಲ್ಲಿ ಆತ ಜನರ ನಡುವೆ ಕರಗಿ ಹೋಗುತ್ತಾನೆ! ಪರಿಕರದಿಂದಾಚೆ ಬೈಸಿಕಲ್ ಒಂದು ಬಡ ಕುಟುಂಬದ ಉತ್ತಮ ನಾಳೆಗಳ ಪ್ರತೀಕವಾಗುತ್ತದೆ. ಕಳುವಾದ ಬೈಸಿಕಲ್ ನೊಂದ ಕುಟುಂಬದ ಭವಿಷ್ಯ ಹರಣವನ್ನು ಸೂಚಿಸುತ್ತದೆ. ಈ ಸಿನಿಮಾದಲ್ಲಿ ಹಾಲಿವುಡ್ ಸಿನಿಮಾಗಳ ನಿರೂಪಣೆಯ ಹಲವು ಲಕ್ಷಣಗಳಿವೆ. ಆದರೆ ಅಂತ್ಯ ಹಾಲಿವುಡ್ ಸಿನಿಮಾ ಆಕೃತಿಯ ಎಂದಿನ ಆಯಾಮವನ್ನು ಹೊಂದಿಲ್ಲ. ಇಲ್ಲಿ ಫೀಲ್–ಗುಡ್ ಅಂಶವಿಲ್ಲ. ರಿಚಿ ಕುಟುಂಬದ ಭವಿಷ್ಯದ ಬಗೆಗೆ ವೀಕ್ಷಕರು ಯೋಚಿಸುವಂತೆ ಮಾಡುತ್ತದೆ.

ರಿಚಿ ಪಾತ್ರದಲ್ಲಿ ಕಂದು ವರ್ಣವೂ ಇದೆ. ಪ್ರಾರಂಭದಲ್ಲಿ ಆತ ಬಡವನಾಗಿದ್ದರೂ, ಒಬ್ಬ ಪ್ರಾಮಾಣಿಕ ಮತ್ತು ನೇರ ಸ್ವಭಾವದ ವ್ಯಕ್ತಿಯಾಗಿ ತೋರಿಸಲಾಗಿದೆ. ಸಿನಿಮಾ ಮುಂದುವರೆದಂತೆ, ಆತ ಜನರನ್ನು ಸಾಯಿಸಲು ಪ್ರಯತ್ನಿಸುತ್ತಾನೆ, ತನ್ನ ಮಗನ ಬಳಿ ಕೆಟ್ಟದ್ದು ಎನ್ನಬಹುದಾದ ರೀತಿಯಲ್ಲಿ ವರ್ತಿಸುತ್ತಾನೆ ಮತ್ತು ಒಂದು ಬೈಸಿಕಲನ್ನು ಕದಿಯಲು ಮುಂದಾಗುತ್ತಾನೆ! ಸಮಾಜ ಶಾಸ್ತ್ರಜ್ಞರು ಅಪರಾಧ ಮತ್ತು ಇತರ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಬಡತನ ವಹಿಸುವ ಪಾತ್ರವನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ಈ ಅಂಶವನ್ನು ರಿಚಿ ಪಾತ್ರದ ಮೂಲಕ ನಿರ್ದೇಶಕರು ವೀಕ್ಷಕರಿಗೆ ರವಾನಿಸಿದ್ದಾರೆ ಎಂದೆನಿಸುತ್ತದೆ.


ಮಕ್ಕಳ ಪಾತ್ರ

ಡಿಸಿಕಾ ತನ್ನ ಸಿನಿಮಾಗಳಲ್ಲಿ ಮಕ್ಕಳ ಪಾತ್ರಗಳ ಮೇಲೆ ಒತ್ತನ್ನು ನೀಡಿದ್ದರು. ಅವರ ಕಳೆದು ಹೋದ ಮುಗ್ಧತೆ, ಅನುಭವಿಸುವ ಕಷ್ಟಗಳು ಮತ್ತು ಅವರ ಪಕ್ವ ಎನ್ನಬಹುದಾದ ವರ್ತನೆ ಇತ್ಯಾದಿಗಳನ್ನು "ದಿಚಿಲ್ಡ್ರನ್ ಆರ್ ವಾಚಿಂಗ್ ಅಸ್" (1944), "ಶೂಶೈನ್" (1946) ಸಿನಿಮಾಗಳಲ್ಲಿ ಕಟ್ಟಿಕೊಟ್ಟಿದ್ದರು. "ದಿಬೈಸಿಕಲ್ ಥೀಪ್" ನ ಬ್ರೂನೊ ಪಾತ್ರದಲ್ಲಿ ಸೂಕ್ಷ್ಮತೆಯಿದೆ; ಹಲವು ಪದರಗಳಿವೆ. ಇವು ವೀಕ್ಷಕರ ಗಮನವನ್ನು ಸೆಳೆಯುತ್ತವೆ.

ಒಂದು ರೆಸ್ಟೊರಾಂಟ್ ದೃಶ್ಯದಲ್ಲಿ ರಿಚಿ ಆದೇಶಿಸುವ ಆಹಾರಕ್ಕೂ ಮತ್ತು ಪಕ್ಕದ ಟೇಬಲ್ಲಿನ ಅನುಕೂಲಸ್ಥ ಹುಡುಗ ಭುಜಿಸುವ ಆಹಾರಕ್ಕೂ ಇರುವ ವ್ಯತ್ಯಾಸವನ್ನು ದಾಟಿಸುವುದರ ಮೂಲಕ ಇರುವವರು ಮತ್ತು ಇಲ್ಲದವರ ನಡುವಿನ ಅಂತರವನ್ನು ನಿರ್ದೇಶಕರು ಸೂಚಿಸುತ್ತಾರೆ. ಇದರಲ್ಲಿರುವ mise-en-scene, ಪರಿಕರಗಳು, ಉಡುಪುಗಳು, ಬೆಳಕಿನ ವಿನ್ಯಾಸಗಳು ಮತ್ತು ಸಿನಿಮಾಟೋಗ್ರಫಿ ಇತ್ಯಾದಿ ಗುಣಾತ್ಮಕ ಅಂಶಗಳು ಸಿನಿಮಾಗೆ ವಿಶಿಷ್ಟತೆಯನ್ನು ನೀಡಿವೆ.

ಎಪ್ಪತ್ತೈದು ವರ್ಷಗಳಾದರೂ, ಪ್ರಪಂಚದಾದ್ಯಂತ, ಈ ಸಿನಿಮಾ ಸಿನಿ ಪ್ರೇಮಿಗಳು ಮತ್ತು ಸಿನಿ ವಿದ್ವಾಂಸರ ಚರ್ಚೆಗಳಿಗೆ ಗ್ರಾಸವಾಗಿರುವುದು ಅದರ ಮಹತ್ವವನ್ನು ಸಾರುತ್ತದೆ!

NEW No. MAG(3)/NPP/205/2021-2022
JANASHAKTHI KANNADA VARA PATRIKE January 1-7, 2024 Price: Rs. 10/- Date of Publication: 29 December 2023 RNI No. KARKAN /2006/17926 Posted on 01-01-2024
Posted at BG PSO, BG - 560026 **Posted at Periodical Rate -** Rs. 2



01 ಜನವರಿ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30	31			

02 ಫೆಬ್ರವರಿ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29		

03 ಮಾರ್ಚ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30
31						

04 ಏಪ್ರಿಲ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30				

05 ಮೇ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

06 ಜೂನ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29
30						

07 ಜುಲೈ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30	31			

08 ಆಗಸ್ಟ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

09 ಸೆಪ್ಟೆಂಬರ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30					

10 ಅಕ್ಟೋಬರ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

11 ನವೆಂಬರ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

12 ಡಿಸೆಂಬರ್ 2024

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30	31				

ವಿಜ್ಞಾನ ಸಂಪನ್ನವಾದ ಪಾಶ್ಚಾತ್ಯ ನಾಗರಿಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅದರ ವಿಜ್ಞಾನ ಸೃಷ್ಟಿಸಿದ ಯಂತ್ರನಾಗರಿಕತೆಯನ್ನು ಅನುಕರಿಸಿದೆವೆ ಹೊರತು ಅದರ ವೈಜ್ಞಾನಿಕದೃಷ್ಟಿ ನಮ್ಮದಾಗಲಿಲ್ಲ; ಮತ್ತು ಆ ವೈಜ್ಞಾನಿಕ ದೃಷ್ಟಿಗೂ ತಾಯಿಬೇರಾದ ವೈಚಾರಿಕತೆಯನ್ನೂ ನಾವು ಮೈಗೂಡಿಸಿಕೊಳ್ಳಲಿಲ್ಲ. ಇನ್ನೂ ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು.

–ಕುವೆಂಪು, ವಿಚಾರಕ್ರಾಂತಿಗೆ ಆಹ್ವಾನ, ಪುಟ 6

ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ. ಇನ್ನೂ ಮುಂದೆಯಾದರೂ ನೀವು ಆಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ ಸಮಾಜವಾದವಾಗಲಿ ಸಮಾನತಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

–ಕುವೆಂಪು, ವಿಚಾರಕ್ರಾಂತಿಗೆ ಆಹ್ವಾನ, ಪುಟ 6

ಹಳೆಮತದ ಕೊಳೆಯೆಲ್ಲ
ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ, ಬರಲಿ ವಿಜ್ಞಾನ ಬುದ್ಧಿ
ವೇದಪ್ರಮಾಣದ ಮರುಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯಸಿದ್ಧಿ
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಬಾಳಿ

–ಕುವೆಂಪು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ 26

ಸರ್ವ ಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಆ ಆಚಾರ್ಯ, ಆ ಧರ್ಮಶಾಸ್ತ್ರ, ಆ ಮನುಸ್ಮೃತಿ ಮೊದಲಾದವು ಏನೇ ಹೇಳಲಿ, ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ.

–ಕುವೆಂಪು, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ 3

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**